"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತನಾಲ್ಕನೆಯ ಅಧಿವೇಶನ

19ನೇ ಡಿಸೆಂಬರ್ 2024
ಗುರುವಾರ

## ವಿಷಯಾನುಕ್ರಮಣಿಕೆ (INDEX)


1. ಸಂವಿಧಾನ ಶಿಲ್ಪಿ ಡಾ: ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಸಂಸತ್ತಿನಲ್ಲಿ ಕೇಂದ್ರ ಸಚಿವರು ಅಪಮಾನದ ಮಾತುಗಳನ್ನಾಡಿದ್ದಾರೆನ್ನುವ ಬಗ್ಗೆ ಚರ್ಚೆಗೆ ಅವಕಾಶ ಕೋರಿ ಒತ್ತಾಯ.

- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಸಿ.ಟಿ.ರವಿ
- ಡಾ: ಜಿ.ಪರಮೇಶ್ವರ (ಗೃಹ ಸಚಿವರು)

(ಪ್ರಶ್ನೋತ್ತರದ ನಂತರ ಚರ್ಚೆಗೆ ಅನುಮತಿಸಲಾಯಿತು)

2. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

1227 – **ಅಬಕಾರಿ ಇಲಾಖೆಯ ವರ್ಗಾವಣೆಯಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ.**

- ಶ್ರೀ ಕೆ.ಎಸ್.ನವೀನ್
- ಶ್ರೀ ತಿಮ್ಮಾಪುರ ರಾಮಪ್ಪ ಬಾಳಪ್ಪ (ಅಬಕಾರಿ ಸಚಿವರು)

**1285 – ರಾಜ್ಯದಲ್ಲಿ ಅನಧಿಕೃತವಾಗಿ ವಾಸವಿರುವ ಪಾಕ್ ಮತ್ತು ಬಾಂಗ್ಲಾ ದೇಶ ಮೂಲದ ಜನರ ಬಗ್ಗೆ.**

- ಶ್ರೀ ಡಿ.ಎಸ್.ಅರುಣ್
- ಡಾ॥ ಜಿ.ಪರಮೇಶ್ವರ (ಗೃಹ ಸಚಿವರು)

**1264 – ದಾವಣಗೆರೆ ಜಿಲ್ಲಾ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿರುವ ಗ್ರಾಮಗಳಲ್ಲಿ ಮೂಲಭೂತ ಸೌಕರ್ಯಗಳ ಕುರಿತು.**

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**1186 – ರಾಜ್ಯದಲ್ಲಿ ಜಿ.ಎಸ್.ಟಿ. ಸಂಗ್ರಹಣೆ ಕುರಿತು**

- ಶ್ರೀ ಟಿ.ಎ.ಶರವಣ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**1148 – ಪಶ್ಚಿಮ ವಾಹಿನಿ ಯೋಜನೆಯ ಕುರಿತು**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

**1188 – ಭೀಮಾ ನದಿಗೆ ಉಜನಿ ಡ್ಯಾಂನಿಂದ ಬಿಡುಗಡೆಯಾಗಿರುವ ನೀರಿನ ಕುರಿತು.**

- ಡಾ॥ ತಳವಾರ್ ಸಾಬಣ್ಣ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**1195 – ಪಾಲಿಕೆ ಆಸ್ತಿಯಲ್ಲಿ ಅನಧಿಕೃತ ಕಟ್ಟಡ ನಿರ್ಮಾಣವಾಗುತ್ತಿರುವ ಬಗ್ಗೆ.**

- ಶ್ರೀ ಗೋವಿಂದ ರಾಜು
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**1184 – ಮುಖ್ಯಮಂತ್ರಿಗಳ ವಿವೇಚನಾ ಕೋಟಾದಡಿ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ.**

- ಶ್ರೀ ಎಂ.ಎಲ್.ಅನಿಲ್ ಕುಮಾರ್
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**1175 – ಕೃಷ್ಣ ಮೇಲ್ದಂಡೆ ಯೋಜನೆ ಹಾಗೂ ಅದರ ಅಡಿಯಲ್ಲಿ ಬರುವ ಡ್ಯಾಂ ಹಾಗೂ ಕಾಲುವೆಗಳ ಕುರಿತು.**

- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**1219 – ಮೆಟ್ರೋ ರೈಲ್ವೆ ನಿಲ್ದಾಣದಲ್ಲಿ ಮೂಲಭೂತ ಸೌಲಭ್ಯದ ಕೊರತೆ ಬಗ್ಗೆ.**

- ಶ್ರೀಮತಿ ಉಮಾಶ್ರೀ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**1275+1229 – ಬಿಬಿಎಂಪಿ ಘನ ತ್ಯಾಜ್ಯದ ಕುರಿತು.**

- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಹೆಚ್.ಎಸ್.ಗೋಪಿನಾಥ್
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

## ಆ) ತಡೆಹಿಡಿಯಲಾದ ಪ್ರಶ್ನೆಗಳು

**449 – ವಿಜಯಪುರ, ಬಾಗಲಕೋಟೆ ಜಿಲ್ಲೆಗಳಲ್ಲಿ ಕೈಗೊಂಡಿರುವ ಐತ ನೀರಾವರಿ ಯೋಜನೆ ಕುರಿತು.**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**436 - ಯು.ಕೆ.ಪಿ. ಅಡಿಯಲ್ಲಿ ಬರುವ ಭೂ-ಸ್ವಾಧೀನ ಪ್ರಸ್ತಾವನೆ ರದ್ದುಪಡಿಸಿ ಜಮೀನುಗಳ ಮಾಲೀಕರಿಗೆ ನಷ್ಟ ಪರಿಹಾರ ನೀಡುವ ಕುರಿತು.**

- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**407 – ಗ್ಯಾರಂಟಿ ಯೋಜನೆಗಳನ್ನು ಪರಿಷ್ಕರಿಸುತ್ತಿರುವ ಬಗ್ಗೆ.**

- ಶ್ರೀ ಸಿ.ಟಿ.ರವಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ)

**594 – ಹಾವೇರಿ ಜಿಲ್ಲೆಯಲ್ಲಿರುವ "ನಿಜಶರಣ ಅಂಬಿಗರ ಚೌಡಯ್ಯ"ಅವರ ಸಮಾಧಿ ಗದ್ದಿಗೆ ದುರಸ್ತಿ ಮಾಡುವ ಕುರಿತು.**

- ಡಾ॥ ತಳವಾರ್ ಸಾಬಣ್ಣ
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

**661 – ಕರ್ನಾಟಕದಲ್ಲಿ ಅರಣ್ಯ ಹಕ್ಕು ಕಾಯಿದೆ 2009ರ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳ್ಳದಿರುವ ಕುರಿತು.**

- ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**ಇ) ದಿನಾಂಕ 19.12.2024ರ ಚುಕ್ಕೆ ಗುರುತಿನ ಪ್ರಶ್ನೆಗೆ ಮೌಖಿಕವಾಗಿ ನೀಡಲಾದ ಉತ್ತರ (ಮುಂದುವರೆದುದು)**

**1147 – 371(ಜೆ) ಅಡಿಯಲ್ಲಿ ನೀಡಿರುವ ಮೀಸಲಾತಿ ಕುರಿತು**

- ಶ್ರೀ ಜಗದೇವ್ ಗುತ್ತೇದಾರ್
- ಶ್ರೀ ಡಿ.ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು)

**ಈ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ನಬಾರ್ಡ್‌ನಿಂದ ರಿಯಾಯಿತಿ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲದ ಪುನರ್ಧನ ಮಿತಿ ಗಣನೀಯವಾಗಿ ಕಡಿಮೆಯಾಗಿರುವ ಬಗ್ಗೆ.**

- ಶ್ರೀಮತಿ ಬಲ್ಕೀಸ್ ಬಾನು
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಆ) ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಸಾವಿರ ಹಾಸಿಗೆಗಳ ಬಹುಮಹಡಿ ಕಟ್ಟಡ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ಬಗ್ಗೆ.**

- ಶ್ರೀ ಎಂ. ನಾಗರಾಜು
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಇ) ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ಅರ್ಹತೆ ಇಲ್ಲದವರನ್ನು ನೇಮಕ ಮಾಡಿರುವ ಕುರಿತು.**

– ಡಾ: ತಳವಾರ್ ಸಾಬಣ್ಣ
– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಈ) ರಾಜ್ಯ ಸಾರಿಗೆ ಸಂಸ್ಥೆಯ ನೌಕರರು ಡಿಸೆಂಬರ್ 31ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿರುವ ಬಗ್ಗೆ.**

– ಶ್ರೀ ಚಿದಾನಂದ್ ಎಂ.ಗೌಡ
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಉ) ಆಹಾರ ನಿಗಮದ ಗೋದಾಮಿನ ನಿರ್ವಹಣೆಗೆ ಮಾರ್ಗಸೂಚಿ ರೂಪಿಸಿ ನ್ಯಾಯಬೆಲೆ ಅಂಗಡಿಗಳನ್ನು ನಿಯಮಿತ ತಪಾಸಣೆ ಮಾಡಿಸುವ ಕುರಿತು.**

– ಶ್ರೀಮಂಜುನಾಥ ಭಂಡಾರಿ
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಊ) ರೈತರ ಬಗರ್ ಹುಕುಂ ಅರ್ಜಿಗಳ ವಿಲೇವಾರಿಗೆ ಅರಣ್ಯ ಹಕ್ಕುಗಳ ಕಾಯ್ದೆಯಡಿ ಸರ್ಕಾರ ಹೊರಡಿಸಿರುವ ಆದೇಶಕ್ಕೆ ಸೂಕ್ತ ತಿದ್ದುಪಡಿ ತರುವ ಬಗ್ಗೆ.**

– ಶ್ರೀ ಬಿ.ಕೆ.ಹರಿಪ್ರಸಾದ್
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಋ) ಕೇಂದ್ರ ಸರ್ಕಾರದ ಅರಣ್ಯ ರಕ್ಷಣಾ ಕಾಯಿದೆಯನ್ನು ರಾಜ್ಯದಲ್ಲೂ ಅನುಷ್ಠಾನಗೊಳಿಸಿ ರೈತರಿಗೆ ಭೂ ಒಡೆತನ ನೀಡಲು ಇರುವ ತೊಡಕುಗಳನ್ನು ಬಗೆಹರಿಸುವ ಕುರಿತು.**

– ಶ್ರೀ ಡಿ.ಎಸ್.ಅರುಣ್
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಎ) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರನ್ನು ಜಿಲ್ಲಾ ಅಧಿಕಾರಿ ಹುದ್ದೆಗೆ ನೇಮಿಸುವ ಬಗ್ಗೆ.**

- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಐ) ಕಿತ್ತೂರು ಕರ್ನಾಟಕದ ಅಭಿವೃದ್ಧಿ ಮಂಡಳಿಯನ್ನು ಕಾಲಮಿತಿಯಲ್ಲಿ ರಚಿಸುವ ಬಗ್ಗೆ.**

– ಶ್ರೀ ಟಿ.ಎ.ಶರವಣ
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಒ) ಮುಖ್ಯ ಶಿಕ್ಷಕ ಹುದ್ದೆಗೆ ಹಾಗೂ ಹೈಸ್ಕೂಲ್ ಬಡ್ತಿಗೆ ಈ ಮುಂಚಿನ ನಿಯಮಾವಳಿಯಂತೆ ಅಖಂಡ ಸೇವಾ ಹಿರಿತನವನ್ನು ಪರಿಗಣಿಸುವ ಬಗ್ಗೆ.**

– ಶ್ರೀ ರಾಮೋಜಿ ಗೌಡ
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಓ) ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಅಳವಡಿಸಿರುವ ಅನುಭವ ಮಂಟಪ ತೈಲವರ್ಣ ಕಲಾಕೃತಿಯನ್ನು ತೆಗೆದು ಮೂಲ ಕಲಾವಿದರ ಕಲಾಕೃತಿ ಅಳವಡಿಸುವ ಬಗ್ಗೆ.**

– ಶ್ರೀ ಶಶೀಲ್ ಜಿ.ನಮೋಶಿ
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಔ) ಉತ್ತರ ಕನ್ನಡ ಜಿಲ್ಲೆಯ ರೈತರ ಸಮಸ್ಯೆಗಳನ್ನು ಬಗೆಹರಿಸುವಂತೆ ನಡೆಯುತ್ತಿರುವ ಹೋರಾಟದ ಬಗ್ಗೆ.**

– ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಅಂ) ನಾಲ್ಕು ತಿಂಗಳಿನಿಂದ ತಾಯಿ, ಮಗುವಿನ ಸುರಕ್ಷತಾ ಕಾರ್ಡ್ ಅಲಭ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೌನ; ಆರೋಪ-ತಾಯಿ ಕಾರ್ಡ್‌ಗೆ ಪರದಾಟ ಆಗಿರುವ ಬಗ್ಗೆ.**

– ಶ್ರೀ ಪಿ.ಹೆಚ್.ಪೂಜಾರ್
– ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

## 4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು:

**ಅ) ಶಾಸಕರ ನಿಧಿಯ ಸಮರ್ಪಕ ಬಳಕೆ ಹಾಗೂ ಪ್ರಗತಿ ಹಂತ ತಿಳಿಯಲು ಪೋರ್ಟಲ್ ರಚಿಸುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಪರವಾಗಿ)

**ಆ) ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ)

**ಇ) ತೊಗರಿ ಬೆಳೆಗೆ ಬೇರು ಕೊಳೆ ರೋಗ ಮತ್ತು ಮಚ್ಚೆ ರೋಗ ಹಾಗೂ ಖಾಸಗಿಯವರು ಕಳಪೆ ತೊಗರಿ ಬೀಜ ಮಾರಾಟ ಮಾಡುತ್ತಿರುವುದರಿಂದ ರೈತರು ತೊಂದರೆ ಅನುಭವಿಸುತ್ತಿರುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು) (ಕೃಷಿ ಸಚಿವರ ಪರವಾಗಿ)

**ಈ) ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿನ ಪ್ರವೇಶಾತಿ ನಂತರ ಮಾಡಿರುವ ಶುಲ್ಕ ಪರಿಷ್ಕರಣೆ ಆದೇಶವನ್ನು ಹಿಂಪಡೆಯುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)(ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಉ) ಆಹಾರ ಸುರಕ್ಷತಾ ಪ್ರಾಧಿಕಾರ ಪ್ರಾರಂಭವಾದ ದಿನದಿಂದಲೂ ಶಾಶ್ವತ ಸಿಬ್ಬಂದಿ ನೇಮಕ ಮಾಡದೆ ಎರವಲು ಸೇವೆಯ ಸಿಬ್ಬಂದಿಯಿಂದ ಆಡಳಿತಾತ್ಮಕ ಸಮಸ್ಯೆ ಆಗಿರುವ ಕುರಿತು.**

- ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ)

**ಊ) ಸರ್ಕಾರಿ ಜಾಗಗಳನ್ನು ಮೀಸಲು ಅರಣ್ಯ ಮಾಡಬೇಕೆಂಬ ನಿಟ್ಟಿನಲ್ಲಿ ಸರ್ಕಾರ ಹೊರಡಿಸಿರುವ ಮೂರು ಆದೇಶಗಳನ್ನು ಹಿಂಪಡೆಯುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು)(ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ)

**ಋ) ಪಶ್ಚಿಮಘಟ್ಟ ಪ್ರದೇಶದಲ್ಲಿರುವ ಖಾನಾಪುರ ತಾಲ್ಲೂಕಿನ ಬಹುತೇಕ ಜನರು ಮೂಲಭೂತ ಸೌಕರ್ಯದಿಂದ ವಂಚಿತರಾಗಿರುವ ಕುರಿತು.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ)

**ಎ) ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳದಿರುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ)

**ಏ) ಬಳ್ಳಾರಿ ಜಿಲ್ಲೆಯಲ್ಲಿರುವ ರಾಬಕೊವಿ ಹಾಲು ಒಕ್ಕೂಟಕ್ಕೆ ಆಡಳಿತ ಮಂಡಳಿ ಅವಧಿಯು ಮೇ-2024ಕ್ಕೆ ಮುಗಿದಿದ್ದು, ಚುನಾವಣೆ ಮೂಲಕ ಹೊಸ ಆಡಳಿತ ಮಂಡಳಿಯನ್ನು ರಚಿಸುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಹಕಾರ ಸಚಿವರ ಪರವಾಗಿ)

**ಐ) "ಕ್ಷೀರಧಾರೆ ಯೋಜನೆ"ಯಡಿ ಹೈನುಗಾರರಿಗೆ ನೀಡಬೇಕಾಗಿರುವ ಪ್ರೋತ್ಸಾಹಧನ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ.**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಪರವಾಗಿ)

## 5. ಕಾರ್ಯದರ್ಶಿಯವರ ವರದಿ

"ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024ನ್ನು ಸಭೆಯ ಮುಂದಿಡುವುದು"

## 6. ಶಾಸನ ರಚನೆ

**ವಿಧೇಯಕದ ಪರ್ಯಾಲೋಚನೆ**

**"ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024"**

- ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಸಚಿವರು)

(ಪ್ರಸ್ತಾವವನ್ನು ಮಂಡಿಸಲಾಯಿತು)

7. ಸಂಸತ್ತಿನಲ್ಲಿ ಕೇಂದ್ರ ಸಚಿವರು ಡಾ: ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಆಡಿದ್ದಾರೆನ್ನಲಾದ ಮಾತುಗಳ ಬಗ್ಗೆ ಪ್ರಸ್ತಾಪ.

– ಶ್ರೀ ಸಿ.ಟಿ.ರವಿ

(ಸದನ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)

8. ಸಂಸತ್ತಿನಲ್ಲಿ ಕೇಂದ್ರ ಸಚಿವರು ಡಾ: ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಆಡಿದ್ದಾರೆನ್ನಲಾದ ಮಾತುಗಳ ಬಗ್ಗೆ ಮುಂದುವರೆದ ಪ್ರಸ್ತಾವ.

– ಶ್ರೀ ಬಿ.ಕೆ.ಹರಿಪ್ರಸಾದ್

9. ಶಾಸನ ರಚನೆ

**ವಿಧೇಯಕದ ಅಂಗೀಕಾರ**

**"ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024"**

- ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

10. ಸಂಸತ್ತಿನಲ್ಲಿ ಕೇಂದ್ರ ಸಚಿವರು ಡಾ: ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಆಡಿದ್ದಾರೆನ್ನಲಾದ ಮಾತುಗಳ ಬಗ್ಗೆ ಮುಂದುವರೆದ ಪ್ರಸ್ತಾವ.

- ಶ್ರೀ ಬಿ.ಕೆ.ಹರಿಪ್ರಸಾದ್

**(ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಸದಸ್ಯರಿಂದ ಪರಸ್ಪರ ಘೋಷಣೆ ಹಾಗೂ ಭಿತ್ತಿಪತ್ರಗಳ ಪ್ರದರ್ಶನ)**

**(ಸದನ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

11. ಮುಂದೂಡಲಾದ ಸದನ ಪುನಃ ಸಮಾವೇಶಗೊಳ್ಳುವ ಪೂರ್ವದಲ್ಲಿ ಸದನದೊಳಗೆ ನಡೆದಿದೆ ಎನ್ನಲಾದ ಘಟನೆಯ ಬಗ್ಗೆ ಸಭಾಪತಿಯವರ ತೀರ್ಪು.

12. ಸಾರಾಂಶ

~ * ~ * ~

(1000) 19.12.2024 10.10 ಪಿಕೆ/ಎಂಡಿ

# ಕರ್ನಾಟಕ ವಿಧಾನ ಪರಿಷತ್ತು

**ಗುರುವಾರ, 19ನೇ ಡಿಸೆಂಬರ್ 2024**

**ಸದನವು ಬೆಳಗಾವಿ ಸುವರ್ಣ ವಿಧಾನಸೌಧದ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು.**

**ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಿದ್ದರು.**

**1. "ಸಂವಿಧಾನ ಶಿಲ್ಪಿ ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಬಗ್ಗೆ ಸಂಸತ್ತಿನಲ್ಲಿ ಕೇಂದ್ರ ಸಚಿವರು ಅಪಮಾನದ ಮಾತುಗಳನ್ನಾಡಿದ್ದಾರೆನ್ನುವ ಬಗ್ಗೆ ಚರ್ಚೆಗೆ ಅವಕಾಶ ಕೋರಿ ಒತ್ತಾಯ.**

- - - - -

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಸಂವಿಧಾನ ಬರೆದಿರುವವರಿಗೆ ಅಪಮಾನವಾಗಿದೆ. ಪ್ರಶ್ನೋತ್ತರದ ಮುಂಚೆ ದಯವಿಟ್ಟು ಈ ಕುರಿತು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರುಗಳು ಡಾ:ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರಗಳನ್ನು ಸದನದಲ್ಲಿ ಪ್ರದರ್ಶಿಸುತ್ತಿದ್ದರು)**

**ಸಭಾಪತಿಯವರು:-** ಮೊದಲು ಪ್ರಶ್ನೋತ್ತರ ಮುಗಿಯಲಿ.

**ಶ್ರೀ ಸಿ.ಟಿ.ರವಿ (ವಿಧಾನಸಭಾಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಇದರ ಬಗ್ಗೆ ಚರ್ಚೆ ಮಾಡೋಣ. ಕಾಂಗ್ರೆಸ್‌ನವರು ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬದುಕಿದ್ದಾಗ ಎಷ್ಟು ಅಪಮಾನ ಮಾಡಿದರು, ಅವರು ಸತ್ತ ಮೇಲೆ ಯಾವರೀತಿ ಅಪಮಾನ ಮಾಡಿದರು ಎಂಬ ಬಗ್ಗೆ ಚರ್ಚೆ ಆಗಬೇಕು. ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರನ್ನು ಚುನಾವಣೆಯಲ್ಲಿ ಸೋಲಿಸಿದರ ಬಗ್ಗೆಯೂ ಚರ್ಚೆ ಆಗಬೇಕು. ಬದುಕಿದ್ದಾಗ ಯಾವರೀತಿ ಅವರನ್ನು ಅಪಮಾನ ಮಾಡಿದರು ಎನ್ನುವುದರ ಬಗ್ಗೆಯೂ ಚರ್ಚೆ ಆಗಬೇಕು. ಈ ಕುರಿತು ವಿಸ್ತೃತ ಚರ್ಚೆಗೆ ಅವಕಾಶ ಕೊಡಬೇಕು. ವಿಡಿಯೋವನ್ನು ಹೇಗೆ ತಿರುಚಿದ್ದಾರೆ ಎನ್ನುವುದರ ಬಗ್ಗೆಯೂ ಚರ್ಚೆ ಆಗಬೇಕು.

**(ಗೊಂದಲ)**

**ಡಾ: ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಗಳೆ, ಹಿಂದಿನ ಕಥೆ ಬೇಡ. ಪ್ರಸ್ತುತ ಡಾ: ಬಾಬಾ ಸಾಹೇಬ ಅಂಬೇಡ್ಕರ್‌ರವರಿಗೆ ಆಗಿರುವಂತಹ ಅಪಮಾನದ ಬಗ್ಗೆ ಹೇಳಲಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ಹಿಂದೆಲ್ಲಾ ಅಪಮಾನ ಮಾಡಿದ್ದು, ಈಗ ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ.

**(ಗೊಂದಲ)**

**ಡಾ: ಜಿ.ಪರಮೇಶ್ವರ:-** ಮಾನ್ಯ ಸಭಾಪತಿಗಳೆ, ಡಾ: ಬಾಬಾ ಸಾಹೇಬ ಅಂಬೇಡ್ಕರ್‌ರವರನ್ನು ಇಡೀ ಪ್ರಪಂಚ ಕೊಂಡಾಡುತ್ತದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಗಳೆ, ಡಾ: ಬಾಬಾ ಸಾಹೇಬ ಅಂಬೇಡ್ಕರ್‌ರವರನ್ನು ಯಾರೂ ಅಪಮಾನ ಮಾಡಿಲ್ಲ.

**(ಗೊಂದಲ)**

(ಮುಂದು)

(1001) 19-12-2024 10.20 ಡಿಎಸ್-ಎಕೆ (ಸಭಾಪತಿಯವರ ಉಪಸ್ಥಿತಿ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಮಾನ್ಯ ಸದಸ್ಯರುಗಳು ಮಾತನಾಡಿರುವುದು ಯಾವುದು ಕಡತಕ್ಕೆ ಹೋಗಬಾರದೆಂದು ಆದೇಶಿಸಿದರು)**

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠದಿಂದ ಎದ್ದು ನಿಂತರು)**

**ಸಭಾಪತಿಯವರು:-** ಈಗ ಎಲ್ಲರೂ ಕುಳಿತುಕೊಳ್ಳಿ. ಪ್ರಶ್ನೋತ್ತರ ಆದ ನಂತರ ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಪ್ರಶ್ನೋತ್ತರ ಆಗುವವರೆಗೆ ದಯಮಾಡಿ ನನಗೆ ಸಹಕಾರ ಕೊಡಬೇಕು. ಪ್ರಶ್ನೋತ್ತರವಾದ ನಂತರ ಮಾತನಾಡಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

**ಸಭಾಪತಿಯವರು:-** ಎಲ್ಲರಿಗೂ ಅವಕಾಶ ಕೊಡುತ್ತೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನನ್ನ ವಿನಂತಿ ಏನೆಂದರೆ, ಅವರೇನು public domain ನಲ್ಲಿ ಮಾತನಾಡಿರುವುದಲ್ಲ. ಪಾರ್ಲಿಮೆಂಟ್‌ನಲ್ಲಿ ಮಾತನಾಡಿರುವುದು. Public domain ನಲ್ಲಿ ಲಭ್ಯವಿದೆ. ನೀವು ಪೂರ್ಣ ವಿವರವನ್ನು ಇಲ್ಲಿ ಟೆಲಿಕಾಸ್ಟ್ ಮಾಡಿಸಿ. ಆಗ ನಾವೇನು ಮಾತನಾಡುವ ಅವಶ್ಯಕತೆ ಇಲ್ಲ. ಇವರ ನಾಟಕಕ್ಕೆ ಆಸ್ಕರ್ ಪ್ರಶಸ್ತಿ ಕೊಡಬಹುದು.

**ಸಭಾಪತಿಯವರು:-** ಮಾನ್ಯ ಸಿ.ಟಿ. ರವಿಯವರೇ, ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಾಗ ಮಾತನಾಡಿ, ಈಗ ಏಕೆ ಮಾತನಾಡುತ್ತಿದ್ದೀರಿ?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ವೀಡಿಯೋವನ್ನು ಟೆಲಿಕಾಸ್ಟ್ ಮಾಡಿಸಿ ಗೊತ್ತಾಗಲಿ. ಶ್ರೀ ಅಮಿತ್ ಶಾ ರವರು ತಪ್ಪು ಮಾಡಿದ್ದಾರೆಯೋ ಅಥವಾ ಸತ್ಯ ಹೇಳಿದ್ದಾರೆಯೋ ಎನ್ನುವುದು ಗೊತ್ತಾಗುತ್ತದೆ. ವೀಡಿಯೋವನ್ನು ಟೆಲಿಕಾಸ್ಟ್ ಮಾಡಿಸಿ.

**ಸಭಾಪತಿಯವರು:-** ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟಾಗ ನೀವು ಹೇಳಿ. ನಾನು ಪ್ರಶ್ನೋತ್ತರವಾದ ನಂತರ ಅವಕಾಶ ಕೊಡುತ್ತೇನೆ. ಒಬ್ಬೊಬ್ಬರೆ ಮಾತನಾಡಿದರೆ ನಾನು ಕೇಳುತ್ತೇನೆ, ಎಲ್ಲರೂ ಎದ್ದು ನಿಂತರೆ ನಾನೇನು ಮಾಡಲಿ? ಪ್ರಜಾಪ್ರಭುತ್ವದಲ್ಲಿ ಸದನದಲ್ಲಿ ಮಾತನಾಡುವುದಕ್ಕೆ ಎಲ್ಲರಿಗೂ ಹಕ್ಕು ಇದೆ. ನೀವು

ಮಾತನಾಡಿ, ಅದಕ್ಕೆ ನಾನು ಉತ್ತರ ಹೇಳುತ್ತೇನೆ. ಇವತ್ತು ಕೊನೆ ದಿನವಾಗಿರುವುದರಿಂದ ನಾನು ಬೆಲ್ ಹೊಡೆದ ತಕ್ಷಣ ಕುಳಿತುಕೊಳ್ಳಬೇಕು. ಈಗ ಪ್ರಶ್ನೋತ್ತರ 10.20 ಗಂಟೆಗೆ ಪ್ರಾರಂಭವಾಗಿದೆ, 11.20ಕ್ಕೆ ಪ್ರಶ್ನೋತ್ತರವನ್ನು ಮುಕ್ತಾಯಗೊಳಿಸುತ್ತೇನೆ. ಯಾರು ಮಾತನಾಡುತ್ತಾರೆ ಅವರ ಸಮಯವನ್ನು ಬರೆದುಕೊಂಡಿರುತ್ತೇನೆ, ಯಾರು ಎಷ್ಟು ಸಮಯ ತೆಗೆದುಕೊಳ್ಳುತ್ತಾರೆಯೋ ಗೊತ್ತಿಲ್ಲ. ಅದು ಪಕ್ಷದ ನಾಯಕರ ಜವಾಬ್ದಾರಿಯಾಗಿರುತ್ತದೆ.

## 2. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

### ಪ್ರಶ್ನೆ ಸಂಖ್ಯೆ 1227

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ವರ್ಗಾವಣೆ ಎಷ್ಟು ಆಗಿದೆ, ವರ್ಗಾವಣೆಯಲ್ಲಿ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಭ್ರಷ್ಟಾಚಾರ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ಎಂದು ಪ್ರಶ್ನೆ ಕೇಳಿದ್ದೇನೆ. ವರ್ಗಾವಣೆಯಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿರುವುದಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಎಷ್ಟು ಪರವಾನಗಿಯನ್ನು ಕೊಟ್ಟಿದ್ದಾರೆಂದು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೂ ಉತ್ತರ ಕೊಟ್ಟಿದ್ದಾರೆ. ಇವರ ಸರ್ಕಾರ ಬಂದ ನಂತರ ಎಲ್ಲಾ ಉನ್ನತ ಮಟ್ಟದ ಅಧಿಕಾರಿಗಳನ್ನು ಅಬಕಾರಿ ಜಂಟಿ ಆಯುಕ್ತರು, ಉಪ ಆಯುಕ್ತರು, ಅಧೀಕ್ಷಕರು, ಉಪ ಅಧೀಕ್ಷಕರು ಮತ್ತು ನಿರೀಕ್ಷಕರು, ಅಂದರೆ ಇನ್ಸ್‌ಪೆಕ್ಟರ್ ಮಟ್ಟದ ಅಧಿಕಾರಿಗಳವರೆಗೆ ಇವರು ಒಂದು ವರ್ಷದಲ್ಲಿ ಸುಮಾರು 261 ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ವರ್ಗಾವಣೆ ಮಾಡಿದಂತಹ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿ ***'ಅಬಕಾರಿ ವರ್ಗಾವಣೆ ದಂಧೆಗೆ ಇಲ್ಲ ಬ್ರೇಕ್'***, ಈ ರೀತಿ ಒಂದೊಂದು ಸ್ಥಾನಕ್ಕೆ ರೇಟ್.....

**ಶ್ರೀ ಆರ್.ಬಿ.ತಿಮ್ಮಾಪುರ (ಅಬಕಾರಿ ಸಚಿವರು):-** ಮಾನ್ಯ ಸಭಾಪತಿಯವರೇ, ಎಲ್ಲಾ ಪತ್ರಿಕೆಗಳಲ್ಲಿ ಬಂದಿರುವುದು ಸತ್ಯ ಇರುವುದಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಪತ್ರಿಕೆಯಲ್ಲಿ ಬಂದಿರುವುದನ್ನು ತಂದು ಭ್ರಷ್ಟಾಚಾರ ನಡೆದಿದೆ ಎಂದು ಹೇಳುವುದು ಸರಿಯಲ್ಲ. ಯಾರ್ಯಾರದು ಏನೇನು ಇತಿಹಾಸ ಇದೆ ಎಂದು ನಾನು ತೆಗೆದು ಹೇಳುತ್ತೇನೆ. ಯಾವ್ಯಾವ ಸಚಿವರು ಇದ್ದಾಗ ಏನೇನು ಇತಿಹಾಸ ಇದೆ ಎಂಬುದು ನನ್ನ ಮುಂದೆ ಇದೆ. ಎಲ್ಲಾ ಸಚಿವರ ಇತಿಹಾಸಕ್ಕೆ ನಾನು ಉತ್ತರ ಕೊಡುವುದಕ್ಕಾಗುವುದಿಲ್ಲ. This is not a correct way.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾನು ಪತ್ರಿಕೆಯಲ್ಲಿ ಬಂದಿರುವುದನ್ನು ಉಲ್ಲೇಖ ಮಾಡಿ ನಾನು ಪ್ರಶ್ನೆ ಕೇಳುತ್ತಿಲ್ಲ. ಮಾನ್ಯ ಸಚಿವರು ಕೊಟ್ಟಿರುವ ಉತ್ತರಕ್ಕೆ ನಾನು ಪ್ರಶ್ನೆ ಕೇಳುತ್ತಿದ್ದೇನೆ. ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಡಲಿ. ನಾನು ಪತ್ರಿಕೆಯಲ್ಲಿ ಬಂದಿರುವುದನ್ನು ಉಲ್ಲೇಖ ಮಾಡುತ್ತಿದ್ದೇನೆ ಅಷ್ಟೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರ ಬ್ರಹ್ಮಾಂಡವಾಗಿದೆ, ದುರಾಸೆ ಪಡುತ್ತಿದ್ದಾರೆಂದು ಇವರೇ ಒಪ್ಪಿಕೊಂಡಿಕೊಂಡಿದ್ದಾರೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಮಾತು ಮುಗಿಸುವತನಕ ಸಮಾಧಾನದಿಂದ ಕೇಳಲಿ.

**ಸಭಾಪತಿಯವರು:-** ಮಾನ್ಯ ನವೀನ್‌ರವರೇ, ತಾವು ಕುಳಿತುಕೊಳ್ಳಿ. ಮಾನ್ಯ ಜಗದೇವ್ ಗುತ್ತೇದಾರ್‌ರವರೇ, ತಮ್ಮ ಪ್ರಶ್ನೆ ವರ್ಗಾವಣೆಯಾಗಿದೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಇನ್ನು ಉತ್ತರ ಕೊಟ್ಟಿಲ್ಲ. ಈ ರೀತಿಯಾದರೆ ನಾನು ಬಾವಿಗೆ ಬಂದು ಧರಣಿ ಮಾಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್‌ರವರು ಸದನದ ಬಾವಿಗೆ ಆಗಮಿಸಿದರು)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಪ್ರಶ್ನೆಗೆ ಉತ್ತರ ಕೊಡಿಸದಿದ್ದರೆ ಹೇಗೆ? ಆ ಪೀಠದಿಂದ ನಾವು ನ್ಯಾಯ ನಿರೀಕ್ಷೆ ಮಾಡುತ್ತೇವೆ. ಪ್ರಶ್ನೆಗೆ ಉತ್ತರವೇ ಕೊಟ್ಟಿಲ್ಲ. ಉತ್ತರ ಕೊಡದಿದ್ದರೆ ಮುಂದಕ್ಕೆ ಹೇಗೆ ಹೋಗುತ್ತೀರಿ?

**ಸಭಾಪತಿಯವರು:-** ಮಾನ್ಯ ರವಿಯವರೇ, ನನ್ನ ತಲೆ ಕೆಡಿಸಬೇಡಿ. ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಹೀಗೆಯೇ ಹೇಳಿ ಎಂದು ನಾನು ಹೇಳುವುದಕ್ಕಾಗುವುದಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಈ ಸದನ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಟ್ಟ ಹಾಗೆ ಆಗುತ್ತದೆ.

**ಸಭಾಪತಿಯವರು:-** ಮಾನ್ಯ ನವೀನ್‌ರವರೇ, ನೀವು ಭಾಷಣ ಮಾಡುತ್ತಿದ್ದಿರಿ, ಅದಕ್ಕೆ ನಾನು ಕುಳಿತುಕೊಳ್ಳಿ ಎಂದು ಹೇಳಿದೆ. ಉತ್ತರ ಹೇಳುವುದಕ್ಕಿಂತ ಮೊದಲು ಭಾಷಣವೇ ಮಾಡುತ್ತಿದ್ದರೆ ಹೇಗೆ? ಮಾನ್ಯ ಸಚಿವರಿಗೆ ಸ್ಪಷ್ಟೀಕರಣವನ್ನು ಕೇಳಬೇಕು.  ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ. ಮಾನ್ಯ ಸಚಿವರೇ ಉತ್ತರ ಹೇಳಿ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)**

**ಸಭಾಪತಿಯವರು:-** ಮಾನ್ಯ ಸಿ.ಟಿ.ರವಿಯವರೇ, ನೀವು ಎಲ್ಲದ್ದಕ್ಕೂ ಎದ್ದು ನಿಲ್ಲಬೇಡಿ. ನೀವು ಎದ್ದೆದ್ದು ಮಾತನಾಡುವುದಕ್ಕೆ ಸಭಾನಾಯಕರಲ್ಲ. ಸದನದಲ್ಲಿ ಯಾವ ರೀತಿ ಇರಬೇಕೆನ್ನುವುದನ್ನು ಕಲಿಯಿರಿ. ನೀವು ಪಾರ್ಲಿಮೆಂಟ್ ಸದಸ್ಯರಾಗಿದ್ದಂಥವರು.

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ವರ್ಗಾವಣೆ ಇದೊಂದು ಪಾಲಿಸಿ. ಅದರ ಪ್ರಕಾರ ನಾವು ವರ್ಗಾವಣೆ ಮಾಡಿದ್ದೇವೆ. ವರ್ಗಾವಣೆ ಭ್ರಷ್ಟಾಚಾರ ಪತ್ರಿಕೆಯಲ್ಲಿ ಬಂದಿದೆ, ಯಾವನೋ ಹೇಳಿದ, ಎಲ್ಲೋ ಬಂತು ಎನ್ನುವುದ್ದಕ್ಕೆಲ್ಲಾ ನಾನು ಉತ್ತರ ಕೊಡುವುದಕ್ಕಾಗುವುದಿಲ್ಲ. ಅವರು ನಿಖರವಾಗಿ ಹೇಳಿದರೆ ತಕ್ಷಣವೇ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೇ, ನಾನು ಪತ್ರಿಕೆಯಲ್ಲಿ ಬಂದಿರುವ ಆಧಾರದ ಮೇಲೆ ನಾನು ಪ್ರಶ್ನೆಗಳನ್ನು ಕೇಳಿಲ್ಲ. ನಾನು ಕೇಳಿರುವ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. ಅವರ ಇಲಾಖೆಯ ಅಧಿಕಾರಿಯೇ ದೂರವಾಣಿ ಸಂಪರ್ಕದ ಮೂಲಕ ಮಾತನಾಡಿರುವಂಥ ಸಂಭಾಷಣೆಯನ್ನು ಇಡೀ ರಾಜ್ಯ ಗಮನಿಸಿದೆ. ಇದೇ ರಾಜ್ಯದ ಅಬಕಾರಿ Wine Merchants' Association ರವರು ಸುಮಾರು ಎಂಟು ಸಲ ಬೇರೆ ಬೇರೆ ದಿನಾಂಕಗಳಂದು ಈ ವಿಷಯಗಳನ್ನು ಉಲ್ಲೇಖ ಮಾಡಿ ಮಾನ್ಯ ಸಚಿವರಿಗೆ ಪತ್ರವನ್ನು ಬರೆದಿದ್ದಾರೆ. ಅದಕ್ಕೂ ಕೂಡ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ. ರಾಜ್ಯದಲ್ಲಿ ಒಂದು ವರ್ಷದಲ್ಲಿ 673 ಸಿಎಲ್-7 ಲೈಸೆನ್ಸ್‌ಗಳನ್ನು ಕೊಡುತ್ತಾರೆ. ಸರಾಸರಿ ಒಂದು ಜಿಲ್ಲೆಗೆ 18 ಲೈಸೆನ್ಸ್‌ಗಳನ್ನು ಕೊಟ್ಟಿದ್ದಾರೆ. ನಮ್ಮ ಇಲಾಖೆಯಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆದಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೇ, ಸಿಎಲ್-7 ಲೈಸೆನ್ಸ್ ಕೊಡತಕ್ಕಂಥದ್ದು ಹಿಂದಿನ ಸರ್ಕಾರದಲ್ಲಿ ಎಷ್ಟು ಕೊಟ್ಟಿದ್ದಾರೆ ಅದಕ್ಕಿಂತ ನಾನು ಇನ್ನೂ ಕಡಿಮೆಯೇ ಕೊಟ್ಟಿದ್ದೇನೆ. ಇದು ಒಂದು ಕಡೆ. ಎಲ್ಲೋ ಅಧಿಕಾರಿಗಳು ದೂರವಾಣಿ ಮುಖಾಂತರ ಮಾತನಾಡಿದರು ಎನ್ನುವ ವಿಷಯ ಕೇಳಿ 24 ಗಂಟೆಯಲ್ಲಿ ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವಂತಹ ಕೆಲಸ ಮಾಡಿದ್ದೇವೆ. ಇನ್ನು Wine Merchants' Association ರವರು ಪತ್ರ ಬರೆದಿದ್ದಾರೆ ಎಂದು ಹೇಳಿದರು. Wine Merchants' Association ರವರದ್ದು ನನ್ನ ಹತ್ತಿರ ಲಿಸ್ಟ್ ಇದೆ. ಎಷ್ಟು ಜನ ಸಚಿವರಾಗಿದ್ದಾರೆ ಆ ಎಲ್ಲಾ ಸಚಿವರಿಗೂ ಇದೇ ರೀತಿ ಬರೆದಿದ್ದಾರೆ. ಇದೇ same copy ನನ್ನ ಹತ್ತಿರ ಇದೆ. ಭ್ರಷ್ಟಾಚಾರ ನಡೆಯುತ್ತಿದೆ ಎಂದು ಎಷ್ಟು ಜನ ಅಬಕಾರಿ ಸಚಿವರಾಗಿದ್ದರು ಅವರೆಲ್ಲರಿಗೂ ಪತ್ರವನ್ನು ಬರೆದಿದ್ದಾರೆ. ಆ ಫೆಡರೇಶನ್ ಅಸ್ತಿತ್ವದಲ್ಲೇ ಇಲ್ಲ. ನಾನು DR ನಿಂದ ವರದಿಯನ್ನು ತರಿಸಿಕೊಂಡಿದ್ದೇನೆ. ಈ ಸಂಸ್ಥೆ ಅಸ್ತಿತ್ವದಲ್ಲಿಲ್ಲ. ರಿಜಿಸ್ಟರ್ ಮಾಡಿದ್ದಾರೆ.

(ಮುಂದು)

(1002) 19/12/2024 10:30 ಎಸ್‌ಪಿಆರ್/ಎಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಆರ್.ಬಿ.ತಿಮ್ಮಾಪುರ(ಮುಂದು):**

20 ವರ್ಷದ ನಂತರ ಅದರ ಲೆಕ್ಕಪರಿಶೋಧನೆಯಾಗಿಲ್ಲ ಮತ್ತು ಯಾವುದೇ ಚುನಾವಣೆಗಳಾಗಿಲ್ಲ. ಅದು ಏನೂ ಕಾರ್ಯಚಟುವಟಿಕೆಗಳಿಲ್ಲದ ಸಂಸ್ಥೆಯಾಗಿದೆ. ಈ ಸಂಸ್ಥೆಯು ಅಸ್ತಿತ್ವದಲ್ಲಿ ಇಲ್ಲ ಎಂದು ನನ್ನ ಬಳಿ ವರದಿ ಇದೆ. ನಾವು ಆ ರೀತಿಯಾಗಿ ಹೇಳಿಲ್ಲ ಎಂದು ಅವರು ತಿಳಿಸಿದರು. ರಾಜಕಾರಣಕ್ಕಾಗಿ ನಮ್ಮನ್ನು ಉಪಯೋಗ ಮಾಡಿಕೊಳ್ಳಬೇಡಿ ಎನ್ನುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಹೀಗೆ ಅನಾವಶ್ಯಕವಾಗಿ ಯಾವುದೇ ವ್ಯಕ್ತಿ ಅಥವಾ ಇಲಾಖೆಯ ಬಗ್ಗೆ ಕೆಟ್ಟ ಅಭಿಪ್ರಾಯ ಬರುವ ರೀತಿಯಲ್ಲಿ ನಡೆದುಕೊಳ್ಳುವುದು ಅವರಿಗೂ ಮತ್ತು ನನಗೂ ಸೌಜನ್ಯವಾದುದಲ್ಲ. ನಾನು ಏನು ಬೇಕಾದರೂ ಹೇಳಬಹುದು.

**ಸಭಾಪತಿಯವರು:-** ತಪ್ಪಿತಸ್ಥರ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳಿ.

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಅದಕ್ಕೆ ಮಾನ್ಯತೆ ಇಲ್ಲವೆಂದು ಸಚಿವರು ಹೇಳುತ್ತಿದ್ದಾರೆ. ಮಾನ್ಯತೆ ಇಲ್ಲದಿರುವ ಸಂಘವನ್ನು ಮುಖ್ಯಮಂತ್ರಿಯವರು ಕರೆಸಿ ಏಕೆ ಮಧ್ಯಸ್ಥಿಕೆಯನ್ನು ವಹಿಸಿ ಸಭೆಯನ್ನು ಮಾಡಿದರು? ಯಾವ ಯಾವ ಸರ್ಕಾರದಲ್ಲಿದೆ ಎಂದು ಸಚಿವರು ತಿಳಿಸಿದರು. ಪ್ರಸ್ತುತ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಅವರು ಜೂನ್ ತಿಂಗಳಿನಿಂದ ಸಚಿವರಿಗೆ ಪತ್ರಗಳನ್ನು ನೀಡುತ್ತಿದ್ದಾರೆ. ಅಸ್ತಿತ್ವವೇ ಇಲ್ಲದಿರುವ ಸಂಘಕ್ಕೆ **(ಗೊಂದಲ)** ಮುಖ್ಯಮಂತ್ರಿಗಳ ಮಧ್ಯಸ್ಥಿಕೆಯಲ್ಲಿ ಅವರನ್ನು ಕರೆದು ಸಂಧಾನ ಮಾಡಿದ್ದಾರೆ ಎನ್ನುವುದು ಇದೆ. ಅಸ್ತಿತ್ವವೇ ಇಲ್ಲದಿರುವ ಸಂಘಕ್ಕೆ ಮುಖ್ಯಮಂತ್ರಿಗಳು ಕರೆದು ಸಂಧಾನ ಮಾಡುವ ಅವಶ್ಯಕತೆ ಏನು ಇತ್ತು? ಸಚಿವರು ಈಗ ಈ ರೀತಿಯ ಉತ್ತರವನ್ನು ಸದನಕ್ಕೆ ನೀಡಿ, ಅದಕ್ಕೆ ಅಸ್ತಿತ್ವವೇ ಇಲ್ಲವೆನ್ನುವುದಾದರೆ, ಸಭೆಯನ್ನು ಏಕೆ ಮಾಡಿದ್ದಾರೆ?

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೆ, ಅದು ಅಸ್ತಿತ್ವದಲ್ಲಿ ಇಲ್ಲ ಎನ್ನುವುದನ್ನು ಹೇಳಿದ್ದೇನೆ. ಯಾವುದೇ ಸಂಘದವರು ಬಂದಾಗ ಅವರೊಂದಿಗೆ ಮಾತನಾಡುವುದು ನನ್ನ ಧರ್ಮ. ಹೀಗಾಗಿ ನಾನು ಮತ್ತು ಮುಖ್ಯಮಂತ್ರಿಗಳು ಮಾತನಾಡಿದ್ದೇವೆ. ಆರೋಪ ಮಾಡುವ ಸಂಸ್ಥೆಗಳ ಬಗ್ಗೆ ಸದಸ್ಯರು ತಿಳಿದುಕೊಳ್ಳಬೇಕೆಂದು ನಾನು ಹೇಳಿದ್ದೇನೆ ಅಷ್ಟೇ. ಯಾರು ಆರೋಪ ಮಾಡಿದ್ದಾರೆ,

**ಶ್ರೀ ಕೆ.ಎಸ್.ನವೀನ್:-** ಮಾನ್ಯ ಸಭಾಪತಿಯವರೆ, ಸಂಘ ಅಸ್ತಿತ್ವದಲ್ಲಿ ಇಲ್ಲ ಎಂದು ಸಚಿವರು ತಿಳಿಸುತ್ತಾರೆ. ಆ ಸಂಘ ಇದೆಯೋ ಅಥವಾ ಇಲ್ಲವೋ?

**ಶ್ರೀ ಆರ್.ಬಿ.ತಿಮ್ಮಾಪುರ:-** ಮಾನ್ಯ ಸಭಾಪತಿಯವರೆ, ಅದರ ಇನ್ನೂ ಒಂದು ಕಥೆ ಇದೆ. ಅಸ್ತಿತ್ವದಲ್ಲಿ ಇಲ್ಲದಿರುವ ಆ ಸಂಸ್ಥೆಯವರು ಯಾವ ಯಾವ ಅಂಗಡಿಗಳ ಬಳಿ ಏನೇನು ಕಲೆಕ್ಟ್ ಮಾಡುತ್ತಾರೆ ಎನ್ನುವ

ಮಾಹಿತಿಯನ್ನು ನಾನು ಒದಗಿಸುತ್ತೇನೆ. ಇಂತಹ ಸಂಸ್ಥೆ ಒಬ್ಬ ಮಂತ್ರಿಗಳ ಮೇಲೆ, ಮುಖ್ಯಮಂತ್ರಿಗಳ ಮೇಲೆ ಈ ರೀತಿಯಾದ ಆರೋಪಗಳನ್ನು ಮಾಡುವುದು ಸರಿಯಾದುದಲ್ಲ.

**ಸಭಾಪತಿಯವರು:-** ಶ್ರೀ ಜಗದೇವ್ ಗುತ್ತೇದಾರ್ ನಿಮ್ಮ ಪ್ರಶ್ನೆಯು ವರ್ಗಾವಣೆಗೊಂಡಿದೆ.

**ಪ್ರಶ್ನೆ ಸಂಖ್ಯೆ: 1285**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಕೇಳಿರುವ ಪ್ರಶ್ನೆಗೆ ಗೃಹ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಇದರೊಳಗಡೆ ಎಲ್ಲಿಯೋ ಸೊನ್ನೆಗಳು ವ್ಯತ್ಯಾಸವಾಗಿವೆ ಎಂದು ನನಗೆ ಅನ್ನಿಸುತ್ತದೆ. ಇದರಲ್ಲಿ ಒಟ್ಟು ಬಾಂಗ್ಲಾದೇಶ ಮತ್ತು ಪಾಕಿಸ್ಥಾನ ದೇಶಗಳಿಂದ ಇಲ್ಲಿ ವಾಸವಾಗಿರುವ ಜನರು ಎಷ್ಟು ಇದ್ದಾರೆ, ಎಷ್ಟು ಪ್ರಕರಣಗಳಾಗಿವೆ ಹಾಗೂ ಆ ಪೈಕಿ ಎಷ್ಟು ಜನರು ಬಂಧಿತರಾಗಿದ್ದಾರೆ ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಇತ್ತೀಚೆಗೆ ಚಿತ್ರದುರ್ಗ ಜಿಲ್ಲೆಯ ಧವಳಗಿರಿ ಬಡಾವಣೆಯಲ್ಲಿ 6 ಜನರು ಸಿಕ್ಕಿಹಾಕಿಕೊಂಡಿದ್ದಾರೆ. ಇದನ್ನೂ ಸೇರಿಸಿಕೊಂಡು ಕೇವಲ 159 ಜನ ಬಾಂಗ್ಲಾದೇಶದವರಿದ್ದಾರೆ; ಆ ಪೈಕಿ ಕೇವಲ 29 ಜನರು ಮಾತ್ರವೇ ನಮ್ಮ ರಾಜ್ಯದಲ್ಲಿದ್ದಾರೆ ಎಂಬ ಉತ್ತರವನ್ನು ನೀಡಿದ್ದಾರೆ. ನಾವು ಎಸ್ಟೇಟ್, ಹೋಂ ಸ್ಟೇ ಈ ರೀತಿಯಾಗಿ ಎಲ್ಲೆಲ್ಲಿ ಹೋಗುತ್ತೇವೆಯೋ, ಅಲ್ಲೆಲ್ಲಾ ನಾವು ನೋಡಿದರೆ, ಯಾವ ದೇಶದಿಂದ ಇವರು ಬಂದಿರಬಹುದು ಎನ್ನುವುದು ನಮಗೆ ಗೊತ್ತಾಗುತ್ತದೆ. Karnataka has become a paradise for them. ಇದಕ್ಕಾಗಿಯೇ ಒಂದು ತಂಡವಿದ್ದು, ಅದು ಅವರಿಗೆ ಅವಶ್ಯಕವಾದ ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್, ಮತದಾನದ ಗುರುತಿನ ಚೀಟಿ ಇತ್ಯಾದಿಗಳನ್ನು ಎಲ್ಲವನ್ನೂ ಮಾಡಿ ಕೊಡುತ್ತಾರೆ. They have become peddlers. ಇವತ್ತಿನ ದಿವಸ ಇವರುಗಳೇ ರಾಜ್ಯದಲ್ಲಿ ಅತೀ ಹೆಚ್ಚು ಗಾಂಜಾವನ್ನು ಕೆಳಗಿನ ಹಂತದವರೆಗೆ ತಲುಪಿಸುತ್ತಿದ್ದಾರೆ. 159 ಜನರು ಬಾಂಗ್ಲಾದೇಶದವರು ಇದ್ದಾರೆ ಹಾಗೂ ಅವರ ವಿವರವನ್ನು ಒಳಗೊಂಡ ಉತ್ತರವನ್ನು ಸರ್ಕಾರವು ನೀಡುತ್ತದೆ. ಇವರುಗಳು ಕಳೆದ 5-6 ವರ್ಷಗಳಿಂದ ಇದ್ದರೂ ಸಹ ಇನ್ನೂ ಗಡಿಪಾರು ಮಾಡಿರುವುದಿಲ್ಲ. ಇದನ್ನು ಯಾವಾಗ ಮಾಡುವುದು? ನಮ್ಮ ಜಿಲ್ಲಾ ಕೇಂದ್ರಗಳಲ್ಲಿನ ಪೋಲೀಸ್ ಅಧೀಕ್ಷಕರ ಕಛೇರಿಯಲ್ಲಿ ಟಾಸ್ಕ್ ಫೋರ್ಸ್ ಇದೆ ಎನ್ನುವ ಮಾಹಿತಿಯನ್ನು ಸರ್ಕಾರವು ನೀಡಿದೆ. ಆದರೆ, ಅಲ್ಲಿ ಯಾರ ಬಳಿಗೆ ಹೋಗಿ ದೂರನ್ನು ಸಲ್ಲಿಸಬೇಕು ಎನ್ನುವುದು ನಮಗೆ ತಿಳಿದಿಲ್ಲ. ಇಂತಹ ಪರಿಸ್ಥಿತಿ ಇದೆ. ಇವರನ್ನು ಯಾವಾಗ ಗಡಿಪಾರು ಮಾಡಲಾಗುತ್ತದೆ? ಇವರುಗಳು ಕೇವಲ 159 ಸಂಖ್ಯೆಯಲ್ಲಿ ಮಾತ್ರವೇ ಇದ್ದಾರೆಯೇ ಎನ್ನುವುದು ಪ್ರಶ್ನೆಯಾಗಿದೆ.

**ಡಾ॥ ಜಿ.ಪರಮೇಶ್ವರ (ಗೃಹ ಸಚಿವರು):-** ಮಾನ್ಯ ಸಭಾಪತಿಯವರೆ, ಬಾಂಗ್ಲಾದೇಶ ಮತ್ತು ಪಾಕಿಸ್ಥಾನ ದೇಶಗಳಿಂದ ಬರುವಂತಹ ಕೆಲಸ ಹೊಸದಾಗಿ ಆಗುತ್ತಿಲ್ಲ. ಬಾಂಗ್ಲಾದೇಶದ ಸರಹದ್ದಿನ ಮೂಲಕ ಲಕ್ಷಾಂತರ ಜನರು ಭಾರತ ದೇಶಕ್ಕೆ ಬಂದಿದ್ದಾರೆ; ಇನ್ನೂ ಬರುತ್ತಿದ್ದಾರೆ. ಇದನ್ನು ತಡೆಗಟ್ಟಲು ನಮ್ಮ ಕೇಂದ್ರ ಸರ್ಕಾರ ಹಾಗೂ ಮಿಲಿಟರಿಯ ಬಾರ್ಡರ್ ಸೆಕ್ಯೂರಿಟಿ ಫೋರ್ಸ್‌ನವರು ಬಹಳ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ಇಲ್ಲದಿದ್ದರೆ, ಅರ್ಧ ಬಾಂಗ್ಲಾದೇಶವು ನಮ್ಮ ದೇಶದೊಳಗೆ ಬರುತ್ತಿತ್ತು. ಆದರೂ ಸಹ ಅವರುಗಳು ಇನ್ನೆಲ್ಲಿಂದಲೋ

ನಮ್ಮ ದೇಶದೊಳಗೆ ಬೇರೆ ಬೇರೆ ರೀತಿಯಲ್ಲಿ ನುಸುಳಿಕೊಂಡು ಬರುತ್ತಾರೆ. ಹೀಗೆ ಬಂದವರು ಇಡೀ ದೇಶದ ಎಲ್ಲಾ ರಾಜ್ಯಗಳಿಗೂ ಹೋಗುತ್ತಾರೆ. ಅದೇ ರೀತಿಯಾಗಿ ನಮ್ಮ ರಾಜ್ಯಕ್ಕೂ ಸಹ ಬಹಳ ಜನರು ಬಂದಿದ್ದಾರೆ. ನಾವು ಈಗಾಗಲೇ ಇಂತಹವರನ್ನು ಪ್ರತಿ ವರ್ಷ ರೆವ್ಯೂವ್ ಮಾಡಿ ಗಡಿಪಾರು ಮಾಡುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದೇವೆ. ನಮ್ಮಲ್ಲಿ F.R.R.O.(Foreigners Regional Registration Office) ಕಛೇರಿ ಇದೆ. ಇದು ಕೇಂದ್ರ ಸರ್ಕಾರದ ಸಂಸ್ಥೆಯಾಗಿದ್ದು, ಇವರೂ ಸಹ ಪರಿಶೀಲನೆ ಮಾಡುತ್ತಾರೆ. Foreigners Restriction Centre ಇದೆ. ಈ ಮೊದಲು ಇದು ನಮ್ಮ ರಾಜ್ಯದ ಗುಪ್ತಚಾರ ಇಲಾಖೆಯ ನಿಯಂತ್ರಣದಲ್ಲಿಯೇ ಇತ್ತು. ಈಗ ಕೇಂದ್ರ ಸರ್ಕಾರದ ಐ.ಬಿ. ಯವರು ತೆಗೆದುಕೊಂಡಿದ್ದಾರೆ. ನಮ್ಮ ಇಲಾಖೆಯ ಬಹಳ ಅಧಿಕಾರಿಗಳೂ ಸಹ ಅಲ್ಲಿಗೆ ನಿಯೋಜನೆ ಮೇರೆಗೆ ಹೋಗಿ ಕರ್ತವ್ಯ ನಿರ್ವಹಿಸುತ್ತಾರೆ. ನಾವು ನಿರಂತರವಾಗಿ ಕೆಲಸವನ್ನು ಮಾಡುತ್ತಿದ್ದೇವೆ. ಹೀಗೆ ಅಕ್ರಮವಾಗಿ ವಲಸೆ ಬಂದವರು ಕಾಫಿ ತೋಟದಲ್ಲಿ ಕೆಲಸ ಮಾಡುತ್ತಾರೆ. ಲೇಬರ್ ಫೋರ್ಸ್ ಆಗಿ ಬೆಂಗಳೂರಿನಲ್ಲಿ ಅಥವಾ ಬೇರೆ ಬೇರೆ ಊರುಗಳಲ್ಲಿ ಮೈಸೂರು, ಹಾಸನಗಳಲ್ಲಿರುತ್ತಾರೆ. ಈ ಬಗೆಗಿನ ಮಾಹಿತಿಯನ್ನು ನಾನು ಸದಸ್ಯರಿಗೆ ಈಗಾಗಲೇ ಒದಗಿಸಿದ್ದೇನೆ. ಇದು ಇತ್ತೀಚಿನ ಮಾಹಿತಿಯಾಗಿದೆ ಅಷ್ಟೇ. ನಿರಂತರವಾಗಿ ಸಾವಿರಾರು ಜನರು ಬಾಂಗ್ಲಾದೇಶದಿಂದ ಬಂದವರನ್ನು ನಾವು ಈಗಾಗಲೇ ಗಡಿಪಾರು ಮಾಡಿದ್ದೇವೆ. ಇವರನ್ನೂ ಸಹ ಮಾಡುತ್ತೇವೆ ವಿನಹ ಇವರನ್ನು ನಾವು ಇಟ್ಟುಕೊಳ್ಳುವುದಿಲ್ಲ. ಇದಕ್ಕಾಗಿಯೇ ಒಂದು ಪ್ರೊಸೀಜರ್ ಇದೆ. ಇದನ್ನು ಫಾಲೋ ಮಾಡುವುದಕ್ಕೋಸ್ಕರ ನಾವು ಇವರನ್ನು ಇಟ್ಟಿದ್ದೇವೆ. ಇದಕ್ಕೆ ಶಾಶ್ವತವಾದ ವಿಶೇಷವಾದ ಟಾಸ್ಕ್ ಫೋರ್ಸ್ ಅನ್ನು ಮಾಡಿದ್ದೇವೆ. ಎಲ್ಲೆಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಬಾಂಗ್ಲಾದೇಶ ಅಥವಾ ಪಾಕಿಸ್ಥಾನದವರಾಗಲೀ ಅಥವಾ ಯಾವುದೇ ದೇಶದ ವಿದೇಶಿಯರು ಬಂದು ಅನಧಿಕೃತವಾಗಿ ನೆಲೆಸತಕ್ಕ ಸಂದರ್ಭದಲ್ಲಿ ಅವರನ್ನು ಪರಿಶೀಲನೆ ಮಾಡಿ ಅವರನ್ನು ಗಡಿಪಾರು ಮಾಡುತ್ತೇವೆ. ಬಹಳ ಜನರು ಆಫ್ರಿಕಾ ದೇಶದಿಂದ ಇಲ್ಲಿಗೆ ಬರುತ್ತಾರೆ. ಸದಸ್ಯರು ಪ್ರಸ್ತಾಪಿಸಿದಂತೆ, ಅವರುಗಳೆಲ್ಲಾ ಅನೈತಿಕ ಚಟುವಟಿಕೆಗಳು, ಡ್ರಗ್ಸ್ ಮತ್ತು ವೇಶ್ಯಾವಾಟಿಕೆ ಮತ್ತಿತರೆ ಚಟುವಟಿಕೆಗಳನ್ನು ಮಾಡತಕ್ಕದ್ದನ್ನು ನಾವು ದಿನನಿತ್ಯ ಬೆಂಗಳೂರು ನಗರದಲ್ಲಿ ನೋಡುತ್ತಿದ್ದೇವೆ. ಅವರನ್ನು ನಾವು ಹಿಡಿದುಕೊಂಡು, ಅವರ ಪಾಸ್‌ಪೋರ್ಟ್‌ನ್ನು ಪರಿಶೀಲಿಸಲಾಗುತ್ತದೆ. ಅವರು ಒಮ್ಮೊಮ್ಮೆ ವಿದ್ಯಾರ್ಥಿಯಾಗಿ ಇಲ್ಲಿಗೆ ಬರುತ್ತಾರೆ. ಅದರಲ್ಲೂ ವಿಶೇಷವಾಗಿ ಆಫ್ರಿಕಾ ದೇಶದ ಪ್ರಜೆಗಳು ಇಲ್ಲಿಗೆ ಬರುತ್ತಾರೆ. ಅವರು ವಿದ್ಯಾರ್ಥಿಗಳಾಗಿ ಇಲ್ಲಿಗೆ ಬಂದು ಒಂದು ವರ್ಷಕ್ಕೆ ವೀಸಾ ಇರುತ್ತದೆ. ಯಾವುದೋ ಖಾಸಗಿ ಕಾಲೇಜಿನಲ್ಲಿ ಅವರುಗಳು ನೋಂದಣಿ ಮಾಡಿಸಿಕೊಂಡಿರುತ್ತಾರೆ. ಆದರೆ, ಅವರುಗಳು ಯಾವುದೇ ಕಾಲೇಜುಗಳಿಗೆ ಹೋಗುತ್ತಿರುವುದಿಲ್ಲ. ಒಂದು ವರ್ಷದ ಅವಧಿ ಪೂರ್ಣಗೊಂಡ ನಂತರವೂ ಸಹ ಅವರುಗಳು ಹಾಗೆಯೇ ಮುಂದುವರೆದಿರುತ್ತಾರೆ. ನಮ್ಮಲ್ಲಿನ ಪರಿಶೀಲನಾ ಪ್ರಕ್ರಿಯೆಯಲ್ಲಿನ ವಿಳಂಬದಿಂದಾಗಿ ಅವರುಗಳು ತಪ್ಪಿಸಿಕೊಂಡು ಬಿಡುತ್ತಾರೆ. ಆಗ 3-5 ವರ್ಷಗಳು ಹೀಗೆಯೇ ಕಳೆದು ಹೋಗುತ್ತದೆ. ಸದಸ್ಯರಿಗೆ ತಿಳಿದಿರುವಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ಬಾಂಗ್ಲಾದೇಶದ 6 ಪ್ರಜೆಗಳನ್ನು ಹಿಡಿಯಲಾಗಿತ್ತು. ಇವರುಗಳು ಜಿಲ್ಲಾ ಕೇಂದ್ರಗಳಿಗೆ ಹೋಗಿ

ಸೇರಿಕೊಳ್ಳುತ್ತಾರೆ. ಹೀಗಾಗಿ ಇವರುಗಳ ಪರಿಶೀಲನಾ ಪ್ರಕ್ರಿಯೆಯು ಬಹಳ ಕಷ್ಟವಾಗುತ್ತದೆ. ಇವರುಗಳು ಯಾರೋ ಏಜೆಂಟ್‌ಗಳ ಮುಖಾಂತರ ಬಿ.ಪಿ.ಎಲ್. ಕಾರ್ಡ್ ಆದಿಯಾಗಿ ಇನ್ನಿತರೆ ಎಲ್ಲಾ ದಾಖಲಾತಿಗಳನ್ನು ಪಡೆದುಕೊಳ್ಳುತ್ತಾರೆ. ಹೀಗಾಗಿ ಇವರುಗಳನ್ನು ಪತ್ತೆ ಹಚ್ಚುವುದು ಕಷ್ಟವಾಗುತ್ತದೆ. ಆದರೂ ಸಹ ಇವರುಗಳನ್ಯಾರನ್ನೂ ನಾವು ನಮ್ಮ ದೇಶದಲ್ಲಿ ಇಟ್ಟುಕೊಳ್ಳದೇ; ಗಡಿಪಾರು ಮಾಡುತ್ತೇವೆ. ಇಂತಹ ಸಂಗತಿಗಳನ್ನು ನೋಡಿಕೊಳ್ಳುವುದಕ್ಕಾಗಿ ಜಿಲ್ಲಾ ಪೋಲೀಸ್ ಅಧೀಕ್ಷಕರುಗಳಿಗೆ ಜವಾಬ್ದಾರಿಯನ್ನು ವಹಿಸಲಾಗಿದೆ. ಇದಕ್ಕಾಗಿ ಡಿ.ಸಿ.ಪಿ.ಯವರೊಬ್ಬರನ್ನೂ ಸಹ ನೇಮಿಸಲಾಗಿದೆ. ಯಾವುದೇ ಕಾರಣಕ್ಕೂ ಇದನ್ನು ನಿರ್ಲಕ್ಷ್ಯ ಮಾಡುವ ಪ್ರಶ್ನೆಯೇ ಇಲ್ಲ. ತಮಗೆ ತಿಳಿದಿರುವಂತೆ, ಪಾಕಿಸ್ಥಾನಿಯೊಬ್ಬನು ನಮ್ಮಲ್ಲಿ ಕಳೆದ ಒಂದು ದಶಕದಿಂದ ಇದ್ದನು. ಮೊದಲ ಐದು ವರ್ಷದ ಅವಧಿಯಲ್ಲಿ ಅವರು ದೇಶದ ದೆಹಲಿ, ಮುಂಬೈ ನಗರಗಳಲ್ಲಿ ವಾಸವಿದ್ದು, ನಂತರದಲ್ಲಿ ನಮ್ಮ ರಾಜ್ಯಕ್ಕೆ ಬಂದು ವಾಸವಿದ್ದನು. ಇವರನ್ನೂ ಸಹ ಹಿಡಿದುಕೊಂಡು, ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ವಿದೇಶಿಯರು ನಿರಂತರವಾಗಿ ನಮ್ಮ ದೇಶಕ್ಕೆ ಅಕ್ರಮ ಮಾರ್ಗದ ಮೂಲಕ ಬಂದು ಅನಧಿಕೃತವಾಗಿ ನೆಲೆಸಿರುವಂತಹವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಡಿ.ಎಸ್.ಅರುಣ್:-** ಮಾನ್ಯ ಸಭಾಪತಿಯವರೆ, ಇಲ್ಲಿನ ಪ್ರಮುಖ ಅಂಶವೆಂದರೆ, ಇವತ್ತಿನ ದಿವಸ ಸಣ್ಣ ಸಣ್ಣ ಊರುಗಳಿಂದ ಬೆಂಗಳೂರು ನಗರಕ್ಕೆ ವಲಸೆ ಬರುವವರ ಸಂಖ್ಯೆ ಜಾಸ್ತಿಯಾಗುತ್ತಲೇ ಇದೆ. ಈ ಸನ್ನಿವೇಶದ ಲಾಭವನ್ನು ಏಜೆನ್ಸಿಗಳು ಪಡೆದುಕೊಳ್ಳುತ್ತಿವೆ. ಇವರುಗಳಿಗೆ ಆಧಾರ್ ಕಾರ್ಡ್, ಪಾನ್ ಕಾರ್ಡ್ ಆದಿಯಾಗಿ ಇನ್ನಿತರೆ ದಾಖಲೆಗಳನ್ನು ಏಜೆನ್ಸಿಯವರುಗಳು ಒದಗಿಸುತ್ತಾರೆ. ಹೀಗಾಗಿ ಇಂತಹ ಏಜೆನ್ಸಿಗಳ ವಿರುದ್ಧವೂ ಸರ್ಕಾರ ಕಠಿಣ ಕ್ರಮಗಳನ್ನು ಜರುಗಿಸಬೇಕೆಂದು ಕೋರುತ್ತೇನೆ. ಎಸ್ಟೇಟ್‌ಗಳಲ್ಲಿ 50-100 ಜನರು ಕೆಲಸ ನಿರ್ವಹಿಸುತ್ತಿದ್ದರೆ, ಅವರಿಗೂ ಸಹ ಲೇಬರ್ ಕಾರ್ಡ್‌ಗಳನ್ನು ನೀಡಲಾಗುತ್ತದೆ. ಹೀಗೆ ಇಂತಹ ಸ್ಥಳಗಳಲ್ಲಿ ಕೆಲಸಕ್ಕೆ ಯಾರು ಬರುತ್ತಾರೆಯೋ, ಅವರುಗಳ ಮಾಹಿತಿಗಳನ್ನು ಕಾಲಕಾಲಕ್ಕೆ ಸ್ಥಳೀಯ ಪೋಲೀಸ್ ಠಾಣೆಗಳಲ್ಲಿ ಪಡೆದುಕೊಂಡಿಲ್ಲವೆಂದಾದರೆ ಬಹಳ ಕಷ್ಟವಾಗುತ್ತದೆ. ಯಾವ ಯಾವ ಭಾಗಗಳಲ್ಲಿ ಈ ರೀತಿಯ ಕೆಲಸಗಾರರ ಅವಶ್ಯಕತೆ ಇದೆ ಎನ್ನುವುದು ತಿಳಿದಿರುತ್ತದೆ. ಇಂತಹ ವಿಚಾರಗಳಲ್ಲಿಯೂ ಸಹ ಸರ್ಕಾರವು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆಗ ಸಣ್ಣ ಸಣ್ಣ ಊರಿನಲ್ಲಿರುವವರೂ ಸಹ ನೆಮ್ಮದಿಯಿಂದ ಇರಬಹುದು.

(ಮುಂದು)

(1003) 19/12/2024 10:40 bkp-rn (ಸಭಾಪತಿಯವರ ಉಪಸ್ಥಿತಿ)

**ಡಾ॥ ಜಿ. ಪರಮೇಶ್ವರ:-** ಮಾನ್ಯ ಸಭಾಪತಿಯವರೆ, ಇದಕ್ಕೆ ಈಗಾಗಲೇ ಪ್ಲಾಂಟರ್ಸ್ ಅಸೋಷಿಯೇಷನ್ಸ್ ಎಂದು ಇದೆ. ಇದು ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಇರುವಂತಹ ಆ ಪ್ಲಾಂಟರ್ಸ್ ಅಸೋಷಿಯೇಷನ್ ರವರ ಹತ್ತಿರ ನಾವು regular ಅಗಿ touchನಲ್ಲಿದ್ದೇವೆ ಮತ್ತು monitor

ಮಾಡುತ್ತಿದ್ದೇವೆ. ಈ ಕಾರ್ಮಿಕ ಸಂಘಟನೆಗಳು ಏನಿವೆ, ಕಾಫಿ ತೋಟಕ್ಕೆ 50 ಜನ ಕಾರ್ಮಿಕರು ಬೇಕೆಂದರೆ 50 ಜನ ಕಾರ್ಮಿಕರನ್ನು ಕೊಡತಕ್ಕಂತಹ ಏಜೆನ್ಸಿಗಳ ರೀತಿಯಲ್ಲಿ ಇವೆ. ಅವರ ಜೊತೆಯಲ್ಲಿಯೂ ಸಹ ನಾವು ಸಂಪರ್ಕದಲ್ಲಿದ್ದೇವೆ. ಪರಿಶೀಲನೆ ಮಾಡಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ 1188**

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಪ್ರಶ್ನೆ ಸಂಖ್ಯೆ 1188 ಅನ್ನು ಕೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಉಪ ಮುಖ್ಯಮಂತ್ರಿಗಳು ಕೆಳಮನೆಯಲ್ಲಿ ಕೆಲಸ ಇದೆ ಎಂದು ಹೇಳಿ, ತಡವಾಗಿ ಬರುತ್ತೇನೆಂದು ನನಗೆ ತಿಳಿಸಿದ್ದಾರೆ. ಅವರು ಬಂದ ಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ 1264**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ನೀಡಿರುವ ಉತ್ತರ ಸಮಂಜಸವಾಗಿದೆ.

**ಪ್ರಶ್ನೆ ಸಂಖ್ಯೆ 1220**

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಪ್ರಶ್ನೆ ಸಂಖ್ಯೆ 1220 ಅನ್ನು ಕೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ತಮ್ಮ ಪ್ರಶ್ನೆಗೆ ಉತ್ತರಿಸಲು ಕಾಲಾವಕಾಶವನ್ನು ಕೇಳಿದ್ದಾರೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೆ, ಇಂದು ಅಧಿವೇಶನದ ಕೊನೆಯ ದಿವಸವಾಗಿದ್ದು, ಹಳೇ ಪಿಂಚಣಿ ಜಾರಿಗೊಳಿಸುವ ಬಗ್ಗೆ ಒಂದು ಪ್ರಮುಖವಾದ ಪ್ರಶ್ನೆಯನ್ನು ಕೇಳಿದ್ದೆ.

**ಸಭಾಪತಿಯವರು:-** ನಾನು ಏನು ಮಾಡಲಿ? ನಾನು ಈ ಬಗ್ಗೆ ಸಭಾನಾಯಕರಿಗೆ ಈಗಾಗಲೇ ಹೇಳಿದ್ದೇನೆ. ಸಭಾನಾಯಕರೆ, ನಾನು ಅಧಿವೇಶನದ ಒಳಗಡೆ ಉತ್ತರ ಕೊಡಬೇಕೆಂದು ಹೇಳಿದ್ದೇನೆ. ನಿನ್ನೆಯೂ ಸಹ ನಾನು ನಿಮಗೆ ಈ ಬಗ್ಗೆ ಹೇಳಿದ್ದೇನೆ. ಎಲ್ಲಾ ವಿಚಾರವನ್ನು ನಾನು ಹೇಳಿರುವಾಗ ನೀವು ಏನು ಮಾಡಿದ್ದೀರಿ? ನಾನು ನಿಮಗೆ ಏನು ಹೇಳಿದ್ದೇನೆ, ನಾನು ಹೇಳಿದಂತೆ ಉತ್ತರವನ್ನು ಕೊಡಬೇಕಲ್ಲವೇ?

**ಶ್ರೀ ಎಸ್.ಎನ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ನಾನು ಈಗ ಉತ್ತರವನ್ನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿಯವರು ಕೇಳಿದಂತಹ ವಿಷಯವಾಗಿ ನಾನು ಬೆಳಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳ ಹತ್ತಿರ ....

**ಸಭಾಪತಿಯವರು:-** ಉತ್ತರ ಕೊಡಲಿಕ್ಕೆ ಒಂದು ವಾರ ಕಾಲಾವಕಾಶವನ್ನು ಕೇಳಿದ ಮೇಲೆ ಈ ಬಗ್ಗೆ ಸಚಿವರಿಗೆ ತಿಳುವಳಿಕೆ ಬೇಕಲ್ಲವೇ?

**ಶ್ರೀ ಎಸ್.ಎನ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ವಿವರ ಕೊಡಲಿಕ್ಕೆ ಇನ್ನು ಒಂದು ವಾರದಲ್ಲಿ ಕೇಂದ್ರ ಸರ್ಕಾರದಿಂದ ಗೈಡ್‌ಲೈನ್ಸ್ ಬರುತ್ತದೆ ಎಂದು ಅವರು ಕಾಯುತ್ತಿದ್ದಾರೆ. ಅದು ಬಂದ ಮೇಲೆ ಪರಿಪೂರ್ಣವಾಗಿ ಅವರು ಕೇಳಿರುವುದಕ್ಕೆ ಉತ್ತರ ಕೊಡಬೇಕೆನ್ನುವುದು ಮಾನ್ಯ ಸಚಿವರ ಉದ್ದೇಶವಾಗಿತ್ತು. ಅದು ಬಂದ ಕೂಡಲೇ ಲಿಖಿತ ಮೂಲಕ ಉತ್ತರವನ್ನು ಕೊಡಿಸುತ್ತೇವೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೆ, ನನ್ನ ಈ ಪ್ರಶ್ನೆಗೆ ಲಿಖಿತ ಉತ್ತರವನ್ನಾದರೂ ಕೊಡಲಿಕ್ಕೆ ಹೇಳಿ.

**ಶ್ರೀ ಎಸ್.ಎನ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಆಗಬಹುದು.

**ಪ್ರಶ್ನೆ ಸಂಖ್ಯೆ 1186**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಟಿ.ಎ. ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಕೊಟ್ಟಿರುವಂತಹ ಉತ್ತರ ಸಮಾಧಾನವಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬೇಕಾಗಿದೆ, ಮುಖ್ಯಮಂತ್ರಿಗಳು ಬಂದ ಮೇಲೆ ನನಗೆ ಮಾತನಾಡಲು ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಇಲ್ಲ, ಮುಖ್ಯಮಂತ್ರಿಗಳು ಬರುವಂತಿಲ್ಲ.

**ಶ್ರೀ ಟಿ.ಎ.ಶರವಣ:-** ಮುಖ್ಯಮಂತ್ರಿಗಳು ಬರುವುದಿಲ್ಲವೆಂದರೆ ಸಭಾನಾಯಕರೇ ಉತ್ತರ ಕೊಡುತ್ತಾರೆಯೇ?

**ಸಭಾಪತಿಯವರು:-** ಮುಖ್ಯಮಂತ್ರಿಗಳ ಪರವಾಗಿ ಸಭಾನಾಯಕರು ಉತ್ತರವನ್ನು ಕೊಡುತ್ತಾರೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ವಿಷಯಗಳ ಬಗ್ಗೆ ಉತ್ತರದಲ್ಲಿ ಸ್ಪಷ್ಟವಾಗಿ ಕೊಟ್ಟಿದ್ದೇವೆ. ನೀವು ಕೇಳುವಂತಹ ಪ್ರಶ್ನೆಗೆ ನನಗೆ ಸಾಧ್ಯವಾದರೆ ಹೇಳುತ್ತೇನೆ. ಇಲ್ಲವಾದರೆ, ನೀವು ಹೇಳುವಂತಹ ವಿಚಾರಗಳನ್ನು ನಾನು ನೋಟ್ ಮಾಡಿಕೊಂಡು ಅದರ ವಿವರವನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಟಿ.ಎ. ಶರವಣ:-** ಯಾವಾಗ ಕೊಡಿಸುತ್ತೀರಿ?

**ಶ್ರೀ ಎನ್.ಎಸ್.ಬೋಸರಾಜು:-** ಈಗಲೇ ಕೊಡಿಸುತ್ತೇನೆ, ನೀವು ಮಾತನಾಡಿ, ಹೇಳಿ.

**ಶ್ರೀ ಟಿ.ಎ. ಶರವಣ:-** ಆಯಿತು, ನೀವು ಚರ್ಚೆಗೆ ಸಿದ್ಧ ಎಂದರೆ ನಾನು ಮಾತನಾಡುತ್ತೇನೆ.

**ಸಭಾಪತಿಯವರು:-** ನಾನು ನಿಮಗೆ ಪ್ರಶ್ನೆಯನ್ನು ಕೇಳಿ ಎಂದು ಹೇಳಿದ್ದು, ತಾವು ಪ್ರಶ್ನೆಯನ್ನು ಕೇಳಿದ್ದೀರಿ.

**ಶ್ರೀ ಟಿ.ಎ. ಶರವಣ:-** ಈ ಪ್ರಶ್ನೆಗೆ ಉತ್ತರ ಬಂದಾಗ ಚರ್ಚೆ ಆಗಿಯೇ ಗುತ್ತದೆ.

**ಸಭಾಪತಿಯವರು:-** ಶ್ರೀಯುತ ಶರವಣರವರೇ, ಪ್ರಶ್ನೆಗೆ ನಿಮ್ಮನ್ನು ಕರೆದಾಗ ನೀವು ಪ್ರಶ್ನೆಯನ್ನು ಕೇಳುವುದು ನಿಮ್ಮ ಕರ್ತವ್ಯ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಈಗ ಉತ್ತರವನ್ನು ಕೊಟ್ಟಿದ್ದಾರೆ. ನಾನು ಪ್ರಶ್ನೆಯನ್ನು ಕೇಳಬಾರದು ಎಂದು ಹೇಳಿದರೆ ನಾನು ಕುಳಿತುಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ಬರುವುದಿಲ್ಲವೆಂದರೆ ನಾನು ಏನೂ ಮಾಡಲಿಕ್ಕೆ ಆಗುವುದಿಲ್ಲ. ತಾವು ಹೇಗೆ ಹೇಳುತ್ತಿರೋ ಹಾಗೆ ಮಾಡುತ್ತೇನೆ. ಪೀಠದಿಂದ ಯಾವ ರೀತಿಯಲ್ಲಿ ಆದೇಶ ಮಾಡುತ್ತೀರೋ ಹಾಗೆ ನಾನು ಪಾಲನೆ ಮಾಡುತ್ತೇನೆ. ನಾವು ಶಿಸ್ತಿನ ಸಿಪಾಯಿ. ನಾವು ಹೆಚ್ಚಿಗೆ ಮಾತನಾಡುವುದಿಲ್ಲ.

**ಸಭಾಪತಿಯವರು:-** ಹೌದು, ಶಿಸ್ತಿನ ಸಿಪಾಯಿ ಎಂದು ಎಲ್ಲರಿಗೂ ಗೊತ್ತಿದೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಈ ಜಿಎಸ್‌ಟಿ ವಿಚಾರದಲ್ಲಿ ನಮ್ಮ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಯಾವ ವರ್ಷದಲ್ಲಿ ಎಷ್ಟು ಎಷ್ಟು ನಮ್ಮ ಜುವೆಲ್ಲರಿ ಇಂಡಸ್ಟ್ರಿಯಿಂದ ಸರ್ಕಾರಕ್ಕೆ ರೆವಿನ್ಯೂ ಜಿ.ಎಸ್.ಟಿ. ರೂಪದಲ್ಲಿ ಬರತಕ್ಕಂತಹ ತೆರಿಗೆ ಎಷ್ಟು ಮತ್ತು ಜಿ.ಎಸ್.ಟಿ.ಯಲ್ಲಿ ಆಗುವಂತಹ ಗೊಂದಲಗಳು ಮತ್ತು ಇಲಾಖೆಯಲ್ಲಿ ಏನೇನು ತೊಂದರೆಗಳಿವೆ ಎನ್ನುವುದರ ಬಗ್ಗೆ ನಾನು ಪ್ರಶ್ನೆಯಯನ್ನು ಕೇಳಿದ್ದೇನೆ. ನಾನು ಕೇಳಿರುವುದಕ್ಕೆ ಉತ್ತರವನ್ನು ಕೊಟ್ಟಿದ್ದೀರಿ. ಇಲ್ಲವೆಂದು ಹೇಳುತ್ತಿಲ್ಲ. ಇದಾದನಂತರ ಅಂದರೆ, ಈ ಉತ್ತರದ ನಂತರ ಜಿಎಸ್‌ಟಿ ಎಂದು ಬಂದಾಗ ಬಹುಶಃ ಆನ್‌ಲೈನ್‌ನಲ್ಲಿ ನೋಂದಣಿಗಳಾಗುತ್ತವೆ. ಅದು ಯಾವುದೇ ಟ್ರೇಡ್ ಆಗಲಿ, ನೋಂದಣಿಯಾದಾಗ ಸ್ಟೇಟ್ ಜಿಎಸ್‌ಟಿ, ಸೆಂಟ್ರಲ್ ಜಿಎಸ್‌ಟಿ ಎಂದು ಇದೆ. ಸ್ಟೇಟ್ ಜಿ.ಎಸ್.ಟಿ.ಯಲ್ಲಿ ಒಂದು ತಿಂಗಳಾದರೂ ಆನ್‌ಲೈನ್‌ನಲ್ಲಿ ಉತ್ತರ ಬರುವುದಿಲ್ಲ. ಸೆಂಟ್ರಲ್ ಜಿಎಸ್‌ಟಿ ನಲ್ಲಿ ಒಂದು ವಾರಕ್ಕೆ ಉತ್ತರ ಬರುತ್ತದೆ. ಒಬ್ಬೊಬ್ಬ ಜುವೆಲರ್ ಆಗಲಿ, ಯಾವುದೇ ಟ್ರೇಡ್ ಆಗಲಿ, ಅವನು ಅರ್ಜಿ ಹಾಕಿದ ಮೇಲೆ ಮತ್ತೆ ಆಫೀಸ್‌ಗೆ ಹೋಗಬೇಕು. ಅವರು ರಿಪ್ಲೇ ಸಹಿತ ಮಾಡುವುದಿಲ್ಲ. ಅಲ್ಲಿಗೆ ಹೋದಾಗ ಅಧಿಕಾರಿಗಳು ಸಿಗುವುದಿಲ್ಲ. ಯಾರು ಟ್ರೇಡರ್ಸ್ ಇದ್ದಾರೆ, ಅವರು ಪರದಾಡುವಂತಹ ಪರಿಸ್ಥಿತಿ ಇದೆ. ಮತ್ತೆ, ಅವರು ಈ ಬಾಡಿಗೆ ಅಗ್ರಿಮೆಂಟ್ ಏನು ಮಾಡಿಕೊಳ್ಳುತ್ತಾರೆ, ಎಲ್ಲರೂ ಸ್ವಂತ ಕಟ್ಟಡದಲ್ಲಿ ಏನೂ ವ್ಯಾಪಾರ ಮಾಡುವುದಿಲ್ಲ. ಎಲ್ಲರೂ ಬಾಡಿಗೆಗೆ ತೆಗೆದುಕೊಂಡು ವ್ಯಾಪಾರ ಮಾಡುತ್ತಾರೆ. ಆ ಬಾಡಿಗೆ ಮಾಡುವಾಗ ಒಂದು ಬಾಡಿಗೆ ಅಗ್ರಿಮೆಂಟ್ ಆಗುತ್ತದೆ. ಆ ಒಂದು ಅಗ್ರಿಮೆಂಟ್‌ನಲ್ಲಿ ಒಂದಿಷ್ಟು ಸ್ಟ್ಯಾಂಪ್ ಡ್ಯೂಟಿ ಎಂದು ಹೇಳಿ ಹಣವನ್ನು ಕಟ್ಟಿ ಅವರು ಅಗ್ರಿಮೆಂಟ್ ಮಾಡಿಕೊಂಡು ಮುಂಗಡ ಹಣವನ್ನು ಪಾವತಿ ಮಾಡಿರುತ್ತಾರೆ. ಅವರು ಅಂದರೆ, ಜಿ.ಎಸ್‌ಟಿಯವರು ಅದನ್ನು ಪ್ರಶ್ನೆ ಮಾಡುತ್ತಾರೆಂದು ಹೇಳುತ್ತಾರೆ. ನೀನು ಅಗ್ರಿಮೆಂಟ್ ಮಾಡಿಕೊಂಡಿರುವುದು ಸರಿಯಿಲ್ಲ, 50, 100, 200 ರೂಪಾಯಿಗಳ ಸ್ಟ್ಯಾಂಪ್ ಪೇಪರ್ ಅಥವಾ ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಪ್ರಶ್ನೆ ಮಾಡುವಂತಹ ಅಥಾರಿಟಿ ಯಾರಿಗೆ ಇದೆ? ಅದು ರೆವಿನ್ಯೂ ಇಲಾಖೆಯವರು ಅಲ್ಲವೇ? ಅವರು ಅದನ್ನು ಕೇಳುವುದಿಲ್ಲ. ಇಲ್ಲಿ ಜಿಎಸ್‌ಟಿಯವರು ಅವನನ್ನು ತಿರುಗಿಸುತ್ತಾರೆ. ಇಲ್ಲದೇ ಇರುವಂತಹ ಕಿರುಕುಳವನ್ನು ಕೊಡುತ್ತಾರೆ. ಮತ್ತೆ ಅಲ್ಲಿಗೆ ಹೋದಾಗ ಅಲ್ಲಿ ಅಧಿಕಾರಿಗಳು ಇರುವುದಿಲ್ಲ. ಮತ್ತೆ ಅವರು ನನಗೆ 10,000, 20,000 ರೂಪಾಯಿಗಳನ್ನು ಕೊಡು, ನಾನು ಮಾಡಿಕೊಡುತ್ತೇನೆ, ನೀನು ಇಲ್ಲಿ ಬರುವುದು ಬೇಡ ಎಂದು ಹೇಳಿ ಬೇರೆ ರೀತಿಯಲ್ಲಿ ಮಾತನಾಡುತ್ತಾರೆ. ಮತ್ತೆ, 3ಎ ಮತ್ತು 3ಬಿ ಎಂದು ಇದೆ. ಅದನ್ನು ಮಾಡಿದಾಗ ಸಾಕಷ್ಟು ಕಿರುಕುಳವನ್ನು ಮಾಡುತ್ತಾರೆ. ಅವರುಗಳನ್ನು ತಿರುಗಿಸುವುದು ಮತ್ತು ಅವರಿಗೆ ಪದೇ ಪದೇ ನೋಟೀಸ್ ಕೊಡುತ್ತಾರೆ. ಯಾವುದೇ ಒಂದು ನೋಟೀಸ್ ಕೊಟ್ಟಾಗ ಅದಕ್ಕೆ ಒಂದು ಸಮಯ ಇರುತ್ತದೆ. ಇಷ್ಟು ದಿವಸಗಳಲ್ಲಿ ಇದಕ್ಕೆ ಉತ್ತರ ಕೊಡಬೇಕೆಂದು ಹೇಳಿ ಅದಕ್ಕೆ ಟೈಮ್ ಬಾಂಡ್ ಇರುತ್ತದೆ. ಅಂದರೆ ಅದಕ್ಕೆ 30 ದಿವಸಗಳು, 15 ದಿವಸಗಳು ಎಂದು ಅದರಲ್ಲಿ ಬರೆಯುತ್ತಾರೆ. ಅದನ್ನು ಬರೆದು,

ಮತ್ತೆ ಅದಕ್ಕೆ ರಿಪ್ಲೇ ಮಾಡಿ, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿದ ಮೇಲೆಯೂ ಕೂಡ ಅದಕ್ಕೆ ಉತ್ತರ ಬರುವುದಿಲ್ಲ. ಮತ್ತೆ 2-3 ತಿಂಗಳು ಕಳೆದ ಮೇಲೆ, ಮತ್ತೆ ಇನ್ನೊಂದು ಪ್ರಶ್ನೆಯನ್ನು ಕೇಳುತ್ತಾರೆ. ಅದು ಏನೇ ಕೇಳಲಿ.

**ಸಭಾಪತಿಯವರು:-** ಇದರ ಬಗ್ಗೆ ಏನು ಮಾಡಬೇಕೆಂದು ಹೇಳಿ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಇಂತಹ ಒಂದು ಕಿರುಕುಳವನ್ನು ತಪ್ಪಿಸುವ ಸಲುವಾಗಿ ತಮ್ಮ ಮೂಲಕ ಕೈಜೋಡಿಸಿ ಮನವಿ ಮಾಡಿಕೊಳ್ಳುತ್ತೇನೆ. ಇಂತಹ ಕಿರುಕುಳ ಕಡಿಮೆಯಾಗಬೇಕು. ಜಿ.ಎಸ್.ಟಿ. ನೆಪದಲ್ಲಿ ಅಧಿಕಾರಿಗಳಿಂದ ಕಿರುಕುಳ ಜಾಸ್ತಿಯಾಗಿದೆ. ಈ ಬಗ್ಗೆ ಅವರನ್ನು ಕೇಳಿದಾಗ, " ನಾವು ಏನು ಮಾಡಲಿಕ್ಕೆ ಆಗುತ್ತದೆ ಎಂದು, ಈ ಬಗ್ಗೆ ಸರ್ಕಾರದಲ್ಲಿ ನಮ್ಮ ಪ್ರಾಣ ಹಿಂಡುತ್ತಾರೆ. ಅಷ್ಟೋ ಇಷ್ಟೋ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಇದರಲ್ಲಿ ನಮ್ಮದೇನೂ ತಪ್ಪಿಲ್ಲವೆಂದು ಹೇಳುತ್ತಾರೆ ಎಂಬುದಾಗಿ ಟ್ರೇಡರ್ಸ್ ತಮ್ಮ ಅಸಮಾಧಾನವನ್ನು ವ್ಯಕ್ತ ಮಾಡುತ್ತಾರೆ.

**ಸಭಾಪತಿಯವರು:-** ಇದರ ಬಗ್ಗೆ ನೀವು ಭಾಷಣ ಮಾಡಬೇಡಿ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಈ ಬಗ್ಗೆ ಆಯುಕ್ತರಿಗೆ ನಾನೇ ಸ್ವತಃ ಪತ್ರವನ್ನು ಬರೆದಿದ್ದೇನೆ. ಅವರು ಈ ಬಗ್ಗೆ ಉತ್ತರವನ್ನೂ ಸಹ ಕೊಡುವುದಿಲ್ಲ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರತಕ್ಕಂತಹ ಪ್ರಶ್ನೆಗಳಿಗೆ ಅಂಕಿ-ಸಂಖ್ಯೆ ಸಮೇತ ಉತ್ತರವನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ಇದಕ್ಕೂ ಮೊದಲು ಮುಖ್ಯಮಂತ್ರಿಗಳು ಇಲ್ಲಿ ಇದ್ದಂತಹ ಸಂದರ್ಭದಲ್ಲಿ ಈ ವಿಷಯಗಳನ್ನು ಹೇಳಿದ್ದಾರೆ. ಅದು ಏನೆಂದರೆ, ಅಧಿಕಾರಿಗಳು ವಿಳಂಬ ಮಾಡುವಂತಹದ್ದು, ಹಣವನ್ನು ಕೇಳುವಂತಹದ್ದು, ಅವರಿಗೆ ಕಿರುಕುಳ ಕೊಡುವಂತಹ ವಿಷಯಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ, ಅವರು ಕೇಳಿರುವಂತಹ ವಿಷಯಗಳಿಗೆ ಸಂಬಂಧಪಟ್ಟಂತೆ ಅಂಕಿ-ಸಂಖ್ಯೆಗಳನ್ನು ಕೊಟ್ಟಿದ್ದಾರೆ. ತಾವು ಹೇಳಿರುವುದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮುಂದೆ ಈ ರೀತಿ ಆಗದಂತೆ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಡುತ್ತೇವೆ. ಜೊತೆಗೆ ಬೇಕಾದರೆ, ತಮ್ಮ ಜೊತೆಯಲ್ಲಿ ಒಂದು ಸಭೆ ಸಹಿತ ವ್ಯವಸ್ಥೆ ಮಾಡಿ. ಏಕೆಂದರೆ, ಇದು ತಮ್ಮ ಸ್ವಂತ ವಿಷಯವಲ್ಲ. ಇದು ಸಾಮಾನ್ಯ ವಿಷಯ. ಸಾಮಾನ್ಯವಾಗಿ ಆಗುತ್ತಿರುವಂತಹ ಮತ್ತು ಅನಧಿಕೃತವಾಗಿ ಆಗುತ್ತಿರುವಂತಹದ್ದು ಆಗಿರುತ್ತದೆ. ಈ ವಿಷಯವಾಗಿ ಅಧಿಕಾರಿಗಳ ಜೊತೆ ಒಂದು ಸಭೆಯನ್ನು ಮಾಡಿ, ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರುತ್ತೇನೆ. ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಟಿ.ಎ. ಶರವಣ:-** ಇದನ್ನು ಯಾವಾಗ ಮಾಡುತ್ತೀರಿ? ಒಂದು ತಿಂಗಳಲ್ಲಿ ಮಾಡುತ್ತೀರಾ?

**ಶ್ರೀ ಎನ್.ಎಸ್.ಬೋಸರಾಜು:-** ಹೌದು ಒಂದು ತಿಂಗಳ ಒಳಗಡೆ ಮಾಡುತ್ತೇವೆ.

**ಶ್ರೀ ಟಿ.ಎ. ಶರವಣ:-** ದಯಮಾಡಿ ಇದನ್ನು ಒಂದು ತಿಂಗಳ ಒಳಗಡೆ ಮಾಡಿ. ಸರ್ಕಾರಕ್ಕೆ ರೆವಿನ್ಯೂ ಸಹ ಹೆಚ್ಚಾಗುತ್ತದೆ.

**ಪ್ರಶ್ನೆ ಸಂಖ್ಯೆ1148**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಎತ್ತಿನಹೊಳೆ ಯೋಜನೆ ಮುಖಾಂತರ ದಕ್ಷಿಣ ಕನ್ನಡ ಗಡಿಯಿಂದ ನೀರನ್ನು ಬೇರೆ ಕಡೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದಾಗ ಕುಡಿಯುವ ನೀರಿಗಾಗಿ ಈ ಒಂದು ಯೋಜನೆ ಅಂದರೆ ಪಶ್ಚಿಮವಾಹಿನಿ ಯೋಜನೆಗೆ ಬೇಡಿಕೆಯನ್ನು ಇಡಲಾಗಿದೆ. ಇದು 2017-18 ರಲ್ಲಿ ಜಾರಿಗ ಬಂತು. ಅಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಮಾನ್ ಸಿದ್ದರಾಮಯ್ಯನವರು ಒಂದು ವಿಶೇಷ ಯೋಜನೆಯನ್ನು ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಮಂಗಳೂರು, ಕೊಡಗು ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ನೀರಿನ ಮಟ್ಟವನ್ನು ಮೇಲೆ ತರಲಿಕ್ಕೆ, ಉತ್ತಮ ಪಡಿಸಲಿಕ್ಕೆ ಪಶ್ಚಿಮವಾಹಿನಿ ಯೋಜನೆಯನ್ನು ಕೊಟ್ಟರು ಮತ್ತು ಇದಕ್ಕೆ ಸಾಕಷ್ಟು ಅನುದಾನವನ್ನು ಕೊಟ್ಟಿದ್ದರು. ಆದರೆ, ಇವತ್ತು ಏನಾಗುತ್ತಿದೆ ಎಂದರೆ ನಾನು ಕಳೆದ 3 ವರ್ಷದ ಕಾಮಗಾರಿಯ ಪಟ್ಟಿಯನ್ನು ಕೇಳಿದ್ದೇನೆ.

(ಮುಂದು)

(1004) 19.12.2024 10.50 ಎಸ್‌ವಿ-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಮುಂದು):**

ನಮ್ಮ ಜಿಲ್ಲೆಯಲ್ಲಿ ಹೆಚ್ಚು ಮಳೆ ಬರುತ್ತದೆ. ನೀರು ನೇರವಾಗಿ ಸಮುದ್ರವನ್ನು ಸೇರುತ್ತದೆ. ಸಮುದ್ರಕ್ಕೆ ಸೇರುವ ಮೊದಲು ಆ ನೀರನ್ನು ಕೃಷಿ ಮತ್ತು ಜನೋಪಯೋಗಕ್ಕೆ ಬಳಸಬೇಕೆನ್ನುವಂಥದ್ದು ಈ ಯೋಜನೆಯ ಪ್ರಮುಖ ಉದ್ದೇಶ. ಅದೇ ರೀತಿ ಕಿಂಡಿ ಅಣೆಕಟ್ಟುಗಳನ್ನು ಹಾಕಬೇಕು. ಕಿಂಡಿ ಅಣೆಕಟ್ಟುಗಳು 500 ಇವೆ, 700 ಇವೆ ಎಂದು ಹೇಳುತ್ತೀರಿ. ಕಿಂಡಿ ಅಣೆಕಟ್ಟುಗಳಿಗೆ ಹಲಗೆ ಹಾಕಿ ನೀರು ಸಂಗ್ರಹಿಸಲು ನೀವು ದುಡ್ಡು ಬಿಡುಗಡೆ ಮಾಡುತ್ತಿಲ್ಲ. ಅಣೆಕಟ್ಟುಗಳಿವೆ, ಅದಕ್ಕೆ ಹಲಗೆಗಳಿರುವುದಿಲ್ಲ. ಹಲಗೆಗಳನ್ನು ಹಾಕದಿದ್ದರೆ water table ಅನ್ನು ಹೇಗೆ ಮೇಲಕ್ಕೆ ತರುತ್ತೀರಿ? ಅದರಿಂದ ಕೃಷಿಕರಿಗೆ ಹೇಗೆ ಸಹಾಯವಾಗುತ್ತದೆ?

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳನ್ನು ಅಧಿಕಾರಿಗಳ ಜೊತೆಯಲ್ಲಿ visit ಮಾಡಿ ಬಂದಿದ್ದೇನೆ. ಅಲ್ಲಿನ ಶಾಸಕರ ಜೊತೆಯಲ್ಲಿಯೂ ಸಂಪರ್ಕದಲ್ಲಿದ್ದೇನೆ. ಅವರು ಕೇಳಿರುವಂತಹ ಎಲ್ಲಾ ಮಾಹಿತಿಗಳನ್ನು ಅವರಿಗೆ ಕೊಟ್ಟಿದ್ದೇವೆ. ಅಂಕಿ-ಸಂಖ್ಯೆಗಳನ್ನು ಕೊಟ್ಟಿದ್ದೇವೆ. 541 ಕಾಮಗಾರಿಗಳು ಪೂರ್ಣಗೊಂಡಿವೆ. Indirect ಆಗಿ ತಾವು ಹೇಳಿದಂತೆ ಅಂತರ್ಜಲ ಅಭಿವೃದ್ಧಿ ಮಾಡುವುದಕ್ಕೆ 2.66 ಲಕ್ಷ ಹೆಕ್ಟೇರ್‌ಗಳಿಗೆ ಅನುಕೂಲವಾಗುವಂತಹ ಅವಕಾಶವಿದೆ. ಮುಖ್ಯವಾಗಿ ತಾವು ಕಿಂಡಿ ಅಣೆಕಟ್ಟುಗಳಿಗೆ ಹಲಗೆ ಒದಗಿಸುವ ಬಗ್ಗೆ ವಿವರಗಳನ್ನು ಕೇಳಿದ್ದೀರಿ. ಅದನ್ನು ಸಹಿತ ಕೊಟ್ಟಿದ್ದೇವೆ. ಒಟ್ಟಾರೆ 2021-22ರಿಂದ 2024-25ರವರೆಗೆ

ಕಿಂಡಿ ಅಣೆಕಟ್ಟುಗಳ ಸಂಖ್ಯೆ 1283. ಹಲಗೆ ಒದಗಿಸಿರುವ ಸಂಖ್ಯೆ 61. ಇವುಗಳ maintenance ಗಾಗಿ ಈಗಾಗಲೇ ರೂ.144 ಲಕ್ಷ ಕೊಟ್ಟಿದ್ದೇವೆ. ಎಲ್ಲಿಯಾದರೂ ನೀರು ಪೋಲಾಗುತ್ತಿದ್ದರೆ ಅದನ್ನು ಸರಿ ಪಡಿಸಲಿಕ್ಕೆ ನಾವು ಈಗಾಗಲೇ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಟ್ಟಿದ್ದೇವೆ. ಮುಂದೇನಾದರೂ ಇದ್ದರೆ ನಾನು ತಮ್ಮ ಜಿಲ್ಲೆಗೆ ಬಂದು ಅದನ್ನು ಸರಿಪಡಿಸುವ ಕ್ರಮವನ್ನು ಕೈಗೊಳ್ಳುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಚಿವರೆ, ಮಳೆನೀರು ಸಮುದ್ರವನ್ನು ಸೇರುವ ಮೊದಲು ಅದನ್ನು ತಡೆಗಟ್ಟಿ ಆ ಮೂಲಕ ರೈತರಿಗೆ ಸಹಾಯ ಮಾಡಬೇಕು, ಕುಡಿಯುವ ನೀರಿಗೆ ಸಹಾಯವಾಗಬೇಕು. Water table ಮೇಲೆ ತರಬೇಕು. ಅದಕ್ಕೆ ನೀವು ಮಾಡಿರುವ ಕಾಮಗಾರಿಗಳಲ್ಲಿ ಒಂದೇ ಒಂದು ಕೂಡ vented dam ರೀತಿಯ ಕಾಮಗಾರಿ ಇರುವುದಿಲ್ಲ. ನೀವು ಬೇರೆ ಬೇರೆ ಕಾಮಗಾರಿಗಳನ್ನು ಮಾಡುತ್ತಾ ಹೋದರೆ ಈ ಯೋಜನೆಗೆ ಸಂಬಂಧಪಟ್ಟಂತಹ ಕಾಮಗಾರಿಗಳು ಯಾವುದೂ ಇಲ್ಲ. ಕೇವಲ ಸಣ್ಣ ನೀರಾವರಿಗೆ ಬೇಕಾದಂತಹ ಕಾರ್ಯಕ್ರಮವನ್ನು ತಾವು ಮಾಡಿದರೆ ಈ ಪಶ್ಚಿಮ ವಾಹಿನಿ ಯೋಜನೆಗೆ ಇಷ್ಟು ದುಡ್ಡು ಕೊಟ್ಟು ಏನೂ ಪ್ರಯೋಜನವಾಗದಿದ್ದರೆ ಹೇಗೆ? ಇದರ ಬಗ್ಗೆ ತಾವು ಗಮನ ಹರಿಸಲೇಬೇಕು. ನಮ್ಮ ಜಿಲ್ಲಾ ಕೆಡಿಪಿ ಸಭೆಯಲ್ಲಿ ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದೆ. ಎಲ್ಲರೂ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಒಂದೇ ಒಂದು vented dam ಗಳಿಗೆ ಗೇಟ್ ಹಾಕುವುದಿಲ್ಲ. ನೀರು ಸಂಗ್ರಹಿಸುವುದಿಲ್ಲ ಮತ್ತು ಇಷ್ಟು ದುಡ್ಡು ನಿರುಪಯುಕ್ತ ಆಗುತ್ತದೆ ಎನ್ನುವ ದೂರುಗಳಿವೆ. ಇದಕ್ಕಾಗಿ ತಾವು ಬಂದು ಸಭೆಯನ್ನು ನಡೆಸಬೇಕು.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯಲ್ಲ. ನೀರು ನಿಲ್ಲುವುದಿಲ್ಲ ಎಂದು ಸಾರಾಸಗಟಾಗಿ ಹೇಳುವ ಪ್ರಶ್ನೆಯೇ ಇಲ್ಲ. ನಾನೇ ಅಲ್ಲಿರತಕ್ಕಂತಹ ಸಂಬಂಧಪಟ್ಟ ಶಾಸಕರ ಜೊತೆ ನೋಡಿದ್ದೇನೆ. ಮಾನ್ಯ ಮಂಜುನಾಥ ಭಂಡಾರಿಯವರು ನನ್ನ ಇಡೀ ಪ್ರವಾಸದಲ್ಲಿ ಜೊತೆಯಲ್ಲಿಯೇ ಇದ್ದರು. ಅನೇಕ ಕಡೆಗಳಲ್ಲಿ ನೀರು ತುಂಬಿಸಿದ್ದು, leakage ಇರುವುದನ್ನು ಸರಿಪಡಿಸಬೇಕೆಂದು ನಮ್ಮ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಟ್ಟಿದ್ದೇವೆ. Specific ಆಗಿ ಸದಸ್ಯರು ಯಾವುದಾದರೂ ಇದೆಯೆಂದು ಹೇಳಿದರೆ ನಾನು ಅದರ ಬಗ್ಗೆ ಗಮನ ಹರಿಸುತ್ತೇನೆ.

**ಪ್ರಶ್ನೆ ಸಂಖ್ಯೆ 1188**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ಅಲ್ಲಿ ಆಗುವಂತಹ ಅಕ್ರಮಗಳ ಕುರಿತು ಅವರೇ ಒಪ್ಪಿಕೊಂಡಿದ್ದಾರೆ.

ನಮ್ಮ ರಾಜ್ಯದ ವಿಜಯಪುರ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ರೈತರ ಜೀವನಾಡಿಯಾಗಿರುವುದು ಭೀಮಾ ನದಿ. ಭೀಮಾ ನದಿಯಿಂದ ಮಹಾರಾಷ್ಟ್ರದಿಂದ ನಮ್ಮ ರಾಜ್ಯಕ್ಕೆ ಎಷ್ಟು ನೀರು ಬರುತ್ತದೆ ಎಂದು ಕೇಳಿದ್ದೆನು. ಈಗಾಗಲೇ ಬಿಡಬೇಕಾದಂತಹ ನೀರನ್ನು ಅಕ್ರಮವಾಗಿ ಮಹಾರಾಷ್ಟ್ರದವರು ಬಳಸಿಕೊಳ್ಳುತ್ತಿದ್ದಾರೆ ಎಂದು ಮಾನ್ಯ ಸಚಿವರಿಗೆ ನನ್ನ ಪ್ರಶ್ನೆಯ ಮೂಲಕ ಹೇಳಿದ್ದೆನು. ಅವರ ಉತ್ತರದಲ್ಲಿ ಈ ಆರೋಪಕ್ಕೆ ಅವರು partially ಒಪ್ಪಿಕೊಂಡಿದ್ದಾರೆ. ಅವರು ಉತ್ತರ ನೀಡಿದರೆ ನಾನು ಪೂರಕ ಪ್ರಶ್ನೆಯನ್ನು ಕೇಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಬೇಸಿಗೆ ಕಾಲದಲ್ಲಿ ಗಡಿ ಭಾಗಗಳಲ್ಲಿ ನೀರಿನ ಕೊರತೆಯಾದಾಗ ಈ ಎಲ್ಲಾ ಸಮಸ್ಯೆಗಳು ಬರುತ್ತಿವೆ. ನಾನು ಸಂಪೂರ್ಣ ವಾಸ್ತವಾಂಶ ಏನಿದೆಯೆಂದು ತಿಳಿಸಿದ್ದೇನೆ. ಕೆಲವು ಸಂದರ್ಭದಲ್ಲಿ ನೀರು ಹೆಚ್ಚಿಗೆಯಾದಾಗ ಅವರು ನಮಗೆ ಸಹಕಾರ ಕೊಡುತ್ತಾರೆ. ನೀರು ಇಲ್ಲದೆ ಹೋದಾಗ ಇಲ್ಲವೆಂದು ಹೇಳುತ್ತಾರೆ. ಇದು ಇಲ್ಲಿ ಮಾತ್ರವಲ್ಲ, ಮಹಾರಾಷ್ಟ್ರ, ತೆಲಂಗಾಣ ಹಾಗೂ ಬೇರೆ ರಾಜ್ಯಗಳಲ್ಲಿಯೂ ಆಗುತ್ತದೆ. ಕೊರತೆಯಿದ್ದಾಗ ನಿಭಾಯಿಸಬೇಕು ಎನ್ನುವುದು ತಮ್ಮ ಭಾವನೆಯಿದೆ. ಇದು personal relationship ಮೇಲೆ ಹೋಗುತ್ತದೆ. ಕೆಲವು ಮಂತ್ರಿಗಳು, ಅಧಿಕಾರಿಗಳು liberal ಆಗಿ ಕೊಡೋಣ ಎಂದಾಗ ನಾವೂ ಕೊಡಬೇಕಾಗುತ್ತದೆ. ವಿಜಯಪುರ ಭಾಗದಿಂದ ಅಲ್ಲಿಗೆ, ಮಹಾರಾಷ್ಟ್ರದಿಂದ ನಮಗೆ ಈ ರೀತಿ ಕೊಡಬೇಕಾಗುತ್ತದೆ. ತಮ್ಮ ವಿಚಾರದ ಬಗ್ಗೆ ನಮಗೆ ಅರಿವಿದೆ. ಪರಿಸ್ಥಿತಿಗನುಗುಣವಾಗಿ ಸೂಕ್ತ ಕಾಲದಲ್ಲಿ ನಾವೂ ಅವರಿಗೆ ಪತ್ರವನ್ನು ಬರೆಯುತ್ತಿರುತ್ತೇವೆ; ಅವರೂ ನಮಗೆ ಪತ್ರವನ್ನು ಬರೆಯುತ್ತಿರುತ್ತಾರೆ. ಇದನ್ನು long-time ಮಾಡಲಿಕ್ಕೆ ಆಗುವುದಿಲ್ಲ. ನಾನು ತಮಗೆ ನೀಡಿರುವ ದಾಖಲೆಗಳು ಹಾಗೂ ಮಾಹಿತಿ ಸರಿಯಾಗಿದೆ. ಇನ್ನೂ ಏನಾದರೂ ಇದೆಯೆಂದರೆ ಪ್ರತ್ಯೇಕವಾಗಿ ಮಾತನಾಡೋಣ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹೇಳಿದ್ದು ಸರಿಯಿದೆ. ಅದರ ಮುಖ್ಯ ಉದ್ದೇಶ ಇಷ್ಟೆ. ನ್ಯಾಯಮೂರ್ತಿ ಬಚಾವತ್ ಆಯೋಗದ ಪ್ರಕಾರ ಪ್ರತಿವರ್ಷ ಭೀಮಾ ನದಿಗೆ ಕರ್ನಾಟಕಕ್ಕಾಗಿ 15 ಟಿಎಂಸಿ ನೀರು ಬಿಡಬೇಕು. ಅವರು 15 ಟಿಎಂಸಿ ನೀರು ಬಿಡುತ್ತಿಲ್ಲ. ಏಕೆಂದರೆ ಮಹಾರಾಷ್ಟ್ರದಲ್ಲಿ ಸೇನಾ ನದಿಗೆ ಸುರಂಗ ಮಾರ್ಗವನ್ನು ಹಾಕಿಕೊಂಡು ಆ ನೀರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ನಾವು ಕರ್ನಾಟಕದವರು ಸ್ವಲ್ಪ ಎಚ್ಚರಿಕೆಯಿಂದ ಇರಬೇಕು. ಏಕೆಂದರೆ ವಿಜಯಪುರ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳು ಬರಗಾಲಪೀಡಿತ ಪ್ರದೇಶವಾಗಿವೆ. ಅಲ್ಲಿ ಶಿವಕುಮಾರ ನಾಟೇಕರ ಎನ್ನುವ ಯುವಕನ ನೇತೃತ್ವದಲ್ಲಿ

ನಿರಂತರವಾಗಿ ಹೋರಾಟ ನಡೆಯುತ್ತಿದೆ. ಅವರು ಆಮರಣಾಂತ ಉಪವಾಸವನ್ನೂ ಕೈಗೊಂಡಿದ್ದರು. ಆಗ ಯಾವ ಸರ್ಕಾರವೂ ಚಕಾರ ಎತ್ತಲಿಲ್ಲ. ನಾಮ್‌ಕೇವಾಸ್ತೆ ನೀರು ಬಿಟ್ಟರು. ಇದು ಮೇಲಿಂದ ಮೇಲೆ ಆಗುತ್ತಿರುತ್ತದೆ. ಮಹಾರಾಷ್ಟ್ರದವರು ಅಕ್ರಮವಾಗಿ ನೀರನ್ನು ಬಳಸಿಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯಕ್ಕೆ ಬರಬೇಕಾದಂತಹ ನೀರು ಬರುತ್ತಿಲ್ಲ ಎನ್ನುವುದೇ ನನ್ನ ಉದ್ದೇಶ. ಇದಕ್ಕೆ ತಮ್ಮ ಪ್ರಯತ್ನವೇನು? ಇದಕ್ಕೆ ಯಾವ ರೀತಿಯಾದ ಕಟ್ಟುನಿಟ್ಟಿನ ಕ್ರಮ ಮತ್ತು ನಿರ್ಧಾರವನ್ನು ತೆಗೆದುಕೊಳ್ಳುತ್ತೀರಿ ಎಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸದಸ್ಯರೆ, ತಾವು ಈ ಸುರಂಗದ ಬಗ್ಗೆ ಹೊಸದಾಗಿ ತಿಳಿಸುತ್ತಿದ್ದೀರಿ. ಅದರ ಬಗ್ಗೆ ನಾನು ಒಂದು ತಂಡವನ್ನು ಕಳುಹಿಸಿ enquiry ಮಾಡುತ್ತೇನೆ. ಉತ್ತರದ ಕೊನೆಯಲ್ಲಿ ನಮಗೇನು ನಿರ್ಬಂಧವಿದೆ, ಅವರಿಗೆ ಏನು ನಿರ್ಬಂಧವಿದೆ ಎಂಬುದನ್ನು ತಿಳಿಸಿದ್ದೇನೆ. Distress ಸಂದರ್ಭದಲ್ಲಿ ಈ ಸಮಸ್ಯೆ ಇದೆ. ಈ ಸುರಂಗದ ಮೂಲಕ ನೀರು misuse ಆಗುತ್ತಿರುವ ಬಗ್ಗೆ ಒಂದು ವರದಿಯನ್ನು ತರಿಸಿಕೊಳ್ಳುತ್ತೇನೆ. ಬಹುಶಃ ಮುಂದಿನ ಅಧಿವೇಶನದ ವೇಳೆಗೆ ಒಂದು detailed report ನಾನು ಸಿದ್ಧ ಮಾಡಿಕೊಂಡು ತಮಗೆ ತಿಳಿಸುತ್ತೇನೆ.

**ಪ್ರಶ್ನೆ ಸಂಖ್ಯೆ 1195**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರವನ್ನು ನೋಡಿ ನಾನು ಯಾಕಾದರೂ ಪ್ರಶ್ನೆಯನ್ನು ಕೇಳಿದೆನೋ ಎನಿಸುತ್ತಿದೆ. ಕೊಟ್ಟಿರುವ ಉತ್ತರವನ್ನು ನೋಡಲಿಕ್ಕೂ ಈಗ ನಮಗೆ ಸಾಧ್ಯವಿಲ್ಲ. ಮುಖ್ಯವಾಗಿ ಕೆಲವೊಂದು ಮಾಹಿತಿಗಳನ್ನು ನಾನು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಕೇಳಬಯಸುತ್ತೇನೆ.

ಬಿಬಿಎಂಪಿಯ 6815 ಆಸ್ತಿಗಳ ಪೈಕಿ 116 ಆಸ್ತಿಗಳ ಗುತ್ತಿಗೆ ಮುಗಿದಿದ್ದರೂ ಸಹ ಅವುಗಳನ್ನು ಇನ್ನೂ ತೆರವುಗೊಳಿಸಿ, ಅದನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡಿರುವುದಿಲ್ಲ. ಕನ್ಸರ್ವೆನ್ಸಿಗಳು ಎಷ್ಟು ಇವೆ ಎನ್ನುವ ಪ್ರಶ್ನೆಗೆ 201 ಕನ್ಸರ್ವೆನ್ಸಿ ಇವೆ ಎಂದು ಉತ್ತರ ನೀಡಿದ್ದಾರೆ. ಹಿಂದಿನ ಕಾಲದಲ್ಲಿ ಲೇಔಟ್ ಮಾಡಿದಾಗ ಕನ್ಸರ್ವೆನ್ಸಿ ಮಾಡಿದ್ದು, ಅದನ್ನೆಲ್ಲಾ ಅಕ್ಕಪಕ್ಕದ ಜನರು ಕಬಳಿಸಿಕೊಂಡಿದ್ದಾರೆ. ಅದರಲ್ಲಿ unauthorized construction ಮಾಡಿಕೊಂಡಿದ್ದಾರೆ. ಅದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸಬೇಕು ಎನ್ನುವುದು ನನ್ನ ಉದ್ದೇಶ. ಬಿಬಿಎಂಪಿಯು ತನ್ನದೇ ಆಸ್ತಿಯನ್ನು ಹೊಂದಿದ್ದರೂ ಸಹ ಬಿಬಿಎಂಪಿ ಕಟ್ಟಡಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಬಾಡಿಗೆ ಕಟ್ಟಿ ನಡೆಸುತ್ತಿದ್ದಾರೆ ಎನ್ನುವುದು ಬಿಬಿಎಂಪಿ ಮೇಲೆ ನನ್ನ ಆರೋಪವಾಗಿದೆ.

(ಮುಂದು)

(1005) ದಿ.19.12.2024 11.00 ಕೆಜಿ. ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದ ರಾಜು (ಮುಂದು):**

ಇದಲ್ಲದೇ, ಸುಮಾರು 50,000 ಕೋಟಿ ರೂಪಾಯಿಗಳಷ್ಟು ಆಸ್ತಿ ಇದೆ ಎನ್ನುವ ಮಾಹಿತಿ ಇದೆ. ಏಕೆಂದರೆ, ಈ ಮಾಹಿತಿಯನ್ನು ಒಂದು ಪತ್ರಿಕೆಯಲ್ಲಿಯೂ ಕೊಟ್ಟಿದ್ದಾರೆ. ಸುಮಾರು 50,000 ಕೋಟಿ ರೂಪಾಯಿಗಳ ಆಸ್ತಿಯಿದ್ದರೂ ಸಹ, ಇವತ್ತಿಗೂ ಬಿ.ಬಿ.ಎಂ.ಪಿ.ಯ ಕಛೇರಿಯ ಕಟ್ಟಡಗಳು ಬಾಡಿಗೆ ಕಟ್ಟಡದಲ್ಲಿರುವಂತಹ ಪ್ರಮೇಯ ಏನು? ಬಿ.ಬಿ.ಎಂ.ಪಿ.ಗೆ ಸಾಕಷ್ಟು ಬಾಡಿಗೆ ಬರುವಂತಹ ಅವಕಾಶ ಇದೆ. ಹಾಗಾಗಿ, ಬಿ.ಬಿ.ಎಂ.ಪಿ.ಯ ಸ್ವಂತ ಕಟ್ಟಡಗಳಲ್ಲಿಯೇ ಬಿ.ಬಿ.ಎಂ.ಪಿ.ಯ ಕಛೇರಿಗಳನ್ನು ನಿರ್ವಹಿಸಬೇಕು ಎನ್ನುವುದು ನನ್ನ ಒತ್ತಾಯವಾಗಿದೆ. ಇದಲ್ಲದೇ, ಗುತ್ತಿಗೆ ಅವಧಿ ಮೀರಿದ್ದರೂ ಸಹ, ಆ ಕಟ್ಟಡಗಳನ್ನು ಕೇವಲ 10 ರೂಪಾಯಿಗಳಿಗೆ, 15 ರೂಪಾಯಿಗಳಿಗೆ, 25 ರೂಪಾಯಿಗಳಿಗೆ highest ಬಾಡಿಗೆಗೆ ಕೊಟ್ಟಿದ್ದಾರೆ. ಇದರಲ್ಲಿ ಹೆಚ್ಚು ಬಾಡಿಗೆ ಬರುವಂತಹ ಅವಕಾಶ ಇದೆ. ನಾವು ಇದರಲ್ಲಿ ವಾರ್ಷಿಕವಾಗಿ estimate ಮಾಡಿದ ಪ್ರಕಾರ, ಸುಮಾರು 600 ಕೋಟಿ ರೂಪಾಯಿಗಳಿಗೂ ಅಧಿಕವಾಗಿ ಬಾಡಿಗೆಯನ್ನು ತೆಗೆದುಕೊಳ್ಳುವಂತಹ ಅವಕಾಶ ಇದೆ. ಮಾನ್ಯ ಸಚಿವರ ಬಳಿ ಇರುವಂತಹ ದಾಖಲೆಗಳ ಪ್ರಕಾರ, ಇಷ್ಟು ಮಾಹಿತಿಯನ್ನು ನೀಡಿದ್ದಾರೆ. ಮಾನ್ಯ ಸಚಿವರು ಕೇವಲ

ದಾಖಲೆಗಳನ್ನು ನೀಡಿದರೆ ಸಾಲದು, ಇದರ ಬಗ್ಗೆ ಅಧಿಕಾರಿಗಳು physical verification ಮಾಡಿ ಈ ಆಸ್ತಿಗಳಲ್ಲಿ ಯಾವುದು ಒತ್ತುವರಿಯಾಗಿದೆ. ಯಾವುದು ಅಕ್ರಮ ಕಟ್ಟಡ ಆಗಿದೆ, ಯಾವುದರ ಗುತ್ತಿಗೆ ಅವಧಿ ಮುಗಿದಿದೆ ಎಂಬುದರ ಬಗ್ಗೆ personal ಆಗಿ inspection ಮಾಡಿ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಒತ್ತಾಯವಾಗಿದೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಬಿ.ಬಿ.ಎಂ.ಪಿ.ಗೆ ಅನುಕೂಲವಾಗುವಂತಹ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಹಾಗಾಗಿ, ನಾನು ಮಾನ್ಯ ಸದಸ್ಯರನ್ನು ಅಭಿನಂದಿಸುತ್ತೇನೆ. ನಾನು ಇದರ ಬಗ್ಗೆ ದೀರ್ಘವಾಗಿ ಆಲೋಚನೆ ಮಾಡಿದ್ದೇನೆ. ಬಿ.ಬಿ.ಎಂ.ಪಿ.ಯ ಆಸ್ತಿಗಳನ್ನು ಮೊದಲಿನಿಂದಲೂ ಬಾಡಿಗೆಗೆ ಕೊಟ್ಟಿದ್ದಾರೆ. ಈಗ ಅವುಗಳಲ್ಲಿ ಒಂದನ್ನು ಸಹ ಖಾಲಿ ಮಾಡಿಸುವುದಕ್ಕೆ ಆಗಿಲ್ಲ. ಆ ಜಾಗಗಳಲ್ಲಿ ದೇವಸ್ಥಾನಗಳನ್ನು ಕಟ್ಟಿರುತ್ತಾರೆ, ಸಮುದಾಯ ಭವನಗಳನ್ನು ಕಟ್ಟಿರುತ್ತಾರೆ, ಕೆಲವು ಕಡೆ ಶಾಲೆಗಳನ್ನು ಕಟ್ಟಿದ್ದಾರೆ. ಇನ್ನೂ ಕೆಲವು ಕಡೆಗಳಲ್ಲಿ ಅಂಗಡಿಗಳನ್ನು ಕಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ಈ ಹಿಂದೆ 7 ರೂಪಾಯಿಗಳಿಗೆ, 8 ರೂಪಾಯಿಗಳಿಗೆ, 10 ರೂಪಾಯಿಗಳಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಹಾಗಾಗಿ, ಈಗ ಹೊಸದಾಗಿ ಯಾವುದೇ development ಅನ್ನು ಮಾಡುವುದಕ್ಕೆ ಆಗುತ್ತಿಲ್ಲ. ಅಲ್ಲದೇ, ಅವರನ್ನು vacate ಮಾಡಿಸುವುದಕ್ಕೆ ಆಗುತ್ತಿಲ್ಲ. ನಾನು ಅದಕ್ಕೆ ಒಂದು ಪ್ರತ್ಯೇಕವಾದಂತಹ rules ಅನ್ನು ಹೊರಡಿಸಬೇಕೆಂದು ತೀರ್ಮಾನ ಮಾಡಿದ್ದೇನೆ. ಅವರನ್ನು vacate ಮಾಡಿಸಬೇಕೆಂದರೆ ನ್ಯಾಯಾಲಯಗಳು ಮಧ್ಯೆ ಮಧ್ಯೆ ಅಡ್ಡಬರುತ್ತವೆ. ಹಾಗಾಗಿ, ಅದನ್ನು ಅದಷ್ಟು regularise ಮಾಡುವುದಕ್ಕೆ ಯಾವ ರೀತಿ ಮಾಡಬಹುದು ಎನ್ನುವುದರ ಬಗ್ಗೆ ಯೋಚನೆ ಮಾಡಲಾಗುತ್ತಿದೆ. ಅಲ್ಲದೇ, ಅವರಿಗೆ One Time Settlement ಎಂದು ಏನಾದರೊಂದು guidance value ಗೆ ಕೊಡುವುದಕ್ಕೆ ಸಾಧ್ಯವೇ ಅಥವಾ Education Institution ರವರಿಗೆ concession ಕೊಡುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಬೇಕಾಗುತ್ತದೆ. ನಾವು ದೇವಸ್ಥಾನಗಳನ್ನು ಮುಟ್ಟುವುದಕ್ಕೆ ಆಗುವುದಿಲ್ಲ. ಹಾಗಾಗಿ, ನಾವು ಅವರಿಗೆ ಒಂದು ಪ್ರತ್ಯೇಕವಾದಂತಹ ಬೆಲೆಯನ್ನು ನಿಗದಿ ಮಾಡಿ ಅದನ್ನು ಅವರಿಗೆ ಬಿಡುವುದಕ್ಕೆ ಆಗುತ್ತದೆಯೇ ಅಥವಾ ಸಂಘ ಸಂಸ್ಥೆಗಳಿಗೆ ಕೊಡುವುದಕ್ಕೆ ಆಗುತ್ತದೆಯೇ ಎಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಈಗ ಉದಾಹರಣೆಗೆ ತಾವೆಲ್ಲರೂ ಬೆಂಗಳೂರಿನ ಮಾರುಕಟ್ಟೆಯನ್ನು ನೋಡಿರಬಹುದು. ಈ ಮಾರುಕಟ್ಟೆಯನ್ನು ಸುಮಾರು 15/20 ವರ್ಷಗಳ ಹಿಂದೆ ಕಟ್ಟಿರಬಹುದು. ಆ ಮಾರುಕಟ್ಟೆಯಲ್ಲಿನ third and fourth floor ಗೆ ಯಾರು ಸಹ ಹೋಗುತ್ತಿಲ್ಲ. ಆದರೆ, ಅವರಿಗೆಲ್ಲಾ ಅಂಗಡಿಗಳು allotment ಆಗಿವೆ. ಒಬ್ಬರು ಸಹ ಅಲ್ಲಿಗೆ ಹೋಗುತ್ತಿಲ್ಲ. ಅಲ್ಲದೇ, ಅವರು ಯಾರು

ಬಾಡಿಗೆ ಕಟ್ಟುತ್ತಿಲ್ಲ. ಈಗ ಅದನ್ನು Smart City ಯೋಜನೆಯಡಿಯಲ್ಲಿ ರಿಪೇರಿ ಮಾಡಲಾಗಿದೆ. ಅಲ್ಲಿ ಒಂದು ಬಿಬಿಎಂಪಿಯ ಕಛೇರಿಯನ್ನು ಪ್ರಾರಂಭ ಮಾಡಲಾಗಿದೆ. ಇದರ ಜೊತೆಗೆ ಬಿಬಿಎಂಪಿ ಕಛೇರಿಗಳಿಗೆ ಬಾಡಿಗೆಗೆ ಕಟ್ಟಡಗಳನ್ನು ತೆಗೆದುಕೊಳ್ಳುವ ಬದಲು ಬಿಬಿಎಂಪಿ ಕಟ್ಟಡಗಳಲ್ಲಿಯೇ ಕಛೇರಿಗಳನ್ನು ಮಾಡಿ ಎಂದು ಹೇಳಿದ್ದೇನೆ. ಅದಕ್ಕೆ ಕೆಲವು technical problems ಇವೆ. ಆದ್ದರಿಂದ, ಇದಕ್ಕೆ ಒಂದು ಹೊಸ ಪಾಲಿಸಿಯನ್ನು ತರುತ್ತಿದ್ದೇವೆ. ಈ ಪಾಲಿಸಿಯನ್ನು finalise ಮಾಡಿದ್ದೇವೆ. ಇದನ್ನು ಯಾವ ರೀತಿ ಸಕ್ರಮ ಮಾಡಬೇಕು ಎಂಬುದರ ಬಗ್ಗೆ ಚಿಂತನೆ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, ಬಿಬಿಎಂಪಿಯ ಸುಮಾರು 50,000 ಕೋಟಿ ರೂಪಾಯಿಗಳ ಆಸ್ತಿ ಇರುವುದು ನಿಜ. ನಾನು ಇಲ್ಲವೆಂದು ಹೇಳುವುದಿಲ್ಲ. ಇದರಿಂದ ಸರ್ಕಾರಕ್ಕೆ ಯಾವ ರೀತಿ ಆದಾಯ ಮಾಡಿಕೊಳ್ಳಬೇಕು ಎಂಬುದನ್ನು ಚಿಂತನೆ ಮಾಡುತ್ತಿದ್ದೇವೆ. ಇದರಲ್ಲಿ ಏನೇನು ಆಸ್ತಿ ಇದೆ, ಎಂಬುದನ್ನು ಎಲ್ಲಾ ಶಾಸಕರ ಗಮನಕ್ಕೆ ಬಂದು ವಿವರವಾಗಿ ಚರ್ಚೆ ಮಾಡಲಿ ಎಂದು ಉತ್ತರವನ್ನು ಕೊಟ್ಟಿದ್ದೇನೆ. ಈ ಉತ್ತರವನ್ನು ಒಂದು ಸಿಡಿಯಲ್ಲಿ ಕೊಡಬಹುದಾಗಿತ್ತು. ನಾನೇ ಇದನ್ನು public domain ಗೆ ಬಿಡೋಣವೆಂದು ಈ ಪುಸ್ತಕವನ್ನು ತಂದು ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಿ ಅವರ ಸಲಹೆಗಳು ಏನಾದರೂ ಇದ್ದರೆ ಹೇಳಲಿ. ನಾವು ಖಂಡಿತವಾಗಿ ಸರ್ಕಾರದ ಆಸ್ತಿಯನ್ನು, ಬಿಬಿಎಂಪಿ ಆಸ್ತಿಯನ್ನು ಉಳಿಸಿಕೊಳ್ಳುವುದಕ್ಕೆ ಮತ್ತು ಅದರ ಆದಾಯವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಏನು ಮಾಡಬೇಕು ಅದನ್ನು ಮಾಡುತ್ತೇವೆ.

**ಶ್ರೀ ಗೋವಿಂದ ರಾಜು:-** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಷಯ ಇದೆ. ಶ್ರೀ ಅನ್ವರ್ ಎನ್ನುವವರು ಸುಮಾರು ಬಾರಿ ಬಿಬಿಎಂಪಿಗೆ ಮನವಿ ಕೊಟ್ಟಿದ್ದು, ಅವರ ಮನೆಯ conservancy ಯಲ್ಲಿ ಅಡ್ಡಲಾಗಿ 6 x 40 ಅಡಿಗಳ ಜಾಗದಲ್ಲಿ ಶ್ರೀ ನಾಸ್ಸೀರ್ ಎನ್ನುವವರು ಅಂಗಡಿ ಇಟ್ಟಿದ್ದು, ಸುಮಾರು ಬಾರಿ ಪತ್ರ ವ್ಯವಹಾರ ಮಾಡಿ ಇದರ ಪ್ರತಿಯನ್ನು ಬಿಬಿಎಂಪಿ ಕಛೇರಿಯಲ್ಲಿ ಪಡೆಯಲಾಗಿದೆ. ಇದು ಶಿವಾಜಿನಗರ ಏರಿಯಾಕ್ಕೆ ಬರುತ್ತದೆ. ಈ ವಿಚಾರದಲ್ಲಿ ಅವರ ಒಂದು ನೋವನ್ನು ಮಾನ್ಯ ಸಚಿವರು ಆಲಿಸಿ ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ನನ್ನ ಒಂದು ಮನವಿಯಾಗಿದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅದರ ಪ್ರತಿಯನ್ನು ಕೊಡಲಿ. ನಾನು ಅದರ ಬಗ್ಗೆ ನೋಡುತ್ತೇನೆ. ಬೆಂಗಳೂರಿನಲ್ಲಿ ಮೊದಲು ಒಂದು ಕಾಲದಲ್ಲಿ ಏನಿತ್ತು ಎಂದರೆ, ಮಲ್ಲೇಶ್ವರಂ, ಗಾಂಧೀನಗರ, ಚಾಮರಾಜಪೇಟೆ ಮತ್ತು ಶಿವಾಜಿನಗರದಲ್ಲಿರುವ ಮನೆಗಳ ಹಿಂದೆ ಜಾಗ ಕೊಟ್ಟು ಹಿಂದೆಗಡೆ ಒಂದು conservancy ಒಂದು 12 x 15 ಅಡಿ ಜಾಗವನ್ನು pipe ಗಳಿಗೆ services ಗೆ ಎಂದು ಬಿಡುತ್ತಿದ್ದರು. ಈಗ

ಅದನ್ನೆಲ್ಲಾ extend ಮಾಡಿಕೊಂಡಿದ್ದಾರೆ. ಕೆಲವು ಕಡೆಗಳಲ್ಲಿ ಈ ಸಮಸ್ಯೆ ಇದೆ. ಮಾನ್ಯ ಸದಸ್ಯರು ಅದನ್ನು ಕೊಡಲಿ. ಅದರ ಬಗ್ಗೆ ಏನು ನ್ಯಾಯಕೊಡುವುದಕ್ಕೆ ಆಗುತ್ತದೆಯೋ ಅದನ್ನು ನಾನು ಖಂಡಿತವಾಗಿ ನೋಡುತ್ತೇನೆ.

**ಪ್ರಶ್ನೆ ಸಂಖ್ಯೆ 1184**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎಲ್.ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಕೇಳಿದಂತಹ ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಇದರ ಬಗ್ಗೆ ಸ್ವಲ್ಪ ವಿವರವಾಗಿ ಹೇಳಲಿ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಮೂರು ಪ್ರಶ್ನೆಗಳನ್ನು ಕೇಳಿದ್ದೇನೆ. ಮೊದಲನೆಯದಾಗಿ, ಮುಖ್ಯಮಂತ್ರಿಗಳ ವಿವೇಚನಾ ಕೋಟಾದಡಿ ಗಣ್ಯ ವ್ಯಕ್ತಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡುವ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆಯೆ; ಈ ಯೋಜನೆಯನ್ನು ಸ್ಥಗಿತಗೊಳಿಸಲು ಕಾರಣಗಳೇನು; ಸ್ಥಗಿತಗೊಳಿಸಿರುವ ಈ ಯೋಜನೆಯನ್ನು ಮರು ಜಾರಿಗೊಳಿಸುವ ಯೋಜನೆ ಸರ್ಕಾರಕ್ಕಿದೆಯೇ ಎಂಬುದಾಗಿ ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಮುಖ್ಯಮಂತ್ರಿಗಳ ವಿವೇಚನಾ ಕೋಟಾದಡಿ ಗಣ್ಯ ವ್ಯಕ್ತಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡುವ ಯೋಜನೆ ಜಾರಿಯಲ್ಲಿರುವುದಿಲ್ಲವೆಂದು ತಿಳಿಸಿದ್ದಾರೆ. ಇದು ಈಗ ಜಾರಿಯಲ್ಲಿ ಇಲ್ಲ. ಇದು ನಮಗೂ ಗೊತ್ತಿದೆ. ನಮ್ಮ ಗಮನಲ್ಲಿದೆ. ಆದರೆ, ನನ್ನ ಪ್ರಶ್ನೆ ಏನೆಂದರೆ, ಈ ಯೋಜನೆ ಹಿಂದೆ ಇತ್ತು, ಈಗ ಇದನ್ನು ಸ್ಥಗಿತಗೊಳಿಸಿದ್ದಾರೆ. ಇದನ್ನು ಏತಕ್ಕಾಗಿ ಸ್ಥಗಿತಗೊಳಿಸಿದ್ದಾರೆ? ಮತ್ತೆ ಏನಾದರೂ ಸ್ಥಗಿತಗೊಳಿಸಿರುವ ಯೋಜನೆಯನ್ನು ಮರು ಜಾರಿಗೊಳಿಸಲಾಗುತ್ತದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಯವರು ಈ ಯೋಜನೆಯನ್ನು ಸ್ಥಗಿತಗೊಳಿಸುವ ಅಥವಾ ಮರು ಜಾರಿಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರ ನೀಡಿದ್ದಾರೆ.

ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳ ವಿವೇಚನಾ ಕೋಟಾದಡಿ ಗಣ್ಯವ್ಯಕ್ತಿಗಳಿಗೆ ಒಮ್ಮೆ ನಿವೇಶನವನ್ನು ಹಂಚಿಕೆ ಮಾಡಿದ ನಂತರ ಮೊತ್ತೊಮ್ಮೆ ಅದೇ ವ್ಯಕ್ತಿಗೆ ಅಥವಾ ಅವರ ಕುಟುಂಬದವರಿಗೆ ನಿವೇಶನ ಹಂಚಿಕೆ ಮಾಡಲು ಅವಕಾಶವಿದೆಯೇ; ಇದ್ದಲ್ಲಿ ಈ ರೀತಿ ಒಂದಕ್ಕಿಂತ ಹೆಚ್ಚು ನಿವೇಶನಗಳನ್ನು ಪಡೆದಿರುವವರು ಯಾರು ಎಂಬುದರ ವಿವರ ನೀಡುವುದು ಎಂದು 2ನೇ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ

ಉಪ ಮುಖ್ಯಮಂತ್ರಿಯವರು "ಉದ್ಭವಿಸುವುದಿಲ್ಲ" ಎಂದು ಉತ್ತರವನ್ನು ನೀಡಿದ್ದಾರೆ. ಅಂದರೆ, ಯಾರಿಗೂ ಕೊಟ್ಟಿಲ್ಲವೆಂದು ಹೇಳಿದ್ದಾರೆ.

ಮಾನ್ಯ ಸಭಾಪತಿಯವರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿ ವಿವೇಚನಾ ಕೋಟಾದಡಿ ಇಲ್ಲಿಯವರೆಗೆ ಹಂಚಿಕೆ ಮಾಡಿರುವ ನಿವೇಶನಗಳೆಷ್ಟು; ಈ ನಿವೇಶನಗಳನ್ನು ಯಾರಿಗೆ ಹಂಚಿಕೆ ಮಾಡಲಾಗಿದೆ; (ದಾಖಲಾತಿಗಳೊಂದಿಗೆ ಸಂಪೂರ್ಣ ವಿವರ ನೀಡುವುದು) ಎಂದು ಮೂರನೆ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಯವರು ಉದ್ಭವಿಸುವುದಿಲ್ಲವೆಂದು ಉತ್ತರವನ್ನು ನೀಡಿದ್ದಾರೆ. ಈ ಹಿಂದೆ ಈ ಯೋಜನೆ ರಾಜ್ಯದಲ್ಲಿ ಜಾರಿಯಲ್ಲಿತ್ತು. ಈ ಯೋಜನೆಯಡಿಯಲ್ಲಿ ಮಾನ್ಯ ಶಾಸಕರು, ವಿಧಾನ ಪರಿಷತ್ತಿನ ಸದಸ್ಯರುಗಳು, ಗಣನೀಯವಾಗಿ ಸಮಾಜ ಸೇವೆ ಮಾಡಿದಂತಹವರು, ಕ್ರೀಡಾ ಕ್ಷೇತ್ರದಲ್ಲಿ, ಕಲಾ ಕ್ಷೇತ್ರದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ, ಸಂಸ್ಕೃತಿಕ ಕ್ಷೇತ್ರದಲ್ಲಿ ಈ ರೀತಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಯಾರು ಯಾರು ಸಾಧನೆ ಮಾಡಿದ್ದಾರೆ, ಅವರನ್ನು ಗುರುತಿಸಿ ಅಥವಾ ಅವರಲ್ಲಿ ಯಾರು ನಿವೇಶನಕ್ಕೆ ಅರ್ಜಿ ಸಲ್ಲಿಸಿತ್ತಾರೆ ಅಂತಹವರಿಗೆ ಕೊಡುವುದಕ್ಕೆ ಅವಕಾಶ ಇತ್ತು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಈ ಸದನದಲ್ಲಿ ಮತ್ತು ಕೆಳಮನೆಯಲ್ಲಿ ಬಹಳ ವ್ಯಾಪಕವಾಗಿ ಚರ್ಚೆಯಾಗಿದೆ. ಈ ಹಿಂದೆ ಶಾಸಕರುಗಳಿಗೆ ಹಾಗೂ ಕೆಲವು ದೊಡ್ಡ ದೊಡ್ಡ ವ್ಯಕ್ತಿಗಳಿಗೆ ಹಾಗೂ ಪ್ರಶಸ್ತಿ ಕೊಟ್ಟವರಿಗೆ ನಿವೇಶನವನ್ನು ಕೊಡುವಂತಹ ಒಂದು ಅವಕಾಶ ಇತ್ತು. ಈ ಮಧ್ಯದಲ್ಲಿ litigations ಆಯಿತು. ಇದನ್ನು ಮಾನ್ಯ ಮುಖ್ಯಮಂತ್ರಿಯವರು ಕೊಡುತ್ತಿದ್ದರು. ಬೆಂಗಳೂರಿನ ಉಸ್ತುವಾರಿ Minister ಕೊಡುತ್ತಿದ್ದರು. State Stakeholders ಗಳಿಗೆ ಕೊಡುತ್ತಿದ್ದರು. ಕೆಲವು Freedom Fighters ಗಳಿಗೆ ಕೊಡುತ್ತಿದ್ದ ದಾಖಲೆ ಇತ್ತು. ದಿವಂಗತ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಆದಮೇಲೆ ಇದರ ಬಗ್ಗೆ ದೊಡ್ಡ ಗಲಾಟೆಯಾಗಿತ್ತು. ಅದರಲ್ಲಿ ಕೆಲವರು ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತಂದು ಇದಕ್ಕೆ ಒಂದು ಹೊಸ policy ಮಾಡಬೇಕೆಂದು ಒಂದು Judge Committee ಅನ್ನು ಮಾಡಿದ್ದಾರೆ. ಈಗ ಸಧ್ಯಕ್ಕೆ ಅದನ್ನು ಕೊಡುವಂತಹ ಒಂದು ಅವಕಾಶ ಇದೆ. ಕೆಲವರಿಗೆ ಮಾತ್ರ ಕೆಲವು provisions committee ಯಲ್ಲಿದೆ. Freedom Fighters ಗಳಿಗೆ ಹಾಗೂ outstanding Personalities ಗಳಿಗೆ ನಿವೇಶನವನ್ನು ಕೊಡಲು ಅವಕಾಶ ಇದೆ. ರಾಜಕಾರಣಿಗಳಿಗೆ, ಸೇವೆ ಮಾಡಿದ್ದೇವೆ ಎನ್ನುವವರಿಗೆ ಕೊಡುವುದಕ್ಕೆ ಅವಕಾಶ ಇಲ್ಲ. ಇದಕ್ಕೂ ಸಹ ಒಂದು ಪಾಲಿಸಿಯನ್ನು ರೂಪಿಸಲು ಮಾನ್ಯ ನ್ಯಾಯಾಲಯದ ಒಂದು ಕಮಿಟಿ ಇದೆ. ಅವರು ನಮಗೆ ವರದಿ ಕೊಟ್ಟ ಮೇಲೆ ಇದಕ್ಕೆ ಏನಾದರೊಂದು ಯೋಜನೆ ಮಾಡುತ್ತೇವೆ. ಉಳಿದಿದ್ದು ಕೆಲವರಿಗೆ ಕೊಡುವುದಕ್ಕೆ ಒಂದು ಮಧ್ಯೆ bulk

allotment ಇತ್ತು. ಇದನ್ನು ಸಹ ಸಧ್ಯಕ್ಕೆ ನಿಲ್ಲಿಸಿದ್ದೇವೆ. ಇದರ ಬಗ್ಗೆ ಬಹಳಷ್ಟು ಶಾಸಕರುಗಳು ಹಾಗೂ ಇತರರದ್ದು ಬಹಳ pressure ನನಗೆ ಇದೆ. ಇದರ ಬಗ್ಗೆ ಮುಂದಕ್ಕೆ ಯಾವುದಾದರೊಂದು ರೀತಿ ವಿವೇಚನಾ ಕೋಟಾವನ್ನು ತರುವುದಕ್ಕೆ ಆಗುತ್ತದೆಯೇ, court guidelines ನಲ್ಲಿಯೇ ತರುವುದಕ್ಕೆ ಆಗುತ್ತದೆಯೇ ಎಂಬುದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇನೆ. ಮಾನ್ಯ ಸದಸ್ಯರು ಕೆಲವು ವಿವರಗಳನ್ನು ಕೇಳಿದ್ದಾರೆ. ಈ ಹಿಂದೆ ಬೇಕಾದಷ್ಟು ಶಾಸಕರಿಗೆ ಕೊಟ್ಟಿದ್ದು cancel ಆಗಿದೆ. ಅವರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಕೆಲವರು ನ್ಯಾಯಾಲಯದಿಂದ directions ಅನ್ನು ತೆಗೆದುಕೊಂಡು ಬಂದಿದ್ದಾರೆ. ಅವರು ಹಣವನ್ನು ಕಟ್ಟಿದ್ದಾರೆ. ಮುಂದೆ ಒಂದು ದಿವಸ ಏನಾದರೂ ಸಹಾಯ ಮಾಡುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ನೋಡುತ್ತೇನೆ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಯವರು ಶ್ರೀ ಧರ್ಮಸಿಂಗ್‌ರವರು ಮುಖ್ಯಮಂತ್ತಿಯಾಗಿದ್ದ ಸಂದರ್ಭದಲ್ಲಿ ನ್ಯಾಯಾಲಯದಿಂದ litigation ಆಗಿ Judge ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದರು ಆ ಕಮಿಟಿಯ ವರದಿ ಬಂದ ಮೇಲೆ ಕ್ರಮತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಸರ್ಕಾರದಿಂದ ಒಂದು ಕಮಿಟಿ ಮಾಡಿ ಅದಕ್ಕೆ ಮಾನದಂಡಗಳನ್ನು ನಿಗದಿ ಮಾಡಿ, ಯಾವ ಯಾವ ಕ್ಷೇತ್ರದಲ್ಲಿ ಯಾರು ಯಾರಿಗೆ ಎಷ್ಟು ಕೊಡುವುದಕ್ಕೆ ಅವಕಾಶ ಇವೆ, ಇದನ್ನು ಏನು ಮಾಡುವುದಕ್ಕೆ ಸಾಧ್ಯವಿದೆ, ಕಲಾ ಕ್ಷೇತ್ರದಲ್ಲಿ ಇಷ್ಟು percent, ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಮಾಡಿದವರಿಗೆ ಇಷ್ಟು percent ಅಥವಾ ಸಮಾಜ ಸೇವೆಯಲ್ಲಿ ಸೇವೆ ಮಾಡಿದವರಿಗೆ ಇಷ್ಟು percent, MLA/MLC ಗಳಿಗೆ ಇಷ್ಟು percent ಎಂದು ನಾವು ಮಾಡಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದರೆ ಬಹುಶಃ ನ್ಯಾಯಾಲಯ ಅವಕಾಶ ಮಾಡಿಕೊಡಬಹುದು ಎಂದು ನನ್ನ ಭಾವನೆ. ಈ ನಿಟ್ಟಿನಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಬಹಳ active ಆಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲದೇ, ಬೆಂಗಳೂರು ನಗರಾಭಿವೃದ್ಧಿ ಸಚಿವರು ಆಗಿದ್ದಾರೆ. ಹಾಗಾಗಿ, ಇವರ ಕಾಲದಲ್ಲಿ ಇದಾದರೆ ಇದು ಬಹಳ ಒಳ್ಳೆಯ ಕೆಲಸವಾಗುತ್ತದೆ. ಇದರಿಂದ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಂದು ನಾನು ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಮಾನವಿ ಮಾಡುವುದಕ್ಕೆ ಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಇದನ್ನು ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ. ಈಗಾಗಲೇ ಇದರ ಬಗ್ಗೆ 4 ಕಮಿಟಿಗಳು ಆಗಿವೆ. ಈ ಕಮಿಟಿಯಲ್ಲಿ ನ್ಯಾಯಾಧೀಶರು ಮತ್ತು ಅಧಿಕಾರಿಗಳು ಇದ್ದಾರೆ. ಮಾನ್ಯ ಸದಸ್ಯರು ಹೇಳುವುದನ್ನು ನಾನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ 1175**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ಬಹಳ ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ, ಅದು ಮಾನ್ಯ ಸದಸ್ಯರಿಗೆ ಸಮಧಾನ ತಂದಿದೆ ಎಂದು ಕಾಣುತ್ತದೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು ಮೊನ್ನೆ ದಿವಸ meeting ಮಾಡಿದ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಬಹಳ ಸಂತೋಷ. ಇದು ಒಂದು ಭಾಗ.

(ಮುಂದು)

(1006) 19.12.2024 11.10 ಎಂವಿ-ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್.ಪೂಜಾರ್ (ಮುಂದು):**

ಈ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ 1964ರಿಂದ ಎಷ್ಟು ಖರ್ಚು ಮಾಡಿದ್ದಾರೆಂದರೆ, ಒಂದು, ಎರಡು ಮತ್ತು ಮೂರು ಹಂತಗಳ ಬಗ್ಗೆ ಖರ್ಚು ಮಾಡುವಂಥದ್ದನ್ನು ಕೇಳಿದಾಗ, ಅದರ ಅಂಕಿ-ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆ, ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳ ಪೂರ್ತಿ ಮುಗಿಯುವಂತಹ ಒಂದು ವ್ಯವಸ್ಥೆಯಲ್ಲಿ, ನಾರಾಯಣಪುರ ಜಲಾಶಯದ ಕಾಮಗಾರಿ ಮುಗಿದು, ನೀರಾವರಿಯ ವ್ಯವಸ್ಥೆಯಾಗಿದೆ. ಅದೇ ರೀತಿ ಆಲಮಟ್ಟಿ ಜಲಾಶಯದಲ್ಲೂ ಕೂಡ ಒಂದು ಮತ್ತು ಎರಡನೇ ಹಂತದ ಕಾಮಗಾರಿಗಳು ಮುಗಿದಿದೆ. ಮೂರನೇ ಹಂತ ಅರ್ಧದಲ್ಲಿ ನಿಂತಿರುವಂಥದ್ದು. ಈಗ 524.26 ಮೀಟರ್ ನೀರನ್ನು ಉಪಯೋಗ ಮಾಡಬೇಕಾದರೆ, 130 ಟಿ.ಎಂ.ಸಿ. ನಮಗೆ ಬೇಕಾಗಿರುವಂಥದ್ದು. ಅದು ನಮ್ಮ ಪಾಲಿಗೆ ಹಂಚಿಕೆ ಮಾಡಿರುವಂಥದ್ದು. ಅದು ರೆಡಿ ಇದೆ. ಒಂದು ಮತ್ತು ಎರಡನೇ ಹಂತಕ್ಕೆ ಸುಮಾರು 13,170/- ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಮೂರನೇ ಹಂತಕ್ಕೆ ಸುಮಾರು 18,000/- ಕೋಟಿ ರೂಪಾಯಿ ಎಂದು ತಿಳಿಸಿದ್ದಾರೆ. ಒಟ್ಟಾರೆ 31,000/- ಕೋಟಿ ರೂಪಾಯಿಗಳನ್ನು ಮಾತ್ರ ಇಲ್ಲಿಯವರೆವಿಗೂ ಖರ್ಚು ಮಾಡಿರುವಂಥದ್ದು. ಮೂರನೇ ಹಂತದಲ್ಲಿ ಪರಿಹಾರಧನವನ್ನು ವಿತರಣೆ ಮಾಡುವಂಥದ್ದು ಮತ್ತು ಪುನರ್ವಸತಿ ವ್ಯವಸ್ಥೆ ಮಾಡುವಂಥದ್ದು. ಈಗ ಒಂದು ಲಕ್ಷಕ್ಕಿಂತ ಹೆಚ್ಚಿನ ಎಕರೆ ಎನ್ನುವಂತಹ ವಿಚಾರವನ್ನು ಕೂಡ ತಿಳಿಸಿದ್ದಾರೆ. ಇದರ ಜೊತೆಗೆ ಮೇಲಿಂದ ಮೇಲೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಪ್ರಸ್ತಾಪ ಬಂದಾಗ, ಈ ನ್ಯಾಯಾಧೀಕರಣದ ಎರಡನೆ ಅಂತಿಮ ತೀರ್ಪಿನ ಅಧಿಸೂಚನೆ ಪ್ರಕಟವಾಗಬೇಕು. ಅದು ಗೆಜೆಟ್ ನೋಟಿಫಿಕೇಶನ್ ಆಗಬೇಕು ಎಂಬ ಒಂದು ನೆಪವನ್ನು ಸರ್ಕಾರ

ಮೇಲಿಂದ ಮೇಲೆ ಹೇಳುತ್ತಾ ಬಂದಿದೆ. ಈ ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಶ್ನೆ ಬಂದಾಗ, ನಮಗೆ ಬೇಕಾದಂತಹ ನೀರು ಕರ್ನಾಟಕ ಪಾಲಿನದು. ಮತ್ತೊಂದು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಕ್ಕೆ ಸಂಬಂಧಿಸಿದೆ. ಆಂಧ್ರಪ್ರದೇಶ ಮತ್ತು ತೆಲಂಗಾಣ ಎರಡೂ ರಾಜ್ಯಗಳು ವಿಭಜನೆಯಾಗಿವೆ. ಅವರು ತಮ್ಮ ಪಾಲಿನ ನೀರನ್ನು ಹಂಚಿಕೊಳ್ಳಬೇಕು. ಅದು ಕೋರ್ಟ್‌ನಲ್ಲಿ ಇರುವಂಥದ್ದು. ಈಗ ಗೆಜೆಟ್ ನೋಟಿಫಿಕೇಶನ್ ಇವತ್ತೇ ಆಯಿತು ಎಂದರೆ, shift ಮಾಡಿ, 130 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವೇ ಎಂಬುದು ಪ್ರಶ್ನೆ. ಇವರು ಮೇಲಿಂದ ಮೇಲೆ ಆ ನೆಪವನ್ನು ಏಕೆ ಹೇಳುತ್ತಿದ್ದಾರೆ? ಆ ರೀತಿ ಹೇಳುವುದರಿಂದ ಸರ್ಕಾರಕ್ಕೆ ಏನು ಅನುಕೂಲವಾಗುತ್ತದೆ? ಈಗ ಪುನರ್ವಸತಿ ಮಾಡಿ, ಪುನರ್ ನಿರ್ಮಾಣ ಮಾಡಬೇಕು. ಅಲ್ಲಿನ ಜನರಿಗೆ ಹಣವನ್ನು ನೀಡಬೇಕು. ಅವರ shifting ಬಗ್ಗೆ ಯೋಚನೆಯನ್ನೇ ಮಾಡುವುದಿಲ್ಲ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್ ರವರೆ, ತಾವು ಮಾತನಾಡಿದ್ದು ಸಾಕು. ತಾವು ಪ್ರಶ್ನೆಗಳನ್ನು ಕೇಳಿ. ತಾವು ಭಾಷಣ ಮಾಡುವುದು ಬೇಡ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಅನುದಾನದ ಲಭ್ಯತೆಗನುಗುಣವಾಗಿ ಮುಗಿಸುತ್ತೇವೆಂದು ಹೇಳಿದ್ದಾರೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮೊನ್ನೆತಾನೆ ಕೃಷ್ಣಾ ಮೇಲ್ದಂಡೆಗೆ ಸಂಬಂಧಿಸಿದಂತೆ ಮತ್ತು ನಾರಾಯಣಪುರ ಮತ್ತು ಆಲಮಟ್ಟಿ ಜಲಾಶಯಗಳ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಎಲ್ಲಾ ಮಂತ್ರಿಗಳು ಮತ್ತು ಶಾಸಕರನ್ನು ಕೂರಿಸಿಕೊಂಡು ಚರ್ಚೆ ಮಾಡಿದ್ದೇವೆ. ಅವರುಗಳು ಗೊಂದಲದಲ್ಲಿದ್ದರು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರ ಕಾಲದಲ್ಲಿ ಒಂದು ನೋಟಿಫಿಕೇಶನ್ ಆಗಿ Inter Ministerial Committee ಯಲ್ಲಿ ಶ್ರೀ ಮುರುಗೇಶ್ ನಿರಾಣಿ ಮತ್ತು ಶ್ರೀ ಗೋವಿಂದ ಎಂ. ಕಾರಜೋಳ ರವರುಗಳು ಸೇರಿಕೊಂಡು ಇದನ್ನು ಎರಡು ಹಂತದಲ್ಲಿ ತೆಗೆದುಕೊಂಡು ಹೋಗಬೇಕೆಂದು ತೀರ್ಮಾನ ಮಾಡಿದ್ದರು. ಅದಕ್ಕೆ ಅವರೆಲ್ಲರೂ ಸಹ ಗಾಬರಿಯಾಗಿದ್ದರು. ಮತ್ತೆ ಅವರದು ಯಾರದ್ದು ಸಹ ಒಪ್ಪಿಗೆ ಇಲ್ಲವೆಂದು ಪ್ರತಿಭಟನೆ ಮಾಡಿದ್ದರು. ನಾವು ನೇರವಾಗಿ ಹೇಳಿದ್ದೇವೆ. ಈಗ ಗೆಜೆಟ್ ನೋಟಿಫಿಕೇಶನ್ ಆಗದೇ ಹೋದರೂ ಕೂಡ 524.26 ಮೀಟರ್‌ನಿಂದ ಏನು ಬರಬೇಕಿದೆ, ಅದನ್ನು ಒಂದು ಬಾರಿಯೇ acquisition ಮಾಡುವುದಕ್ಕೆ ತೀರ್ಮಾನ ಮಾಡುತ್ತೇವೆ. ನಾವು ಒಂದು stretch ನಲ್ಲಿ ತೆಗೆದುಕೊಂಡು ಹೋಗುತ್ತೇವೆಂದು ಅವರಿಗೆ ಆಶ್ವಾಸನೆ ಕೊಟ್ಟು, ನಿನ್ನೆಯ ದಿವಸ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರನ್ನು ಅಲ್ಲಿಗೆ ಕಳುಹಿಸಿ, ಅಲ್ಲಿ ಯಾರು ಅಹೋರಾತ್ರಿ ಧರಣಿ ಮಾಡುತ್ತಿದ್ದರು, ಅವರ ಸಮಸ್ಯೆಯನ್ನು ಬಗೆಹರಿಸಿ, ಅವರಿಗೆ ಸಮಾಧಾನ ಮಾಡಿ ಕಳುಹಿಸುವಂತಹ ಕೆಲಸವನ್ನು ಮಾಡಿದ್ದೇವೆ. But financially ಏನು ಖರ್ಚಾಗಬೇಕೆಂದು ಇದೆ, ಅದನ್ನು ಒಂದೇ ದಿನದಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೇವೆ. Stage by stage ಎಲ್ಲೆಲ್ಲಿ priority ಬರುತ್ತದೋ, ಆ priority ಪ್ರಕಾರ acquisition ಮಾಡಿ,

ಅವರಿಗೆ ಹಣವನ್ನು ಒದಗಿಸಬೇಕು. ಸದ್ಯದಲ್ಲಿಯೇ ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು rate ಅನ್ನು finalize ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅದು ಅವರಿಗೂ ಕೂಡ ಸಮಾಧಾನ ತಂದಿದೆ. ಅವರು ನಿನ್ನೆಯೋ ಮೊನ್ನೆಯೋ ನನಗೆ ಮತ್ತು ಸರ್ಕಾರಕ್ಕೆ ಅಭಿನಂದನೆಯನ್ನು ಸಹ ಸಲ್ಲಿಸಿದ್ದಾರೆ. ಈಗ ಆ ವಿಚಾರಗಳ ಬಗ್ಗೆ ಮಾನ್ಯ ಸದಸ್ಯರು ಬಹಳ expert ಇದ್ದಾರೆ. ಅವರು ಸಂತ್ರಸ್ಥರಿದ್ದಾರೆ. ಮಾನ್ಯ ಸದಸ್ಯರು ಎಂಟರಿಂದ ಹತ್ತು ಪ್ರಶ್ನೆಗಳನ್ನು ಸಹ ಕೇಳಿದ್ದಾರೆ. ಎಲ್ಲದಕ್ಕೂ ಕೂಡ ಅವರಿಗೆ ಸಮಾಧಾನ ತರುವಂತಹ ಉತ್ತರವನ್ನು ನೀಡಿದ್ದೇವೆ. ನಾನು ಈಗಲೂ ಸಹ ಹೇಳುತ್ತಿದ್ದೇನೆ, ಅವರದು ಏನು ವಿಚಾರವಿದೆ ಅದರ ಬಗ್ಗೆ ಅವರು ತಪ್ಪೇನು ಹೇಳುತ್ತಿಲ್ಲ. But we can't act at the same time, due to financial consistency. ಇದನ್ನು ಸ್ವಲ್ಪ ಗಮನದಲ್ಲಿಟ್ಟುಕೊಂಡು ಈಗ ಇರುವುದೇ 16,000/- ಕೋಟಿ ರೂಪಾಯಿಗಳು. ಆ 16,000/- ಕೋಟಿ ರೂಪಾಯಿಗಳಲ್ಲಿ 8,000/- ಕೋಟಿ ರೂಪಾಯಿಗಳು ಸಾಲಗಳಿಗೆ ಹೋಗುತ್ತಿದೆ. ಉಳಿದ 8,000/- ಕೋಟಿ ರೂಪಾಯಿಗಳನ್ನು ನಾಲ್ಕು ಯೋಜನೆಗಳಾದ ಎತ್ತಿನಹೊಳೆ, ಕಾವೇರಿ, ಕೆ.ಎನ್.ಎನ್.ಎಲ್. ಮತ್ತು ಕೆ.ಬಿ.ಜೆ.ಎನ್.ಎಲ್. ಗಳಿಗೆ ಹಂಚುತ್ತಿದ್ದೇವೆ. ಇದಕ್ಕೆ ಮುಂದೆ priority ಯಲ್ಲಿ ಸ್ವಲ್ಪ ಜಾಸ್ತಿ ಒದಗಿಸುವಂತಹ ಕೆಲಸವನ್ನು ಮಾಡುತ್ತೇವೆ. ಹಿಂದೆ ನಮ್ಮ ಸರ್ಕಾರ ಐದು ವರ್ಷಕ್ಕೆ ಎರಡು ಲಕ್ಷ ಕೋಟಿ ರೂಪಾಯಿಗಳನ್ನು ಇಡಬೇಕೆಂದು ಹೇಳಿ politically we have taken a decision. But various constraints ಇವೆ. ಆದರೆ, ಇವತ್ತು priority KBJNL (Krishna Bhagya Jala Nigam Limited) ಆಗಿದೆ. ನಾನು ಇಷ್ಟನ್ನು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಮೊನ್ನೆಯ ದಿವಸ ನಮ್ಮೆಲ್ಲರಿಗೂ ಸಹ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಮಗೆ ಅಷ್ಟರಮಟ್ಟಿಗೆ ನೆಮ್ಮದಿ ಇದೆ. ಮೊದಲನೇ ಬಾರಿ ಎಂದು ಮಾನ್ಯ ಸಚಿವರಿಗೆ ಹೇಳಿದ್ದೇನೆ. ನಮ್ಮ ಸಮಸ್ಯೆಗಳನ್ನು ಸಮಾಧಾನದಿಂದ ಕೇಳುವಂತಹ ಕೆಲಸ ಮಾನ್ಯ ಮುಖ್ಯಮಂತ್ರಿಗಳು ಮತ್ತು ವಿಶೇಷವಾಗಿ ಉಪ ಮುಖ್ಯಮಂತ್ರಿಗಳಾದ ತಾವು, ಎಲ್ಲಾ ಮಂತ್ರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಕಾನೂನು ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್‌ರವರು ಸಹ ಇದ್ದರು. ಎಲ್ಲರೂ ಸಹ ಕೇಳಿದ್ದೀರಿ. ಇವತ್ತು ನಾನು ತಮ್ಮಿಂದ ಉತ್ತರವನ್ನು ಅಪೇಕ್ಷೆ ಮಾಡಿದ್ದೆ. ಪ್ರತಿವರ್ಷ 40,000/- ಕೋಟಿ ರೂಪಾಯಿಗಳನ್ನು ಇಡುತ್ತೇವೆ ಎಂಬ ಬದ್ಧತೆ ಮತ್ತು 130 ಟಿ.ಎಂ.ಸಿ. ನೀರು ಪ್ರತಿವರ್ಷ ಹರಿದು ಹೋಗುತ್ತಿದೆ. ಎತ್ತಿನಹೊಳೆಯಲ್ಲಿ ಒಂದರಿಂದ ಮೂರು ಟಿ.ಎಂ.ಸಿ. ನೀರು ಮಾತ್ರ ಇರುವಂಥದ್ದು. ಈ 130 ಟಿ.ಎಂ.ಸಿ. ನೀರಿನಿಂದ ನಮ್ಮ ರೈತರು ಉದ್ಧಾರವಾಗುವಂತಹ ಮತ್ತು ಉತ್ತರ ಕರ್ನಾಟಕ ಸಂಪೂರ್ಣ ನೀರಾವರಿಗೆ ಒಳಪಡುವ ವ್ಯವಸ್ಥೆ. ಮೊನ್ನೆಯ ದಿವಸ ಸರ್ಕಾರದ ಪ್ರತಿನಿಧಿಯಾಗಿ ಮಾನ್ಯ ಸಚಿವರಾದ ಆರ್.ಬಿ.ತಿಮ್ಮಾಪುರರವರನ್ನು ಕಳುಹಿಸಿದ್ದರು. ಅವರು ಬಂದು ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ನೀರಾವರಿ ಸಚಿವರು ಮತ್ತು ಕಾನೂನು ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್ ರವರು ಇದ್ದರು. ನಾವೆಲ್ಲಾ ಭರವಸೆ ಕೊಟ್ಟಿದ್ದೇವೆ ಮತ್ತೆ ಅದನ್ನು ಮುಗಿಸುತ್ತೇವೆಂದು ಇಷ್ಟೆ ಹೇಳಿದರು. ಅವರುಗಳು ಏನೇನು ಮಾತನಾಡಿಕೊಂಡಿದ್ದಾರೆಯೋ ಏನೋ ಗೊತ್ತಿಲ್ಲ. ಅಲ್ಲಿ ಮಾತನಾಡಿ ಎಂದು

ಎಲ್ಲರೂ ಸಹ ಒತ್ತಾಯ ಮಾಡಿದ್ದೆವು. ಅಲ್ಲಿ 50,000/- ಕೋಟಿ ರೂಪಾಯಿಗಳು ಎಂದು ಒಬ್ಬರು ಹೇಳಿದರು. ಒಂದು ಲಕ್ಷ ಕೋಟಿ ರೂಪಾಯಿಗಳು ಎಂದು ಮತ್ತೊಬ್ಬರು ಹೇಳಿದರು. ಮುಂದೆ ಬರುವಂತಹ ಬಜೆಟ್‌ನಲ್ಲಿ ಅದರ ಸಲುವಾಗಿ ಕನಿಷ್ಟ ನಲವತ್ತು ಲಕ್ಷ ಕೋಟಿ ರೂಪಾಯಿಗಳನ್ನು ಇಡುತ್ತೇವೆ ಎಂಬ ಬದ್ಧತೆಯನ್ನು ಪ್ರದರ್ಶನ ಮಾಡಲಿ. ಈ 130 ಟಿ.ಎಂ.ಸಿ. ಕಾಮಗಾರಿಯನ್ನು ಎರಡು-ಮೂರು ವರ್ಷಗಳಲ್ಲಿ ಮುಗಿಸಿದರೆ, ನಾಲ್ಕನೇ ವರ್ಷದಿಂದ 130 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡುತ್ತೇವೆ ಎನ್ನುವಂತಹ ಅಪೇಕ್ಷೆಯನ್ನು ಮಾನ್ಯ ಸಚಿವರಿಂದ ನಿರೀಕ್ಷೆ ಮಾಡಿದ್ದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು, ವಿದ್ಯಾವಂತರು ಬುದ್ಧಿವಂತರು ಮತ್ತು ಪ್ರಜ್ಞಾವಂತರಿದ್ದಾರೆ. ಮಾನ್ಯ ಸದಸ್ಯರು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಮಂಡಿಸಿರುವ ಬಜೆಟ್ ಪುಸ್ತಕವನ್ನು ನೋಡಲಿ. ಅವರು ಸುಮಾರು 22,000/- ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಮಾನ್ಯ ಕೇಂದ್ರದ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲಾ ಸೀತಾರಾಮನ್ ರವರು Upper Bhadra Project ಗೆ ಸುಮಾರು 5,400/- ಕೋಟಿ ರೂಪಾಯಿಗಳನ್ನು ನೀಡುತ್ತೇವೆಂದು ಮಾತು ಕೊಟ್ಟಿದ್ದರು. ಅದಕ್ಕೆ ಅವರು celebration ಮಾಡಿದ್ದರು. ಆದರೆ, ಅಲ್ಲಿಂದ ಒಂದು ರೂಪಾಯಿ ಸಹ ಬರಲಿಲ್ಲ. ಅವರು ಇದಕ್ಕೆ ಯಾವಾಗ ಕೊಡಲಿಲ್ಲ, ಆಗ ನಾವು 5,400 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಬೇಕಾದಂತಹ ಪರಿಸ್ಥಿತಿ ಬಂತು. ಅದು ಏನಾದರೂ ಬಂದಿದ್ದರೆ, ಅದಕ್ಕೆ ಬೇರೆ ಹಣವನ್ನು ನೀಡಿ, ಇದಕ್ಕೂ ಸಹ ಹಣ ಕೊಡಬೇಕು. ನಾವು ದಯವಿಟ್ಟು ಅವರ ಸಹಕಾರ ಕೇಳಿದ್ದೇವೆ. ನಾವೆಲ್ಲರೂ ಹೋರಾಟ ಮಾಡಿ, ಮಾನ್ಯ ಪ್ರಧಾನ ಮಂತ್ರಿಗಳಿಗೆ ಮತ್ತು ಹಣಕಾಸು ಸಚಿವರಿಗೆ convince ಮಾಡಿ, ಅಲ್ಲಿಂದ ದುಡ್ಡು ಬರುವಂತೆ ಮಾಡಲಿ. ಆ ಹಣವನ್ನೆಲ್ಲಾ ಇದಕ್ಕೆ ಕೊಡುವಂತೆ ಏರ್ಪಾಡು ಮಾಡೋಣ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ನಾನು ಅದರ ಬಗ್ಗೆ ಪ್ರಸ್ತಾವನೆ ಮಾಡುತ್ತಿಲ್ಲ. ನಮಗೆ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಚಿಂತನೆ ಇಲ್ಲ. ಅದನ್ನು ಅವರು ಅವರದೇ ಆದಂತಹ ವ್ಯವಸ್ಥೆಯಲ್ಲಿ ಮಾಡಲಿ. ದಯಮಾಡಿ ಇದಕ್ಕೆ ಹಣವನ್ನು ನೀಡಲಿ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್‌ರವರೆ, ನಾನು ತಮಗೆ allow ಮಾಡುವುದಿಲ್ಲ. ಈಗ ತಾವು ಕುಳಿತುಕೊಳ್ಳಿ.

**ಪ್ರಶ್ನೆ ಸಂಖ್ಯೆ.1219**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಬೆಂಗಳೂರು ಮೆಟ್ರೋ ರೈಲಿನಲ್ಲಿ ಪ್ರತೀ ನಿತ್ಯ ಸರಾಸರಿ 7.87 ಲಕ್ಷ ಪ್ರಯಾಣಿಕರು ಸಂಚರಿಸುತ್ತಾರೆಂದು ಉತ್ತರ ನೀಡಿದ್ದಾರೆ. ಮತ್ತೆ ಏನೇನು ಸೌಲಭ್ಯಗಳನ್ನು ನೀಡಿದ್ದಾರೆ ಎಂಬುದರ ಬಗ್ಗೆಯೂ ಸಹ ಮಾಹಿತಿ ಒದಗಿಸಿದ್ದಾರೆ. ಹೊರಗುತ್ತಿಗೆಯಲ್ಲಿ ಸುಮಾರು 10 ಜನ ಟಿಕೇಟ್ ಆಪರೇಟಿಂಗ್ ಸಿಬ್ಬಂದಿಯವರು ಹೊರ ಗುತ್ತಿಗೆಯಲ್ಲಿ ಮೂರು ಶಿಫ್ಟ್‌ಗಳಲ್ಲಿ ಕಾರ್ಯನಿರ್ವಹಿಸುತ್ತಾರೆ. ಭದ್ರತಾ ಸಿಬ್ಬಂದಿಯವರು ಮೂರು ಶಿಫ್ಟ್‌ಗಳಲ್ಲಿ ಸರಾಸರಿ 36 ಸಿಬ್ಬಂದಿಗಳು ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಬಿ.ಎಂ.ಆರ್.ಸಿ.ಎಲ್.ನ 15 ಖಾಯಂ ಸಿಬ್ಬಂದಿಗಳು ಮೂರು ಶಿಫ್ಟ್‌ನಲ್ಲಿ ಪ್ರತಿ ಶಿಫ್ಟ್‌ನಲ್ಲಿ 5ರಂತೆ ಕಾರ್ಯನಿರ್ವಹಿಸುತ್ತಿದ್ದಾರೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಹೊರಗುತ್ತಿಗೆಯಲ್ಲಿ ಕರ್ತವ್ಯ ನಿರ್ವಹಿಸುವಂತಹವರನ್ನು ಖಾಯಂ ಮಾಡುವುದಕ್ಕೆ ಪ್ರಯತ್ನಪಡಬೇಕು ಎಂಬ ವಿನಂತಿಯನ್ನು ನಾನು ಮಾಡುತ್ತೇನೆ.

ಎರಡನೆಯದು ಏನೆಂದರೆ, ಮೆಟ್ರೋ ನಿಲ್ದಾಣಗಳಲ್ಲಿ ತಾಯಂದಿರು ಮಕ್ಕಳಿಗೆ ಹಾಲುಣಿಸುವಂತಹ ವ್ಯವಸ್ಥೆ ಬಹಳ ಕಡಿಮೆ ಇದೆ. ಏಕೆಂದರೆ, ಸಣ್ಣ-ಸಣ್ಣ ಮಕ್ಕಳಿಗೆ ಯಾವಾಗ ಹಸಿವು ಆಗುತ್ತದೆಂದು ಮತ್ತು ಆ ಮಕ್ಕಳು ತಾಯಿಗೆ ಯಾವ ರೀತಿಯಲ್ಲಿ ಬೇಡಿಕೆಯನ್ನು ಇಡುತ್ತವೆಂದು ಹೇಳುವುದಕ್ಕೆ ಆಗುವುದಿಲ್ಲ. ಆ ಸಂದರ್ಭವನ್ನು ನಾನೂ ಸಹ ನೋಡಿದ್ದೇನೆ. ನಾನು ಹೆಚ್ಚು ಮೆಟ್ರೋ ರೈಲುಗಳಲ್ಲಿ, ಸಾಮಾನ್ಯ ರೈಲುಗಳಲ್ಲಿ ಮತ್ತು ಬಸ್‌ಗಳಲ್ಲಿ ಓಡಾಡುವಂತಹ ಹೆಣ್ಣು ಮಗಳು. ಇದನ್ನು ನಾನು ಗಮನಿಸಿದ್ದೇನೆ. ನಾಡಪ್ರಭು ಕೆಂಪೇಗೌಡ ಮೆಟ್ರೋ ನಿಲ್ದಾಣ, ಮೆಜೆಸ್ಟಿಕ್, ಯಶವಂತಪುರ ಮೆಟ್ರೋ ನಿಲ್ದಾಣ, ಚಿಕ್ಕಪೇಟೆ ಮೆಟ್ರೋ ನಿಲ್ದಾಣ ಮತ್ತು ನಾಗಸಂದ್ರ ಮೆಟ್ರೋ ನಿಲ್ದಾಣದಲ್ಲಿ ಈ ವ್ಯವಸ್ಥೆ ಇದೆ ಎಂಬ ಮಾಹಿತಿ ನೀಡಿದ್ದಾರೆ. ಮೆಟ್ರೋ ರೈಲಿನಲ್ಲಿ ಒಟ್ಟು 69 ನಿಲ್ದಾಣಗಳಿವೆ ಎಂದು ಹೇಳುತ್ತಾರೆ. ಆದರೆ, ಈ ವ್ಯವಸ್ಥೆ ಎಲ್ಲಾ ಕಡೆಗಳಲ್ಲೂ ಸಹ ಇಲ್ಲ. ಮತ್ತೆ ground floor, 1st floor, 2nd floor ಎಂದು ಇದೆ. ಎಲ್ಲೋ ಒಂದು ಮೂಲೆಯಲ್ಲಿ ಮೆಜೆಸ್ಟಿಕ್‌ನಲ್ಲಿ ಬಹಳ ಸಣ್ಣದಾದ ಬಾಕ್ಸ್ ರೀತಿ ಇಟ್ಟಿದ್ದಾರೆ. ಅದು ಕೇವಲ 6X6 ಅಡಿ ಇರಬಹುದು. ಅದು ಒಂದು ಸಣ್ಣ ಬಾಕ್ಸ್. ಅದನ್ನು ಪ್ರತಿಯೊಂದು ನಿಲ್ದಾಣದ ಎಲ್ಲಾ ಕಡೆಗಳಲ್ಲೂ ಇಡಬೇಕು. ಬಸ್ ನಿಲ್ದಾಣಗಳಲ್ಲಿ ನಿರ್ಭಯಾ ಯೋಜನೆ ಅಡಿಯಲ್ಲಿ ಮಾಡಿದ್ದಾರೆ. ಈ ನಿರ್ಭಯಾ ಯೋಜನೆ ಅಡಿಯಲ್ಲಿ ಅನುದಾನವನ್ನು ತೆಗೆದುಕೊಂಡು ಮಾಡುವುದಕ್ಕೆ ಅವಕಾಶವಿದೆ. ದಯಮಾಡಿ ಇದನ್ನು ಮಾಡಬೇಕು ಎಂಬ ವಿನಂತಿಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಉತ್ತರವನ್ನು ಒದಗಿಸಿದ್ದೇವೆ. ಹೆಣ್ಣುಮಕ್ಕಳಿಗೆ ಮತ್ತು ಮಕ್ಕಳಿಗೆ ನಾಡಪ್ರಭು ಕೆಂಪೇಗೌಡ ಮೆಟ್ರೋ ನಿಲ್ದಾಣ, ಮೆಜೆಸ್ಟಿಕ್, ಯಶವಂತಪುರ ಮೆಟ್ರೋ ನಿಲ್ದಾಣ, ಚಿಕ್ಕಪೇಟೆ ಮೆಟ್ರೋ ನಿಲ್ದಾಣ ಮತ್ತು ನಾಗಸಂದ್ರ ಮೆಟ್ರೋ ನಿಲ್ದಾಣ

ಈ ನಾಲ್ಕು ನಿಲ್ದಾಣಗಳಲ್ಲಿ ಮಾಡಿದ್ದೇವೆ. ಏಕೆಂದರೆ, ಅವರು ಕೆಲವು starting point ಗಳಲ್ಲಿ ಹೆಚ್ಚಿನ ಸಮಯ ಕಾಯಬೇಕೆಂದು ಹೇಳಿದ್ದಾರೆ.

(ಮುಂದು)

(1007) 19.12.2024 11.20 LL-BNS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಕೆ. ಶಿವಕುಮಾರ್ (ಮುಂದು):**

ಆದರೆ, ಯಾವ ನಿಲ್ದಾಣದಲ್ಲಿಯೂ ಕೂಡ 5 ನಿಮಿಷಕ್ಕೂ ಹೆಚ್ಚು ಸಮಯ ಮೆಟ್ರೋ ರೈಲು ನಿಲ್ಲುವುದಿಲ್ಲ. ಎಲ್ಲಾ ಸ್ಟೇಷನ್‌ಗಳಲ್ಲಿಯೂ ಮೆಟ್ರೋ ರೈಲು 5 ನಿಮಿಷದಲ್ಲಿ ಸಂಚರಿಸಿ, ಜನ ಹೊರಡಬೇಕೆಂದು ಇದೆ. ಜೊತೆಗೆ, ಮಾನ್ಯ ಸದಸ್ಯರು ಏನು ಸಲಹೆ ಕೊಡುತ್ತಿದ್ದಾರೆ. ಅವುಗಳನ್ನು ನಾವು ಸ್ವೀಕಾರ ಮಾಡಿದ್ದೇವೆ. ಆದರೆ, ಇರುವುದರಲ್ಲಿ ನಮ್ಮ ಮೆಟ್ರೋ ಇಡೀ ದೇಶದಲ್ಲಿಯೇ ಒಳ್ಳೆಯ ಹೆಸರು ಪಡೆದುಕೊಂಡಿದ್ದು, ನಾವು ಕೂಡ ಅದನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿದ್ದೇವೆ. ಸದ್ಯದಲ್ಲಿಯೇ 3ನೇ ಹಂತದ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕೆ ಎಲ್ಲಾ ವ್ಯವಸ್ಥೆ ಮಾಡಿದ್ದೇವೆ. ಮಾನ್ಯ ಸದಸ್ಯರ ಸಲಹೆ ಏನಿದೆ, ಅದನ್ನು ಗಂಭೀರವಾಗಿ ಪರಿಶೀಲಿಸುತ್ತೇವೆ. ಅದರಂತೆ, ಮಹಿಳೆಯರು ತಮ್ಮ ಮಕ್ಕಳಿಗೆ ಹಾಲುಣಿಸುವ ಕೇಂದ್ರವನ್ನು ಸ್ವಲ್ಪ ದೊಡ್ಡದು ಮಾಡಬೇಕೆಂದು ಹೇಳಿದ್ದಾರೆ ಮತ್ತು ಅದನ್ನು ಎಲ್ಲಾ ಸ್ಟೇಷನ್‌ಗಳಲ್ಲಿಯೂ ಮಾಡಬೇಕೆಂದು ಹೇಳಿದ್ದಾರೆ. ಆ ಕೆಲಸವನ್ನು ಎಲ್ಲೆಲ್ಲಿ ಮಾಡುವುದಕ್ಕೆ ಸಾಧ್ಯವಿದೆ ಅದನ್ನು ನಾವು ಖಂಡಿತವಾಗಿ ಮಾಡುತ್ತೇವೆ.

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಮಹಿಳೆಯರು ತಮ್ಮ ಮಕ್ಕಳಿಗೆ ಹಾಲುಣಿಸುವ ಕೇಂದ್ರವನ್ನು ಎಲ್ಲಾ ಸ್ಟೇಷನ್‌ಗಳಲ್ಲಿಯೂ ಮಾಡಬೇಕು.

**ಸಭಾಪತಿಯವರು:-** ಮಾಡುತ್ತೇನೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿರುತ್ತಾರೆ.

**ಶ್ರೀಮತಿ ಉಮಾಶ್ರೀ:-** ಮಾನ್ಯ ಸಭಾಪತಿಯವರೇ, ಆದರೂ ಸಹ ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿಯೂ ಸಹ ಆಗಬೇಕಾದಂತಹ ಅಗತ್ಯತೆ ಇದೆ. ಇತ್ತೀಚೆಗೆ ಟ್ರಿನಿಟಿ ಸರ್ಕಲ್ ಮೆಟ್ರೋ ನಿಲ್ದಾಣದಲ್ಲಿ ಒಬ್ಬ ತಾಯಿ ತನ್ನ ಮಗುವಿಗೆ ಹಾಲುಣಿಸಲು ಎಲ್ಲಿಯೂ ಜಾಗವಿಲ್ಲದೇ ಬಹಳ ಒದ್ದಾಡಿ, ಕೊನೆಗೆ ಟಿಕೆಟ್ ಕೌಂಟರ್‌ನ ಕಾರ್ಡ್‌ಬೋರ್ಡ್‌ನ ಹಿಂದೆ ಕುಳಿತುಕೊಂಡು ತನ್ನ ಮಗುವಿಗೆ ಹಾಲುಣಿಸಿರುತ್ತಾಳೆ. ಹೀಗಾಗಿ, ಹಾಲುಣಿಸುವ ಮಹಿಳೆಯವರಿಗೆ ಬಹಳ ತೊಂದರೆಯಾಗುತ್ತಿದೆ. ಮಾನ್ಯ ಸಚಿವರು ದಯಾಮಯಿಗಳಾಗಿದ್ದು, ಹೆಣ್ಣುಮಕ್ಕಳ ಬಗ್ಗೆ ಬಹಳ ಕಾಳಜಿ ಉಳ್ಳವರು ಇದ್ದಾರೆ. ಹಾಗಾಗಿ, ಎಲ್ಲಾ ಮೆಟ್ರೋ ನಿಲ್ದಾಣಗಳಲ್ಲಿಯೂ ಸಹ ಹಾಲುಣಿಸುವ ಕೇಂದ್ರವನ್ನು ಸ್ಥಾಪಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಸಲಹೆಯನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ.

**ಪ್ರಶ್ನೆ ಸಂಖ್ಯೆ: 1275 + 1229**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ಕಸ ಶೇಖರಣೆಯಾಗುತ್ತಿರುವುದರಿಂದ ಪರಿಸರ ಮಾಲಿನ್ಯ ಎಷ್ಟು ಪ್ರಮಾಣದಲ್ಲಿ ಆಗಿದೆ; ಈ ಬಗ್ಗೆ ಎಷ್ಟು ದೂರುಗಳು ಬಂದಿವೆ; ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ನಾನು ಪ್ರಶ್ನೆ ಕೇಳಿದ್ದೇನೆ. ನಾವು ಪೇಪರ್‌ನಲ್ಲಿ ಓದುವಾಗ, ಬೆಂಗಳೂರಿನಲ್ಲಿ ಕಸದ ಸಮಸ್ಯೆ ಬಹಳ ಇದೆ; ಎಲ್ಲೋ ಒಂದು ಕಡೆ ಬಹಳ ವಾಸನೆ ಬರುತ್ತಿದೆ; ಅಲ್ಲಿ ಜೀವನ ಮಾಡುವುದು ಕಷ್ಟವಾಗಿದೆ; ಸೊಳ್ಳೆ ಮತ್ತು ನೊಣಗಳ ಹಾವಳಿ ಜಾಸ್ತಿಯಾಗಿದೆ; ಹಾಗೂ ಅಲ್ಲಿನ ನಿವಾಸಿಗಳಿಗೆ ಬೇರೆ ಬೇರೆ ರೀತಿಯ ಕಾಯಿಲೆಗಳು ಬರುತ್ತಿವೆ ಎಂದು ಇದೆ. ಇದರ ಬಗ್ಗೆ ಉತ್ತರದಲ್ಲಿ ಯಾವುದೇ ರೀತಿಯ ಉಲ್ಲೇಖ ಇಲ್ಲ. ಹಾಗೆಯೇ ಎಲ್ಲೆಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕಗಳು ಇವೆ; ಅವುಗಳ ವಾರ್ಷಿಕ ನಿರ್ವಹಣೆಗೆ ಎಷ್ಟು ಖರ್ಚು ಬರುತ್ತಿದೆ; ಆ ಘಟಕದ ಸಾಮರ್ಥ್ಯ ಏನು ಎಂಬುದನ್ನು ಮೆಗಾ ಟನ್‌ಗಳಲ್ಲಿ ಮಾಹಿತಿ ನೀಡಿರುತ್ತಾರೆ. ಆದರೆ, ಒಟ್ಟಾರೆಯಾಗಿ ಮಾಡಿರುವಂಥದ್ದನ್ನು ಹೇಳಿರುವುದಿಲ್ಲ. ಜೊತೆಗೆ, ಕಂಪನಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಇದರಲ್ಲಿ ಒದಗಿಸಿರುವುದಿಲ್ಲ.

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಬಹಳ ಗಂಭೀರವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿರುತ್ತಾರೆ. ಇದೊಂದು ದೊಡ್ಡ ಮಾಫಿಯಾ. ನನ್ನ ಕೈಯಲ್ಲಿ ಇದನ್ನು ಇನ್ನೂ ಬಗೆಹರಿಸುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಏನಾದರೂ ಮಾಡಿ, ಬೆಂಗಳೂರು ಸಿಟಿಯಲ್ಲಿ ನಮ್ಮ ಶಾಸಕರು ಇದರ ಬಗ್ಗೆ ನಮಗೆ ಬಹಳ ಒತ್ತಡಗಳನ್ನು ಕ್ರಿಯೇಟ್ ಮಾಡುತ್ತಿದ್ದಾರೆ. ಒಂದು ಕಡೆ ಶ್ರೀ ಕೃಷ್ಣ ಬೈರೇಗೌಡರವರ ಕ್ಷೇತ್ರ; ಶ್ರೀ ಎಸ್.ಟಿ. ಸೋಮಶೇಖರ್‌ರವರ ಕ್ಷೇತ್ರ ಮತ್ತು ಇನ್ನೊಂದು ಕಡೆ ಮಹದೇವಪುರ ಶ್ರೀ ಮಂಜುಳಾ ಲಿಂಬಾವಳಿಯವರ ಕ್ಷೇತ್ರ ಇನ್ನೂ 5-6 ಕಡೆ ಎಲ್ಲಾ ಸೇರಿಕೊಂಡುಬಿಟ್ಟಿದೆ. ಅಲ್ಲಿ ನಮ್ಮನ್ನು ಎದುರಿಸಿ ಗಲಾಟೆ ಮಾಡಿ, "ಇಲ್ಲಿ ಕಸ ಹಾಕುವುದರಿಂದ ನಮಗೆ ವಾಸನೆ ಬರುತ್ತಿದೆ. ಹಾಗಾಗಿ, ಕೆಲವು ಅಭಿವೃದ್ಧಿ ಕಾರ್ಯಗಳಿಗಾಗಿ ಹಣ ನೀಡಬೇಕೆಂದು" ಸುಮಾರು 200 ಕೋಟಿ ರೂಪಾಯಿಯಿಂದ 300 ಕೋಟಿ ರೂಪಾಯಿ ಹಣವನ್ನು ವಸೂಲು ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸಬೇಕೆಂದು ನಾನು ಬೆಂಗಳೂರಿನ 4 ಕಡೆ ಘನತ್ಯಾಜ್ಯ ನಿರ್ವಹಣಾ ಘಟಕಗಳನ್ನು ನಿರ್ಮಾಣ ಮಾಡಬೇಕೆಂದು ಚಿಂತನೆ ಮಾಡಿದ್ದೇನೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಹೈದರಾಬಾದ್, ದೆಹಲಿ ಮತ್ತು ಚೆನ್ನೈನಲ್ಲಿ ಯಾವ ರೀತಿ ನಿರ್ವಹಣೆ ಮಾಡುತ್ತಿದ್ದಾರೆಂದು ಅಧ್ಯಯನ ಮಾಡಿಕೊಂಡು ಬಂದಿರುತ್ತೇನೆ. ಈ ಹಿಂದೆ ಕಸವನ್ನು ಸುಡುವಂಥದ್ದಕ್ಕೆ ಸುಮಾರು 15 ಕಡೆಗಳಲ್ಲಿ ಅನುಮತಿ ನೀಡಿದ್ದೆವು. ಅಂದರೆ, waste to energy ತಯಾರು ಮಾಡಬೇಕೆಂದು ಅನುಮತಿ ನೀಡಿದ್ದೆವು. ಅವೆಲ್ಲವೂ ಸಹ ವಿಫಲವಾಗಿರುತ್ತದೆ. ಆದರೆ, ಬಿಡದಿಯಲ್ಲಿ ಸರ್ಕಾರದ ಅಧೀನದಲ್ಲಿರುವ ಒಂದೇ ಒಂದು ಘಟಕವನ್ನು ಮಾತ್ರ ಬಲವಂತವಾಗಿ ನಡೆಸುತ್ತಿದ್ದಾರೆ. ಹಾಗಾಗಿ, ಈ

ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಬೆಂಗಳೂರಿನ ಹೊರಗಡೆ ಸುಮಾರು 15 ಕಿಲೋಮೀಟರ್ ದೂರದಲ್ಲಿ ಸುಮಾರು 100 ಎಕರೆ ಜಮೀನನ್ನು ತೆಗೆದುಕೊಂಡು ಹೋಗಿ, ಪಕ್ಕದಲ್ಲಿ ಅರಣ್ಯ ಪ್ರದೇಶ ಇರುವಂತಹ ಕಡೆಗಳಲ್ಲಿ ಕೆಲವು ಕೆಐಎಡಿಬಿ ಜಮೀನನ್ನು ನಾನು ಈಗಾಗಲೇ ಗುರುತಿಸಿರುತ್ತೇನೆ. ಈ ವಿಷಯಕ್ಕೆ ಸಂಬಂಧಿಸಿದಂತೆ, ಏನಾದರೂ ಮಾಡಿ ಟೆಂಡರ್ ಕರೆದು ಈ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಇದ್ದೇನೆ. ಈ ಮಧ್ಯದಲ್ಲಿ ಕಸ ವಿಲೇವಾರಿ ಮಾಡುವ ಗುಂಪು ಏನಿದೆ, ಅವರದ್ದು ಒಂದು ದೊಡ್ಡ ಮಾಫಿಯಾ. ಅವರವರೇ ಕುಳಿತುಕೊಂಡು ಒಂದು ಪ್ಯಾಕೇಜ್‌ಗಳನ್ನು ಮಾಡಿಕೊಂಡು, "ಕಸ ವಿಲೇವಾರಿ ಮಾಡುವುದನ್ನು ನಾವು ನಿಲ್ಲಿಸುತ್ತೇವೆ" ಎಂದು ಸರ್ಕಾರಕ್ಕೆ ಹೆದರಿಸುವಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಜೊತೆಗೆ, ರಸ್ತೆ ಬದಿಯಲ್ಲಿರುವ ಕಸವನ್ನು ತೆಗೆದುಕೊಂಡು ಹೋಗುವುದರಲ್ಲಿಯೂ ಸಹ ಬೇಕಾದಷ್ಟು ಗಾಂಧಿ ಲೆಕ್ಕ ಹಾಗೂ ತಿರುಪತಿ ಲೆಕ್ಕಗಳು ಸಹ ನಡೆಯುತ್ತಿರುತ್ತವೆ. ಅದಕ್ಕಾಗಿ, ಎಲ್ಲಾ ಕಡೆಗಳಲ್ಲಿಯೂ ಸಹ ಸಿಸಿಟಿವಿ ಕ್ಯಾಮೆರಾಗಳನ್ನು ಹಾಕಬೇಕೆಂದು ಯೋಚನೆ ಮಾಡಿದ್ದೇವೆ. ಈ ಎಲ್ಲಾ ಸಮಸ್ಯೆಗಳಿಗೂ ಸಹ ಒಂದು ಹೊಸ ಪಾಲಿಸಿಯನ್ನೇ ತೆಗೆದುಕೊಂಡು ಬಂದಿದ್ದೇನೆ. ಅದಕ್ಕಾಗಿ, ತಾವು ಮುಂದಿನ ದಿನಗಳಲ್ಲಿ ಸಹಕಾರ ನೀಡಬೇಕು. ಇದನ್ನು ಯಾರ ಕಾಲದಲ್ಲಿಯೂ ಸಹ ನಿಲ್ಲಿಸುವುದಕ್ಕೆ ಆಗಲಿಲ್ಲ. ಈ ಹಿಂದೆ ಬಿಜೆಪಿ ಸರ್ಕಾರದಲ್ಲಾಗಲಿ, ಜೆಡಿ(ಎಸ್) ಸರ್ಕಾರದಲ್ಲಾಗಲಿ ಅಥವಾ ನಮ್ಮ ಸರ್ಕಾರದಲ್ಲಾಗಲಿ ನಿಲ್ಲಿಸುವುದಕ್ಕೆ ಆಗಲಿಲ್ಲ. ಈ ವಿಷಯದಲ್ಲಿ ನಾನು ನಿಷ್ಠೂರ ಆದರೂ ಚಿಂತೆಯಿಲ್ಲ. ಇತ್ತೀಚೆಗೆ ಒಬ್ಬ ವ್ಯಕ್ತಿ ಒಂದು ವರದಿ ನೀಡಿದ್ದನು. ಅದೇನೆಂದರೆ, ಉಪ ಮುಖ್ಯಮಂತ್ರಿಯವರಾದ ಶ್ರೀ ಡಿ.ಕೆ. ಶಿವಕುಮಾರ್ ಹಾಗೂ ಮುಖ್ಯಮಂತ್ರಿಯವರು ಸುಮಾರು 15,500/- ಕೋಟಿ ರೂಪಾಯಿಗಳ ಹಣವನ್ನು ಹೊಡೆದಿರುತ್ತಾರೆಂದು ಎಂದು ಹೇಳಿ ಬಿಜೆಪಿ ಪಕ್ಷದ ಒಬ್ಬ ಅಧ್ಯಕ್ಷ ನಮ್ಮನ್ನೆಲ್ಲಾ ಬ್ಲಾಕ್‌ಮೇಲ್ ಮಾಡುವುದಕ್ಕೆ ಹೊರಟಿದ್ದರು. ಈ ಬ್ಲಾಕ್‌ಮೇಲ್‌ಗಳಿಗೆ ಜಗ್ಗುವ ಮಗಾ ಅಲ್ಲ ನಾನು ಮತ್ತು ನಮ್ಮ ಸರ್ಕಾರ ಕೂಡ ಅಲ್ಲ. ಇದರಲ್ಲಿ ಬೇರೆ ಬೇರೆ ದೊಡ್ಡ ಸಮಸ್ಯೆಗಳು ಇವೆ. ಅದನ್ನು ನಾನು ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ, ಇದರಲ್ಲಿ ಒಂದು ಪಾರದರ್ಶಕವಾದ ವ್ಯವಸ್ಥೆ ಜಾರಿಗೆ ತರಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಈ ಘನತ್ಯಾಜ್ಯದಿಂದ ಪವರ್ ಉತ್ಪಾದನೆ ಮಾಡುವಂತಹ ವಿಚಾರ ಎಲ್ಲವೂ ಹೋಗಿಬಿಟ್ಟಿದೆ. ಕನಿಷ್ಠ 20 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿ ದೊಡ್ಡ ಮಟ್ಟದಲ್ಲಿ ಮಾಡಿದರೆ ಮಾತ್ರ ಇದು ಉಳಿಯುತ್ತದೆ. ಇಲ್ಲವಾದರೆ, ಸಿ.ಎನ್.ಜಿ. ವಿಚಾರದಲ್ಲಿ ಮಾತ್ರ ಮಾಡಬಹುದಾಗಿರುತ್ತದೆ. ಈ ಬಗ್ಗೆ ನಾನು ತಮಿಳುನಾಡು ರಾಜ್ಯ, ಮಧ್ಯಪ್ರದೇಶ ರಾಜ್ಯ ಮತ್ತು ದೆಹಲಿಯಲ್ಲಿಯೂ ಸಹ ನೋಡಿರುತ್ತೇನೆ. ಇದಕ್ಕೆ ಏನಾದರೂ ಶಾಶ್ವತವಾದ ಪರಿಹಾರವನ್ನು ಮಾಡಬೇಕೆಂದು ಇದ್ದೇನೆ. ಈ ಬಗ್ಗೆ ಬೆಂಗಳೂರು ನಗರದಲ್ಲಿರುವ ಎಲ್ಲಾ ಎಂಎಲ್‌ಎ ಗಳೊಂದಿಗೆ ಮಾತನಾಡಿದ್ದು, ಅವರೆಲ್ಲರೂ ಸಹ ಈ ವಿಚಾರವನ್ನು ಒಪ್ಪಿರುತ್ತಾರೆ. We will come out with a final solution. ಉಳಿದ ಪ್ರಶ್ನೆಗಳಿಗೆ ನಾನು ಉತ್ತರ ನೀಡಿರುತ್ತೇನೆ. ಈ ಬಗ್ಗೆ ಉಪ ಪ್ರಶ್ನೆಗಳನ್ನು ಕೇಳುವುದಿದ್ದರೆ, ಅದನ್ನು ಕೇಳಲಿ. ಅದಕ್ಕೆ ನಾನು ಉತ್ತರ ನೀಡುತ್ತೇನೆ ಮತ್ತು ಅದಕ್ಕೆ ಏನು ಬೇಕಾದರೂ ನಾವು ಮಾಡುತ್ತೇವೆ. ಪ್ರತಿ ಟನ್ ಕಸ ವಿಲೇವಾರಿಗೆ ಎಷ್ಟು ಹಣ ನೀಡಬೇಕೆಂಬ ವಿಚಾರ ಕೋರ್ಟ್‌ನಲ್ಲಿದೆ. ಈ ವಿಚಾರವನ್ನು

ಕೆಲವರು ಕೋರ್ಟ್‌ಗೆ ಹಾಕಿಕೊಂಡು ವಿಚಾರಣೆಯನ್ನು ಸುಮ್ಮನೆ ಮುಂದೂಡಿಕೊಂಡು ಹೋಗುತ್ತಿದ್ದಾರೆ. ಇದರಲ್ಲಿ ಸುಮಾರು 80 ಪ್ಯಾಕೇಜ್‌ಗಳನ್ನು ಮಾಡಿಕೊಂಡು, ಇವೊತ್ತಿನ ದಿನ ಎಂಎಲ್‌ಎ ಒಬ್ಬರಿಗೆ ಲೆಟರ್ ಕೊಡುವುದು, ನಾಳೆಯ ದಿನ ಒಬ್ಬರಿಗೆ ಲೆಟರ್ ಕೊಡುವುದು. ಈ ಎಲ್ಲಾ ವಿಚಾರಗಳು ಇರುತ್ತವೆ. ಇದಕ್ಕೆ ಏನಾದರೂ ಒಂದು ಶಾಶ್ವತವಾದ ಪರಿಹಾರ ಮಾಡ ಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ. ಆದರೆ, ಇನ್ನು ಒಂದೂವರೆ ವರ್ಷ ಕಳೆದರೂ ಸಹ ನನ್ನ ಕೈಯಲ್ಲಿ efficient ಆಗಿ ತರುವುದಕ್ಕೆ ಆಗುತ್ತಿಲ್ಲ. ಆದರೆ, ಇನ್ನು ಮುಂದಿನ 3-4 ದಿನಗಳಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ, ಟೆಂಡರ್ ಕರೆಯುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರದ ಜವಾಬ್ದಾರಿಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ತೆಗೆದುಕೊಂಡಿರುವುದು ಒಳ್ಳೆಯ ವಿಚಾರವೇ. ಸಿಂಗಾಪುರ ಮಾದರಿಯಲ್ಲಿ ಕಸವನ್ನು ವಿಲೇವಾರಿ ಮಾಡುವುದು ಒಂದು ವಿನೂತನ ಪ್ರಯತ್ನವಾಗಿರುತ್ತದೆ. ಅಲ್ಲಿ ಪವರ್ ಕೂಡ ಜನರೇಟ್ ಆಗುತ್ತದಂತೆ. ಹಾಗಾಗಿ, ಈ ವಿಷಯದ ಬಗ್ಗೆ ಗಮನ ಕೊಡಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ. ಭಾರತದ ಸಿಲಿಕಾನ್ ಸಿಟಿ, ಐಟಿ-ಬಿಟಿ ಸಿಟಿ ಎಂದು ಬೆಂಗಳೂರು ನಗರವನ್ನು ಎಂದು ಕರೆಯುತ್ತೇವೆ. ಇಲ್ಲಿ ಒಂದು ಆರೋಪ ಬಂದಿದೆ. ಈ ಆರೋಪದ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಉಲ್ಲೇಖ ಮಾಡಿದರು. ಯಾವುದೇ ಆರೋಪವನ್ನು ತಳ್ಳಿಹಾಕುವಂತಹ ಜವಾಬ್ದಾರಿ ಸರ್ಕಾರದ ಮೇಲೆ ಪೂರ್ಣವಾಗಿರುತ್ತದೆ. ಅದರಲ್ಲಿ ಒಂದು ಬ್ಲಾಕ್ ಲಿಸ್ಟೆಡ್ ಸಂಸ್ಥೆಗೆ ಬೆಂಗಳೂರು ನಗರದ ಕಸ ವಿಲೇವಾರಿ ಮಾಡಲು ಸುಮಾರು 25 ವರ್ಷಗಳ ಕಾಲ ಗುತ್ತಿಗೆಯನ್ನು ಕೊಡಲಾಗಿದೆ ಎನ್ನುವಂಥದ್ದು ಬಂದಿದೆ. ಇದಕ್ಕೆ ಸ್ಪಷ್ಟೀಕರಣವನ್ನು ಕೊಡಬೇಕು. ನನ್ನ ಪ್ರಕಾರ ಒಂದು ಯೋಜನೆ ಸುಮಾರು 11 ತಿಂಗಳಿಗೆ ರಿವ್ಯೂ ಆಗುವಂತಹದ್ದು ಇರುತ್ತದೆ. ಪಂಚವಾರ್ಷಿಕ ಯೋಜನೆ 5 ವರ್ಷಗಳಿಗೆ ಆಗುತ್ತದೆ. ಅಂತಹದ್ದು ಒಂದು ಕಸ ವಿಲೇವಾರಿ ಮಾಡುವುದಕ್ಕೆ ಒಂದು ಕಂಪನಿಗೆ 25 ರಿಂದ 30 ವರ್ಷಗಳ ಕಾಲ ಗುತ್ತಿಗೆಯನ್ನು ಕೊಡುತ್ತೇವೆಂದು ಹೇಳುತ್ತಾರೆ. ಆದರೆ, ವರದಿಗಳ ಪ್ರಕಾರ ಅದು ಏನು ಹೇಳುತ್ತದೆಯೆಂದರೆ, ಮುಂಬರುವ ದಿನಗಳಲ್ಲಿ ಈ ಮೊತ್ತ ಬಿ.ಬಿ.ಎಂ.ಪಿ. ರೂಪಿಸಿರುವ ವಾರ್ಷಿಕ ಬಜೆಟ್‌ಗಿಂತಲೂ ಜಾಸ್ತಿಯಾಗುತ್ತದೆ ಎಂದು ಇದೆ. ಶೇಕಡ 10 ರಷ್ಟು ದರದಲ್ಲಿ ಇದನ್ನು ಏರಿಸಿಕೊಂಡು ಹೋಗುತ್ತೇವೆಂದು ಹೇಳುತ್ತಿದ್ದಾರೆ. ಹಾಗಾದರೆ, ನಾವು ಇವೊತ್ತಿನ ದಿವಸ ಎಲ್ಲಿಗೆ ಹೋಗುತ್ತಿದ್ದೇವೆ? ಇದೊಂದು ರಿವ್ಯೂ ಆಗುವುದು ಬೇಡವೇ? ಇಷ್ಟು ಒಳ್ಳೆಯ ಯೋಜನೆಗಳನ್ನು ತಂದು, ಅದು ನಮ್ಮ ಹಿಡಿತಕ್ಕೆ ಸಿಕ್ಕಿಲ್ಲವೆಂದರೆ, ಇದರ ಬಗ್ಗೆ ಇನ್ನೂ ಸಮಗ್ರವಾಗಿ ಯೋಚನೆ ಮಾಡಬೇಕಲ್ಲವೇ? ಕೇವಲ ನಮ್ಮ ಮೇಲೆ ಆಪಾದನೆಗಳು ಬಂದಿದೆ ಎಂದರೆ, ಆ ಆಪಾದನೆಗಳಿಂದ ಹೊರಬರುವಂಥದ್ದು ಕೂಡ ಸರ್ಕಾರದ ಜವಾಬ್ದಾರಿ ಮತ್ತು ಕರ್ತವ್ಯವಾಗಿದೆ. ಹಾಗೆಯೇ ಘನತ್ಯಾಜ್ಯ ವಿಲೇವಾರಿಯಲ್ಲಿ ಎರಡು ರೀತಿ ಇದೆ. ಹಳೆಯ ಕಟ್ಟಡಗಳನ್ನು ಹೊಡೆದು ಹಾಕಿದ ನಂತರ ಉಳಿಯುವಂತಹ ತ್ಯಾಜ್ಯವನ್ನು ರಸ್ತೆ ಬದಿಯಲ್ಲಿ, ಕೆರೆಗಳಿಗೆ, ಕಾಲುವೆಗಳಿಗೆ ಹಾಕುತ್ತಾರೆ. ಆದರೆ, ವಿದೇಶಗಳಲ್ಲಿ ಒಂದು ಕಟ್ಟಡವನ್ನು ನೆಲಸಮ ಮಾಡಬೇಕೆಂದರೆ, ಅದಕ್ಕೆ ಸುಮಾರು 50 ವರ್ಷಗಳಿಗೆ ಕಡಿಮೆ ಅವಧಿಯ ಕಟ್ಟಡವನ್ನು ನೆಲಸಮ

ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಪ್ರಮಾಣಪತ್ರ ಬೇಕು ಮತ್ತು ಪ್ರತಿಯೊಂದು ತ್ಯಾಜ್ಯ ಎಲ್ಲಿಗೆ ಹೋಗುತ್ತದೆ ಎಂಬ ಬಗ್ಗೆ ಸಂಪೂರ್ಣ ವಿವರ ನೀಡಬೇಕು. ಅದರ ಬಗ್ಗೆ ಏನೂ ಮಾಹಿತಿ ಇಲ್ಲ. ಹಾಗಾಗಿ, ನಾನು ಇದರಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳನ್ನು ತಪ್ಪಿತಸ್ಥರು ಎಂದು ನಾನು ಹೇಳುತ್ತಿಲ್ಲ. ಆದರೆ, ಇದೆಲ್ಲದರ ಬಗ್ಗೆಯೂ ಸಹ ಒಂದು ವಿವರವಾದಂತಹ ಶ್ವೇತಪತ್ರ ಬರಲಿ. ಇದರ ಬಗ್ಗೆ ಇನ್ನೂ ವಿಸ್ತೃತ ಚರ್ಚೆಗೆ ಹೋಗೋಣ. ಎಲ್ಲಾ ಎಂಎಲ್‌ಎಗಳು, ಎಂಎಲ್‌ಸಿಗಳು ಮತ್ತು ಎಂಪಿಗಳನ್ನು ಸೇರಿಸಿ ಒಂದು ಕಮಿಟಿಯನ್ನು ರಚಿಸಲಿ. ಆ ಕಮಿಟಿಯಲ್ಲಿ ಇದೆಲ್ಲಾ ಪ್ರಶ್ನೆಗಳಿಗೂ ಸಹ ಉತ್ತರ ಸಿಗಲಿ. ಜೊತೆಗೆ, ಬಂದಿರುವಂತಹ ಆರೋಪದ ಬಗ್ಗೆಯೂ ಸಹ ಅವರು ಸಮರ್ಥವಾದ ಉತ್ತರ ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವಂತಹ ಎಲ್ಲಾ ಚರ್ಚೆಗಳು ಸಹ ನಡೆದು ಹೋಗಿರುತ್ತವೆ ಮತ್ತು ಈ ಮಾಫಿಯಾ ತಡೆಯುವುದರಲ್ಲಿ ನಮ್ಮ ಸರ್ಕಾರವೂ ಸೇರಿದಂತೆ, ಎಲ್ಲಾ ಸರ್ಕಾರಗಳು ವಿಫಲವಾಗಿರುತ್ತವೆ ಎಂದು ನಾನು ಈಗಾಗಲೇ ಹೇಳಿರುತ್ತೇನೆ. ಅದಕ್ಕೆ ನಾನು ಹೇಳುವುದೇನೆಂದರೆ, ಯಾರು ಏನು ಬೇಕಾದರೂ ಆರೋಪ ಮಾಡಲಿ. ಆದರೆ, ಈ ಸಮಸ್ಯೆಗೆ ಶಾಶ್ವತವಾದ ಪರಿಹಾರ ಮಾಡುವುದಕ್ಕೆ ಬೆಂಗಳೂರಿನ 4 ಕಡೆ ಘನತ್ಯಾಜ್ಯ ವಿಲೇವಾರಿ ಘಟಕಗಳನ್ನು ನಿರ್ಮಾಣ ಮಾಡಬೇಕೆಂದು ಹೊರಟಿದ್ದೇವೆ. ಅದಕ್ಕಾಗಿ, ಬಿಬಿಎಂಪಿಯಲ್ಲಿ 3-4 ದಿನಗಳಲ್ಲಿ ಟೆಂಡರ್ ಕರೆಯುತ್ತಿದ್ದೇನೆ. ಮಾನ್ಯ ಸದಸ್ಯರು ಪವರ್ ಜನರೇಟ್ ಮಾಡುವ ಬಗ್ಗೆ ಏನು ಹೇಳಿದ್ದಾರೆ, ಅದೆಲ್ಲವೂ ಸಹ ವಿಫಲವಾಗಿರುತ್ತದೆ. ನಾನೇ ಇಂಧನ ಸಚಿವನಾಗಿದ್ದಾಗ, ಅದಕ್ಕೆ ಅನುಮತಿ ನೀಡಿದ್ದೆನು. ಕನಿಷ್ಠ 20 ಮೆಗಾವ್ಯಾಟ್ ಮೇಲೆ ಉತ್ಪಾದನಾ ಘಟಕ ನಿರ್ಮಾಣ ಮಾಡಿ, ಸುಮಾರು 2,000 ಕೋಟಿ ರೂಪಾಯಿ ಬಂಡವಾಳ ಹೂಡಿಕೆ ಮಾಡಿದರೆ ಮಾತ್ರ ಇದಕ್ಕೆ ತಡೆದುಕೊಳ್ಳುತ್ತದೆ. ಅದನ್ನು ಬಿಟ್ಟು, 50 ಕೋಟಿ, 100 ಕೋಟಿ ಅಥವಾ 200 ಕೋಟಿ ರೂಪಾಯಿ ಹಣ ನನಗೆ ಫಾರಿನ್ ನಿಂದ ಬರುತ್ತದೆ ಎಂದು ಹೇಳುವುದೆಲ್ಲವೂ ಬೋಗಸ್ ಆಗಿರುತ್ತವೆ. ಒಂದು ಕೂಡ ಸಕ್ಸಸ್ ಆಗಿರುವುದಿಲ್ಲ. ಹಾಗಾಗಿ, ಈ ವಿಚಾರದಲ್ಲಿ ಶಾಶ್ವತವಾದ ಪರಿಹಾರ ಹುಡುಕುವುದಕ್ಕೆ ಹೊಸದಾಗಿ ಏನೇನು ಟೆಕ್ನಾಲಜಿ ಇದೆ, ಅದರ ಬಗ್ಗೆ ಏನಾದರೂ ಸಲಹೆ ಇದ್ದರೆ ನಮಗೆ ಕೊಡಿ. ಈ ವಿಚಾರದಲ್ಲಿ ನಮಗೆ ಮತ್ತು ನಿಮಗೆ ಬಹಳ ಒತ್ತಡ ಮಾಡುವಂತಹ ಒಂದು ದೊಡ್ಡ ಮಾಫಿಯಾ ಇದರ ಹಿಂದೆ ಇದೆ. ಈ ವಿಚಾರದ ಬಗ್ಗೆ ಬೆಂಗಳೂರು ನಗರದ ಎಂಎಲ್‌ಎ ಗಳ ಬಳಿ ಕೇಳಿದರೆ ತಮಗೆ ಗೊತ್ತಾಗುತ್ತದೆ. ಅದನ್ನು ತಡೆಯುವುದು ಅಷ್ಟು ಸುಲಭದ ಮಾತಲ್ಲ. But, we will survive with that. ಏಕೆಂದರೆ, ಅವರೆಲ್ಲರೂ cartel ಹಾಕಿಕೊಂಡು ಅವರವರೇ ಟೆಂಡರ್ ಹಾಕಿಕೊಂಡು, ಏನೇನೋ ಮಾಡಿದ್ದಾರೆ. ಈ ಬಗ್ಗೆ ನನಗೆ ಒಂದು ರಿಪೋರ್ಟ್ ಕೂಡ ಬಂದಿದೆ. ಅಲ್ಲದೇ, ಈ ವಿಚಾರ ಕೋರ್ಟ್‌ನಲ್ಲಿದ್ದು, ಸದ್ಯದಲ್ಲಿಯೇ ಒಂದು ತೀರ್ಪು ಬರಬಹುದು. ಆದಾದ ತಕ್ಷಣ, we are going to call for four tenders. ಅದರಲ್ಲಿ ಯಾರು ಬೇಕಾದರೂ ಭಾಗವಹಿಸಬಹುದು. ಯಾರಿಗೆ ಸಾಮರ್ಥ್ಯ ಇದೆ, ಅವರಿಗೆ ಮಾತ್ರ ನಾವು

ಕೊಡುತ್ತೇವೆ. ಇನ್ನು ಏನಾದರೂ ನಮ್ಮಲ್ಲಿ ತಪ್ಪು ಇದ್ದರೆ, ಆ ತಪ್ಪನ್ನು ದಯಮಾಡಿ ತಿದ್ದುವಂತಹ ಕೆಲಸವನ್ನು ಮಾಡಲಿ. ಜೊತೆಗೆ, ಮಾನ್ಯ ಸದಸ್ಯರ ಸಲಹೆಯನ್ನು ಸ್ವೀಕಾರ ಮಾಡುವುದಕ್ಕೆ ನಾನು ತಯಾರಿದ್ದೇನೆ.

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಪಾರದರ್ಶಕವಾಗಿರಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಪಾರದರ್ಶಕವಾಗಿ ಇರುತ್ತೇನೆ.

**ಸಭಾಪತಿಯವರು:-** ತಡೆಹಿಡಿಯಲಾದ ಪ್ರಶ್ನೆಗಳ ಪಟ್ಟಿ; ದಿನಾಂಕ 12.12.2024 ರ ಸಮೂಹ-4ನೇ ಪಟ್ಟಿ, ದಿನಾಂಕ 13.12.2024ರ ಸಮೂಹ-5ನೇ ಪಟ್ಟಿ, ದಿನಾಂಕ 17.12.2024ರ ಸಮೂಹ-2ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆಗಳು.

(ಮುಂದು)

(1008) 19.12.2024 11.30 ವೈಎಲ್-ಬಿಎನ್ಎಸ್ (ಸಭಾಪತಿಯವರ ಉಪಸ್ಥಿತಿ)

**ಆ) ತಡೆಹಿಡಿಯಲಾದ ಪ್ರಶ್ನೆಗಳು**

**ಪ್ರಶ್ನೆ ಸಂಖ್ಯೆ 449**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ರಾಮಥಾಳ ಏತ ನೀರಾವರಿ ಯೋಜನೆ ಬಹಳ ಮಹತ್ವ ಪೂರ್ಣವಾಗಿರುವಂಥ ಯೋಜನೆಯಾಗಿದ್ದು, ಈಗಾಗಲೇ ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡು, 26,000 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ 5.84 ಟಿಎಂಸಿ ನೀರನ್ನು ಒದಗಿಸುವಂಥ ಕೆಲಸವಾಗಿದೆ. ಇದನ್ನು ಎರಡು ಹಂತಗಳಾಗಿ ವಿಂಗಡಿಸಲಾಗಿದ್ದು, ಒಂದು flow irrigation ಮತ್ತೊಂದು drip irrigation ಎಂದು ಮಾಡಲಾಗಿದೆ. Flow irrigation ಪದ್ಧತಿಯಡಿ ಸುಮಾರು 14,493 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿಯು ಕಾರ್ಯಾರಂಭವಾಗಿದೆ. ಆದರೆ, ಹನಿ ನೀರಾವರಿ ಪದ್ಧತಿಯು ಸಮರ್ಪಕವಾಗಿ ಆಗುತ್ತಿಲ್ಲ. ಬಹಳಷ್ಟು ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಇಸ್ರೇಲ್ ಮಾದರಿಯಲ್ಲಿ ಮಾಡಬೇಕೆನ್ನುವಂಥ ಯೋಜನೆಯನ್ನು ಪ್ರಥಮ ಬಾರಿಗೆ ಕೃಷ್ಣ ಮೇಲ್ದಂಡೆ ಯೋಜನೆಯಡಿ ತೆಗೆದುಕೊಂಡಿದ್ದು, ಇವತ್ತಿಗೂ ಕೂಡ ಸಮರ್ಪಕವಾಗಿ ನಿರ್ವಹಣೆಯಾಗುತ್ತಿಲ್ಲ. ಅಲ್ಲಿ ಹಾಕಿರುವಂಥ drip ಪೈಪ್‌ಲೈನ್‌ಗಳಲ್ಲ. ಪ್ರತಿಯೊಂದು ಕೂಡ ಹಾಳಾಗಿದ್ದು, ಅಲ್ಲಿನ ಜನರು ನೀರಾವರಿ ಸೌಲಭ್ಯದಿಂದ ವಂಚಿತರಾಗಿದ್ದಾರೆ.

ಮಾನ್ಯ ಉಪ ಮುಖ್ಯಮಂತ್ರಿಯವರು ಇದರ ಕಡೆ ಗಮನಹರಿಸಬೇಕು. ಇದರ ಮೇಲ್ವಿಚಾರಣೆಯನ್ನು ಮಾಡುವಂಥ ಜವಾಬ್ದಾರಿ ಯಾರಿಗೆ ಇದೆ ಹಾಗೂ ಈಗಾಗಲೇ ಟೆಂಡರ್ ಕೊಟ್ಟು 5 ವರ್ಷಗಳು ಕಳೆದಿದ್ದು, ಯಾವುದೇ ನಿರ್ವಹಣೆ ಆಗುತ್ತಿಲ್ಲ. ಅಲ್ಲಿನ ಜನರಿಗೆ ಹನಿ ನೀರಾವರಿ ಬಗ್ಗೆ ಜಾಗೃತಿ ಮೂಡಿಸಬೇಕೆಂಬ ನಿಟ್ಟಿನಲ್ಲಿ ಸಮರ್ಪಕವಾಗಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಶ್ರಮವಹಿಸುವುದರ ಮೂಲಕ ಮಾರ್ಗದರ್ಶನ ಕಲ್ಪಿಸಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಹೇಳುವುದೇನೆಂದರೆ, ಮಾನ್ಯ ಎಂ.ಬಿ.ಪಾಟೀಲ್‌ರವರು ಮಂತ್ರಿಗಳಾಗಿದ್ದಾಗ ನನ್ನ ಕೈಯಲ್ಲಿಯೇ inauguration ಮಾಡಿಸಿದ್ದಾರೆ. ಕೆಲವೊಂದನ್ನು ಮಾನ್ಯ ಎಂ.ಬಿ.ಪಾಟೀಲ್‌ರವರು ತೋರಿಸಿದಾಗ ನಾನು ಸಹ ಆ ಕೆಲಸವಾಗುತ್ತದೆ ಎಂಬ ದೃಷ್ಟಿಯಿಂದ ಬಹಳ ಖುಷಿಯನ್ನು

ಪಟ್ಟಿದ್ದೆನು. ಹಾಗೆಯೇ ನನ್ನ ಕ್ಷೇತ್ರದಲ್ಲಿ ಮತ್ತು ಮಳವಳ್ಳಿಯಲ್ಲಿ ಸಹ ಹನಿ ನೀರಾವರಿ ಮಾಡಬೇಕೆಂದು ಹೊರಟೆವು. ಈಗ ನೋಡಿದರೆ, it is a failed project. ನಮ್ಮ ರೈತರಿಗೆ patience ಇಲ್ಲ. ಅವರು ಹಣ ಭರಿಸಿ ಹನಿ ನೀರಾವರಿ ಮಾಡಿದರೆ ಅದನ್ನು ಉಳಿಸಿಕೊಳ್ಳುತ್ತಾರೆ. ಆದರೆ, ಸರ್ಕಾರವು ಹನಿ ನೀರಾವರಿಗೆ ಹಣ ಕೊಟ್ಟರೆ, ಅಷ್ಟಾಗಿ ರೈತರು ಅದರ ಬಗ್ಗೆ ಗಮನಹರಿಸುವುದಿಲ್ಲ. ಒಂದು ಬೆಳೆ ಬೆಳೆಯುತ್ತಾರೆ, ಎರಡನೆ ಬೆಳೆ ಬೆಳೆಯುವ ಹೊತ್ತಿಗೆ ಪೈಪ್ ಅನ್ನು ಕಿತ್ತು ಹಾಕಿ ಮಾಮೂಲಿಯಾಗಿ ಮಾಡುತ್ತಾರೆ. ಅದಕ್ಕಾಗಿ ಮಧ್ಯಪ್ರದೇಶದಲ್ಲಿ "ಒಂದೊಂದು ಎಕರೆಗೂ ಪೈಪ್ ಹಾಕಿ ನೀರು ಬಿಡುವಂಥ" ವ್ಯವಸ್ಥೆ ಇದೆ. ಅದರ ಬಗ್ಗೆ ನಾವು ಎಕ್ಸಾಮಿನ್ ಮಾಡುತ್ತಿದ್ದೇವೆ. ಈಗಾಗಲೇ ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಹೇಳಿದ ಹಾಗೆ ಟೆಂಡರ್ ಕೊಟ್ಟು 5 ವರ್ಷಗಳು ಕಳೆದಿದ್ದು, ಇನ್ನು ಕೆಲವರಿಗೆ ನಾನು ಫೈನಲ್ ಬಿಲ್ ಕೊಟ್ಟಿಲ್ಲ. ಜೈನ್ ಹಾಗೂ ಮೇಗಾ ಸಂಸ್ಥೆಯವರು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ ಎಂಬ ದೂರು ಬಂದಿರುವ ಕಾರಣ ಫೈನಲ್ ಬಿಲ್ ಸಹ ಕೊಡದೇ ಹಾಗೆಯೇ hold ನಲ್ಲಿಟ್ಟಿದ್ದೇನೆ. ಹಾಗಾಗಿ, ಮಾನ್ಯ ಸದಸ್ಯರು ಹೇಳಿದಂತೆ ಯಾವುದೇ ತಪ್ಪು ಇಲ್ಲ, ಅವರು ಹೇಳಿದ್ದು ಸರಿಯಾಗಿದೆ. ಯಾವ ರೀತಿ ಮಾಡಬೇಕು ಎಂಬುದಕ್ಕೆ ಒಂದು ಶಾಶ್ವತ ಪರಿಹಾರ ಕಂಡು ಹಿಡಿಯಬೇಕು. ಹೊಸ ಪ್ರಾಜೆಕ್ಟ್ ತೆಗೆದುಕೊಳ್ಳುವ ಮುನ್ನ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿ ಯಾವ್ಯಾವ ಯೋಜನೆ ಇದೆ ಅದೆಲ್ಲವನ್ನೂ ಸಮರ್ಪಕವಾಗಿ ನೋಡಿ, ಒಂದು ತೀರ್ಮಾನ ತೆಗೆದುಕೊಳ್ಳಲಾಗುವುದು.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ಆದಷ್ಟು ಬೇಗ ಇದಕ್ಕೊಂದು ಕಾರ್ಯಕಲ್ಪ ತರಬೇಕು. ಹನಿ ನೀರಾವರಿ ಪದ್ಧತಿಯನ್ನು ಅನುಸರಿಸಿದರೆ ಇಸ್ರೇಲ್ ಮಾದರಿಗೆ ಸ್ವಲ್ಪ ಒತ್ತು ಕೊಡಬೇಕು.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ನೀರಿನ ಬೆಲೆ ಕೋಲಾರ ಮತ್ತು ಚಿಕ್ಕಬಳ್ಳಾಪುರದ ಜನರಿಗೆ ಮಾತ್ರ ಗೊತ್ತಿರುವುದು. ಅವರನ್ನು ಬಿಟ್ಟರೆ ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರ ಜಿಲ್ಲೆಯವರಿಗಾಗಲೀ ಅಥವಾ ಮಂಡ್ಯದವರಿಗಾಗಲೀ ನೀರಿನ ಬೆಲೆ ಗೊತ್ತಿಲ್ಲ. ಚಿಕ್ಕಬಳ್ಳಾಪುರದಲ್ಲಾಗಲೀ ಅಥವಾ ಕೋಲಾರದಲ್ಲಾಗಲೀ ಒಬ್ಬ ರೈತನ suicide ಪ್ರಕರಣ ಇಲ್ಲ. ಸುಮಾರು 1,200, 1,300, 2,000 ಅಡಿ ಆಳದವರೆಗೂ ಕೊಳವೆ ಬಾವಿ ತೆಗೆಸುತ್ತಾರೆ. ನೀರನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದು ಆ ರೈತರಿಗೆ ತಿಳಿದಿದೆ. ಒಳ್ಳೆಯದಾದ ಸಿಲ್ಕ್, ಮಿಲ್ಕ್, ಹೈನುಗಾರಿಕೆ, ತರಕಾರಿ, ಹಣ್ಣು-ಹಂಪಲು ಚೆನ್ನಾಗಿ ಬೆಳೆಯುತ್ತಿದ್ದು, ಅವರಿಗೆ ಆ ನೀರಿನ ಬೆಲೆ ಗೊತ್ತಿದೆ. ಆದರೆ, ನಮ್ಮವರಿಗೆ ಅದರ ಬೆಲೆ ಗೊತ್ತಿಲ್ಲ. ಕೆಲವು ಕಡೆ sprinkler ಅನ್ನು ಕಬ್ಬಿನ ಬೆಳೆಗೆ ಉಪಯೋಗಿಸುತ್ತಿದ್ದು, ನನಗೂ ಸಹ ಅರ್ಥವಾಗುತ್ತದೆ. ಇದಕ್ಕೆ ಏನಾದರೂ ಶಾಶ್ವತ ಪರಿಹಾರ ಕಂಡು ಹಿಡಿಯುವ ಸಲುವಾಗಿ ಈಗಾಗಲೇ

ಟೆಕ್ನಿಕಲ್ ಟೀಮ್‌ಗೆ ವಹಿಸಲಾಗಿದ್ದು, ಅದರ ವರದಿ ಬಂದ ಮೇಲೆ ಎಲ್ಲರಿಗೂ share ಮಾಡುತ್ತೇನೆ ಹಾಗೂ ಮತ್ತೇನಾದರೂ ಸಲಹೆ ಇದ್ದ ಪಕ್ಷದಲ್ಲಿ ಅದನ್ನು ಸಹ ಸ್ವೀಕರಿಸುತ್ತೇನೆ.

**ಪ್ರಶ್ನೆ ಸಂಖ್ಯೆ 436**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಯವರು (ಅ) ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರ ನೀಡಿದ್ದು, ಅದಕ್ಕೆ ನನ್ನ ತಕರಾರು ಏನಿಲ್ಲ. (ಆ) ಪ್ರಶ್ನೆಯಲ್ಲಿರುವಂತೆ "ಈ ಹಿನ್ನೆಲೆಯಲ್ಲಿ ಭೂಸ್ವಾಧೀನ ಕಾಯ್ದೆ ಕಲಂ 11(1) ಅಧಿಸೂಚನೆ ನಂತರದ 19(1) ಅಧಿಸೂಚನೆಗಳನ್ನು ಕೂಡ ಅನೇಕ ಜಮೀನುಗಳ ಮಾಲೀಕರಿಗೆ ನೀಡಲಾಗಿದೆಯೇ? ಎಂಬುದಕ್ಕೆ "ನೀಡಲಾಗಿದೆ" ಎಂದು ವಿವರಣೆಯನ್ನು ಕೊಡುತ್ತಾ, ಈ ಪೈಕಿ 22 ಗ್ರಾಮಗಳ 4965ಎ-06 ಗುಂಟೆ ಭೂಮಿಗೆ ಕ್ಷೇತ್ರಕ್ಕೆ ಕಲಂ 19(1) ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಲಾಗಿದೆ. ನಾನು ಹೇಳುವುದೇನೆಂದರೆ, ಈ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಎಲ್ಲವೂ ಸುಮಾರು 10, 12 ವರ್ಷಗಳ ಹಿಂದೆ ಬಂದಿರುವಂಥದ್ದಾಗಿದೆ. Notification under section 4(1) and 6(1) vitiate ಆಗುವುದು ಎಲ್ಲವೂ ಆಗುತ್ತಿದೆ. ಈ ವಿಷಯದ ಸಲುವಾಗಿ ಪರಿಹಾರಧನ ವಿತರಣೆ ಮಾಡುವಂಥ ಕಾರ್ಯಕ್ರಮ ಹಮ್ಮಿಕೊಳ್ಳಲಿ. ಮತ್ತೊಮ್ಮೆ vitiate ಮಾಡಲು ಹೋಗಬಾರದೆಂದು ಒತ್ತಾಯ ಮಾಡುತ್ತೇನೆ. ಹಾಗೆಯೇ ಪ್ರಶ್ನೆ (ಈ) ಗೆ ಸಂಬಂಧಿಸಿದಂತೆ "ಹೊಸ ಭೂಸ್ವಾಧೀನ ಕಾಯ್ದೆ 2013ರ ಕಲಂ 11(4) ರನ್ವಯ ಭೂಸ್ವಾಧೀನ ಪ್ರಕ್ರಿಯೆಯನ್ನು ಜಾರಿಯಲ್ಲಿಡಲಾಗಿದೆ ಮತ್ತು ಒಂದೇ ಹಂತದಲ್ಲಿ payment ಮಾಡುತ್ತೇವೆ" ಎನ್ನುವಂಥ ಭರವಸೆ ಕೊಟ್ಟಿದ್ದಾರೆ. ಜಮೀನುಗಳನ್ನು 2 ಹಂತದಲ್ಲಿ ಅಂದರೆ, (1) 519.60 ಮೀಟರ್‌ನಿಂದ 522.00 ಮೀಟರ್‌ವರೆಗೆ ಮತ್ತು (2) 522.00 ಮೀಟರ್‌ನಿಂದ 524.256 ಮೀಟರ್‌ವರೆಗೆ ಭೂಸ್ವಾಧೀನಪಡಿಸಿಕೊಳ್ಳುವ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ" ಎಂದು ಉತ್ತರದಲ್ಲಿ ತಿಳಿಸಲಾಗಿದ್ದು, ಅದರ ಸಲುವಾಗಿ vitiate ಆಗದಂತೆ process ಮಾಡಲಾಗುತ್ತಿದೆಯೇ ಎಂಬುದನ್ನು ಕೇಳಬಯಸುತ್ತೇನೆ.

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಎರಡು-ಮೂರು ಸಮಸ್ಯೆಗಳಿವೆ. ಕಂದಾಯ ಇಲಾಖೆಯಿಂದ ಜಲ ಸಂಪನ್ಮೂಲ ಇಲಾಖೆಗೆ ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ, ಜಲ ಸಂಪನ್ಮೂಲ ಇಲಾಖೆಯವರ ನೇರವಾದ involvement ಇರಬೇಕೆಂಬ ಸಲಹೆಯನ್ನು ಕೆಲವು ಸದಸ್ಯರು ಕೊಟ್ಟಿದ್ದಾರೆ. ಅಂತಿಮವಾಗಿ ಮಾಡುವುದರ ಮೂಲಕ ಯಾವುದೇ ಸಮಸ್ಯೆ ಇಲ್ಲದೇ ಒಂದೇ ಕಂತಿನಲ್ಲಿ ಹಣ ಬಿಡುಗಡೆ ಮಾಡಬೇಕು ಎಂಬುದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದೆ. ಇದರ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಲಾಗುತ್ತಿದೆ. ಇದಕ್ಕೆ ಇರುವಂಥ ಪರಿಹಾರ ಏನೆಂಬುದರ ಕುರಿತು ಖಾಸಗಿಯವರೊಂದಿಗೂ ಸಹ ಮಾತನಾಡುವ ಕುರಿತು, ಏಕೆಂದರೆ, ಅವರು ಸಹ ಜಮೀನು ಕಳೆದುಕೊಂಡ ರೈತರಿದ್ದು, ಅವರ ನೋವು ನಮಗೆ ಅರ್ಥವಾಗುತ್ತದೆ.

We will sit together and sort it out. ಎಲ್ಲಾ ಪಕ್ಷದವರು ಕುಳಿತುಕೊಂಡು ಚರ್ಚಿಸಿ, ಇದಕ್ಕೊಂದು ಅಭಿಪ್ರಾಯಕ್ಕೆ ಬರಲಾಗುವುದು.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಇಷ್ಟು ಎಕರೆ ಈಗಾಗಲೇ ಭೂಸ್ವಾಧೀನದ ಪ್ರೋಸಸ್‌ನಲ್ಲಿದೆ. ಮೊನ್ನೆ ದಿವಸ ಚರ್ಚಿಸಲಾಗಿದೆ ಹಾಗೂ ತೀರ್ಮಾನಿಸಲಾಗಿದೆ. ಆ ದರದ ಪ್ರಕಾರ evaluation ಮಾಡಿ ಪರಿಹಾರ ಧನ ಕೊಡುವಂಥ ಕೆಲಸ ಮಾಡಬಹುದು.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್‌ರವರೇ, ಒಂದು ಎಕರೆಗೆ ಎಷ್ಟು ರೂಪಾಯಿ ಕೇಳಲಾಗಿದೆ?

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಎಕರೆಗೆ ಸುಮಾರು ರೂ.40.00 ಲಕ್ಷ, ರೂ.50.00 ಲಕ್ಷ ಕೇಳಲಾಗಿದೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿರವರು ಸುಮಾರು ರೂ.20.00 ಲಕ್ಷ, ರೂ.25.00 ಲಕ್ಷ ಕೊಡಲು ತೀರ್ಮಾನ ಮಾಡಲಾಗಿದ್ದು, ಈಗ ರೈತರು ಡಬಲ್ ಕೇಳುತ್ತಿದ್ದಾರೆ. ಇದರ ಮಧ್ಯೆ ಕೆಲವರು ನ್ಯಾಯಾಲಯದ ಮೊರೆ ಹೋಗಿದ್ದು, ಎಕರೆಗೆ ಸುಮಾರು ರೂ.14.00 ಕೋಟಿಗಳಂತೆ ನೀಡಬೇಕೆಂದು ಆದೇಶವಾಗಿದೆ. ಈ ವಿಚಾರವನ್ನು ನಾನು ಹೇಳಿದರೆ ಮೀಡಿಯಾದವರೆಲ್ಲರೂ ಗಾಬರಿಯಾಗುತ್ತಾರೆ. ಕೆಲವು ಜಮೀನಿಗೆ ಎಕರೆಗೆ ಸುಮಾರು ರೂ.10.00 ಕೋಟಿ ಕೊಡಲು ಆದೇಶವಾಗಿದೆ. ವಕೀಲರು, ಇನ್ನಿತರರು adjustment ಮಾಡಿಕೊಂಡು ಈ ರೀತಿ ಮಾಡಿದ್ದಾರೆ. ಆ ಹಣವು ಜಮೀನು ಮಾಲೀಕನಿಗೂ ತಲುಪುವುದಿಲ್ಲ. ಅದರ ಬಗ್ಗೆ ಉಲ್ಲೇಖ ಮಾಡಿದರೆ, ತಾವೆಲ್ಲರೂ ಗಾಬರಿಯಾಗುತ್ತೀರಿ. ಬೆಂಗಳೂರಿನಲ್ಲಿ ಸಹ ಎಕರೆಗೆ ಸುಮಾರು ರೂ.14.00 ಕೋಟಿ, ರೂ.15.00 ಕೋಟಿ ಕೊಡುವುದಿಲ್ಲ. ಅವಶ್ಯಕವಿದ್ದಲ್ಲಿ ಯಾವ್ಯಾವ ಸರ್ವೆ ನಂಬರ್ ಇದೆ ಎಂಬುದನ್ನು ಸಹ ಬಿಡಿಸಿ ಹೇಳುತ್ತೇನೆ. ಅದಕ್ಕಾಗಿ consent acquisition ಗೆ ಒಪ್ಪಿಸಲಾಗಿದೆ. We are coming out with a plan.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಹೌದು ಒಪ್ಪಿದ್ದೇವೆ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಿ.ಟಿ.ರವಿರವರೇ, ಸುಮಾರು ರೂ.15.00 ಕೋಟಿ ನೀಡಬೇಕೆಂದು ನ್ಯಾಯಾಲಯದಿಂದ ಆದೇಶ ಹೊರಡಿಸಲಾಗಿದೆ. ಅಲ್ಲಿಯ ಭೂಮಿ ಬೆಲೆ ಕೇವಲ ರೂ.3,79,000 ಮಾತ್ರ. ನ್ಯಾಯಾಲಯದಲ್ಲಿ ಅಂತಿಮ ಆದೇಶವಾಗಿರುವುದು ಸುಮಾರು ರೂ.14.00 ಕೋಟಿ ಆಗಿದೆ. ಇದಕ್ಕೆ ಒಪ್ಪಿಕೊಳ್ಳಿ ಎಂದು ಗಲಾಟೆ ಮಾಡುತ್ತಿದ್ದಾರೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಇಲ್ಲ. ನಾವು ಒಪ್ಪಿಕೊಳ್ಳಿ ಎಂದು ಗಲಾಟೆ ಮಾಡಿಯೇ ಇಲ್ಲ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಯರೇ ನಾನು ಈ ಕಡೆ ನ್ಯಾಯಧೀಶರು ಆಗಲಿಲ್ಲ, ಆ ಕಡೆ ವಕೀಲರು ಆಗಲಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, he has become a law maker and he should be proud of it.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ನಾವು ನ್ಯಾಯಾಲಯದ ಆದೇಶದಂತೆ ಒಪ್ಪಿಕೊಂಡು ಅಷ್ಟು ಹಣವನ್ನು ಕೊಡಿ ಎಂದು ಹೇಳುತ್ತಿಲ್ಲ. vicinity ಯೊಳಗೆ ಇರುವುದು, potential value ಇರುವುದು, ಬೆಳಗಾವಿ ಪಕ್ಕದ ಜಮೀನು ಸುಮಾರು ರೂ.1.00 ಕೋಟಿಯಿಂದ ರೂ.2.00 ಕೋಟಿವರೆಗೆ ಬೆಲೆ ಬಾಳುತ್ತದೆ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್‌ರವರೇ, ತಾವು ಎಷ್ಟು ಹಣವನ್ನು ನೀಡುವಂತೆ ಕೇಳಲಾಗಿದೆ?

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಇವತ್ತಿನವರೆಗೂ ಹಣ ನೀಡದ ಪ್ರಯುಕ್ತ ಘೋಷಿತ ಪರಿಹಾರಕ್ಕೆ ಸರ್ಕಾರ ಸುಮಾರು ರೂ.12.00 ಕೋಟಿವರೆಗೂ ಬಡ್ಡಿ ಭರಿಸಬೇಕಾಗಿದೆ.

**ಸಭಾಪತಿಯವರು:-** ತಾವು ಎಕರೆಗೆ ಎಷ್ಟು ರೂಪಾಯಿ ಕೇಳಿದ್ದೀರಿ?

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಸುಮಾರು ರೂ.40.00 ಲಕ್ಷ, ರೂ.50.00 ಲಕ್ಷ ಮಿನಿಮಮ್ ಕೇಳಲಾಗಿದೆ. It is a very meagre amount. ನಮಗೆ ಎಲ್ಲಿಯೂ ಸಹ ಆ ದರಕ್ಕೆ ಜಮೀನು ಸಿಗುವುದಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಈ ಸಂಬಂಧ ನಾನು ಚರ್ಚೆ ಮಾಡುತ್ತೇನೆ. We will come back to that issue.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಯವರು ನೀಡುವಂಥ ಸುಮಾರು ರೂ.25.00 ಲಕ್ಷ ಪರಿಹಾರಧನಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ನಮಗೆ ಜಮೀನನ್ನು ಎಲ್ಲಿ ಕೊಡಿಸುತ್ತಾರೆ, ಕೊಡಿಸಲಿ ನಾವು ಸಿದ್ಧರಾಗಿದ್ದೇವೆ. ನಾವು ಸಹ ಜಮೀನು ಖರೀದಿ ಮಾಡಬೇಕಲ್ಲವೇ? ನಮ್ಮ ಮಕ್ಕಳು ಒಕ್ಕಲುತನ ಮಾಡಬೇಕೇ, ಬೇಡವೇ?

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಏನು ನಡೆದಿದೆ ಎಂಬುದನ್ನು ನಾನು ಇಲ್ಲಿ ಹೇಳಲು ಆಗುವುದಿಲ್ಲ. ಮಾನ್ಯ ಸಿ.ಟಿ.ರವಿರವರೇ, leader ಗಳೇ ಸುಮಾರು 200 ಎಕರೆ, 300 ಎಕರೆ ಜಮೀನು ತೆಗೆದುಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಡಿ.ಕೆ.ಶಿವಕುಮಾರ್:-** ಮಾನ್ಯ ಸಭಾಪತಿಯವರೇ, ಸುಮಾರು ರೂ.3.00 ಲಕ್ಷ ತಗಲುವ ಜಮೀನಿಗೆ ಸುಮಾರು ರೂ.25.00 ಲಕ್ಷಕ್ಕೆ ರಿಜಿಸ್ಟ್ರೇಷನ್ ಮಾಡಿಸಲಾಗಿದೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲಾ ಜಮೀನಿಗೂ ಆ ದರ ಇಲ್ಲ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಯವರು ಯಾವ ಏರಿಯಾದಲ್ಲಿ ಬೇಕಾದರೂ ಜಮೀನು ಕೊಡಿಸಲಿ, ನಾವು ಅಲ್ಲಿಗೆ ಬರುತ್ತೇವೆ. ಎಷ್ಟು ಪರಿಹಾರಧನ ಕೊಡುತ್ತಾರೆ ಕೊಟ್ಟು, ಅವರು ಎಲ್ಲಿ ಹೇಳುತ್ತಾರೆ ಅಲ್ಲಿಗೆ ಬಂದುಬಿಡುತ್ತೇವೆ, ತೊಂದರೆ ಏನಿಲ್ಲ. ನೀರಾವರಿ ವ್ಯವಸ್ಥೆ ಮಾಡಿಕೊಡಲಿ. Asset create ಆಗುತ್ತದೆ. ಒಂದು ಪ್ರಶ್ನೆ ಕೇಳಿದ ಕೂಡಲೇ ಎತ್ತಿನಹೊಳೆ ಯೋಜನೆ, ಹೇಮಾವತಿ ಡ್ಯಾಂ ಎಲ್ಲದರ ಕುರಿತು ಮಾತನಾಡಿದ್ದು, ಅದಕ್ಕೆ ಬೇಡ ಎಂದು ಹೇಳಿಲ್ಲ. ಅದನ್ನು ಸಹ ಮಾಡಲೇಬೇಕಾಗಿದ್ದು, ಅದು ಸರ್ಕಾರದ ಬದ್ಧತೆಯಾಗಿದೆ. ಅವರನ್ನು ಅಣ್ಣ-ತಮ್ಮಂದಿರ ರೀತಿ ನೋಡುತ್ತಿದ್ದು, ಮೇಲಿಂದ ಮೇಲೆ ಆ ಜನರು ಸರ್ಕಾರದ ಮುಂದೆ ಬಂದು ಪ್ರತಿಭಟನೆ ಮಾಡುತ್ತಾರೆ, ಕಾವೇರಿ ಸಲುವಾಗಿ ಕಿವಿ ಊದುತ್ತಾರೆ, ಒಂದೇ, ಎರಡೇ. ಇಂತಹ

ಕೆಲಸವನ್ನೆಲ್ಲಾ ಮಾಡುತ್ತಾರೆ. ಅವರು ಮೇಲಿಂದ ಮೇಲೆ ಸಮೀಪದಲ್ಲಿ ಸಿಗುವಂಥ ಜನರಾಗಿದ್ದು, ನಾವು ದೂರದ ಊರಿನಿಂದ ಮಾನ್ಯ ಉಪ ಮುಖ್ಯಮಂತ್ರಿಯವರ ಹತ್ತಿರ ಬರಲು ಆಗುವುದಿಲ್ಲ. ನಮ್ಮನ್ನು ಸಹ ಅವರ ಅಣ್ಣ-ತಮ್ಮಂದಿರು ಎಂದು ಏತಕ್ಕೆ ಸರ್ಕಾರ ಪರಿಗಣನೆ ಮಾಡುತ್ತಿಲ್ಲ. ಈ ಭಾಗದ ಜನರಿಗೆ ಆ ರೀತಿ ಭಾವನೆ ಮೂಡುವ ರೀತಿ ಏತಕ್ಕೆ ಮಾಡುತ್ತಾರೆ? ನಮಗೆ ಏತಕ್ಕೆ ಹಿಂಸೆ ಕೊಡುತ್ತಿದ್ದಾರೆ? ನಮ್ಮ ಮಕ್ಕಳು ಸಹ ಮುಂದಿನ ಭವಿಷ್ಯವನ್ನು ಕಟ್ಟಿಕೊಳ್ಳಬೇಕಲ್ಲವೇ? ನೀರಾವರಿ, ಜಮೀನಿನ ಸಾಗುವಳಿ ಕೆಲಸ ಮಾಡಬೇಕೇ ಅಥವಾ ಸಾಗುವಳಿ ಮಾಡಬಾರದೇ? ರೈತಾಪಿ ಕೆಲಸವನ್ನು ಬಿಟ್ಟು ಬಿಡಬೇಕೇ?

(ಮುಂದು)

(1009) 19.12.2024 (11.40) ಎಸ್‌ಕೆ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಪಿ.ಹೆಚ್. ಪೂಜಾರ್ (ಮುಂದು):**

ಇಲ್ಲಿ asset create ಆಗುತ್ತಿದೆ. ನೀರಾವರಿಯನ್ನಾಗಿ ಮಾಡುವುದರಿಂದ ದೊಡ್ಡ ಪ್ರಮಾಣದ asset create ಆಗುತ್ತದೆ. ಈ ಬಗ್ಗೆ ಕೇಳುತ್ತಿದ್ದೇವೆ. 130 ಟಿ.ಎಂ.ಸಿ. ನೀರನ್ನು ನೀರಾವರಿಗೆ ಉಪಯೋಗ ಮಾಡಿಕೊಟ್ಟರೆ, ಭವಿಷ್ಯದಲ್ಲಿ ಸರ್ಕಾರಕ್ಕೆ ಸಾಲ ಕೊಡುತ್ತೇವೆ. ದಯವಿಟ್ಟು, ಇನ್ನೂ ಹತ್ತು-ಹದಿನೈದು ವರ್ಷವಾದರೂ ಯೋಜನೆಯನ್ನು ತೆಗೆದುಕೊಂಡು ಹೋಗಬೇಡಿ ಎಂದು ಹೇಳುತ್ತಿದ್ದೇನೆ. ತಾವು ಮೊನ್ನೆ ಮಾತನಾಡಿದ್ದೀರಿ.

**ಶ್ರೀ ಡಿ.ಕೆ. ಶಿವಕುಮಾರ್:-** ಆಗಲಿ, ರೈತರ ಪರವಾಗಿ ಹೇಳುತ್ತಿದ್ದೀರಾ.

**ಶ್ರೀ ಪಿ.ಹೆಚ್. ಪೂಜಾರ್:-** ತಾವು ಒಪ್ಪಿಕೊಂಡು ಮಾಡುತ್ತೇವೆಂದು ಹೇಳಿದ್ದೀರಿ.

**ಸಭಾಪತಿಯವರು:-** ಮಾನ್ಯ ಪೂಜಾರ್‌ರವರೇ, ಮಾನ್ಯ ಸಚಿವರು ಮಾಡುತ್ತಾರೆ ಬಿಡಿ. ಮಾನ್ಯ ಸಚಿವರೇ, ಎಕರೆಗೆ 40 ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟು ಬಿಡಿ.

**ಪ್ರಶ್ನೆ ಸಂಖ್ಯೆ: 407**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರುವ ಪ್ರಶ್ನೆ ಏನೆಂದರೆ, ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಎಷ್ಟು ತೆರಿಗೆ ಸಂಗ್ರಹವಾಗಿದೆ? 2023-24, 2024-25ನೇ ಸಾಲಿನ ಅಂತ್ಯದವರೆಗೆ ಗುರಿ ಹೊಂದಲಾಗಿದ್ದ ಮತ್ತು ಸಂಗ್ರಹವಾಗಿರುವ ತೆರಿಗೆ ಎಷ್ಟು ಎಂದು ಕೇಳಿದ್ದೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿರುವಂತೆ, 2023-24ರ ಗುರಿ ರೂ. 1,60,303 ಕೋಟಿ, 2023-24ರ ಸಂಗ್ರಹಣೆ ಹಣ ರೂ. 1,63,505 ಕೋಟಿ ರೂಪಾಯಿಗಳು ಹಾಗೆಯೇ 2024-25ರ ಗುರಿ ರೂ. 1,89,893 ಕೋಟಿ ಮತ್ತು 2024-25ರ ಸಂಗ್ರಹಣೆಯ ರೂ. 1,14,715 ಕೋಟಿ ಎಂಬುದು ಇದೆ. ನನಗೆ ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಪುನರುಚ್ಚರಿಸಿದ್ದರು. ಬಜೆಟ್ ಗಾತ್ರ 3,73,000 ಕೋಟಿ ರೂಪಾಯಿಗಳು. ನಮ್ಮ ತೆರಿಗೆ ಸಂಗ್ರಹ 1,63,000 ಕೋಟಿ ರೂಪಾಯಿಗಳು. ಅಂದರೆ ಬಜೆಟ್‌ನ ಗಾತ್ರ ತೆರಿಗೆ ಸಂಗ್ರಹಕ್ಕಿಂತ ಎರಡು ಪಟ್ಟಿಗಿಂತ ಜಾಸ್ತಿ ಇದೆ. ಇನ್ನೊಂದು ಗ್ಯಾರಂಟಿ ಯೋಜನೆಗಳಿಗಾಗಿ ತಿಂಗಳಿಗೆ ಎಷ್ಟು ಹಣ ಖರ್ಚಾಗುತ್ತಿದೆ ಎಂದು ಕೇಳಿದ್ದೆ. ಪ್ರತಿ ತಿಂಗಳು 4,334 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಪ್ರತಿ ತಿಂಗಳು ಹಣ ಹಾಕುತ್ತಿದ್ದರಾ. ತಿಂಗಳು, ತಿಂಗಳು ಹಣ ಏಕೆ ಹಾಕುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಒಟ್ಟು ಗ್ಯಾರಂಟಿ ಯೋಜನೆಯಲ್ಲಿ ಖರ್ಚಾಗಿರುವ ವಿವರವನ್ನು ಕೊಟ್ಟಿದ್ದಾರೆ. ನಾನು ಅದನ್ನು ನೋಡುವುದಕ್ಕೆ ಹೋಗುವುದಿಲ್ಲ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳನ್ನು ರಚನೆ ಮಾಡಲಾಗಿದೆ ಎಂಬ ಬಗ್ಗೆ ವಿವರವನ್ನು ಕೊಟ್ಟಿದ್ದಾರೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕಾರ್ಯವೇನು, ಅವರು ಯಾವ ಕಾರ್ಯ ಮಾಡುತ್ತಾರೆ, ಗಂಜಿ ಕೇಂದ್ರನಾ ಅಥವಾ ಅವರಿಗೆ ನಿರ್ದಿಷ್ಟವಾಗಿರುವಂತಹ ಕಾರ್ಯವಿದೆಯೇ? ಏಕೆಂದರೆ, ನಾವು ಇಷ್ಟೊಂದು government machinery ಗಳನ್ನು ಇಟ್ಟುಕೊಂಡರೂ ನಂತರವೂ ನಮ್ಮ ಸರ್ಕಾರಿ ಅಧಿಕಾರಿ ವರ್ಗದವದ ಮೇಲೆ ನಂಬಿಕೆಯೇ ಇಲ್ಲ ಈ ಸಮಿತಿಯನ್ನು ರಚನೆ ಮಾಡಿದ್ದೇವೆಯೇ?

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಉಳಿದಿರುವ ಅಂಕಿ-ಸಂಖ್ಯೆಗಳನ್ನು ಕೊಟ್ಟಿರುವ ಬಗ್ಗೆ ಮಾನ್ಯ ಸದಸ್ಯರು ಒಪ್ಪಿಕೊಂಡಿದ್ದಾರೆ. ಮಾನ್ಯ ಸದಸ್ಯರು ಗ್ಯಾರಂಟಿ ಯೋಜನೆಗಳ ಸಮಿತಿಗಳ ಬಗ್ಗೆ ಕೇಳಿದ್ದಾರೆ. ಸಮಾಜದ welfare ಗಾಗಿ ಮಾಡುವ ಸಂದರ್ಭದಲ್ಲಿ ಈ ವರ್ಷದಲ್ಲಿ ಸುಮಾರು 52,009 ಕೋಟಿ ರೂಪಾಯಿಗಳನ್ನು ನಿಗದಿ ಪಡಿಸಿದ್ದೇವೆ. ಇಂತಹ ಜನಪರವಾದ ಕಾರ್ಯಕ್ರಮಕ್ಕೆ ಅದು ಜನರಿಗೆ ಸರಿಯಾದ ರೀತಿಯಲ್ಲಿ ಮುಟ್ಟಬೇಕೆಂದರೆ, ಸಮಿತಿಗಳನ್ನು ಮಾಡಬೇಕು ಎನ್ನುವ ಉದ್ದೇಶವನ್ನಿಟ್ಟುಕೊಂಡು ಮಾಡಿದ್ದೇವೆ. ಅಧಿಕಾರಿಗಳು ಸಂಬಂಧವಿಲ್ಲ ಎಂದು ಹೇಳಿ, ಅಧಿಕಾರಿಗಳ ಮೇಲೆ ನಂಬಿಕೆ ಇದೆ. ಅಧಿಕಾರಿಗಳಾದ E.O. (Executive Officer) ಮತ್ತು C.E.O. (Chief Executive Officer) ಗಳು ಅದಕ್ಕೆ ಕಾರ್ಯದರ್ಶಿಯಾಗಿ ಜವಾಬ್ದಾರಿಯನ್ನು ತಾಲ್ಲೂಕು ಮಟ್ಟದಲ್ಲಿ

ತೆಗೆದುಕೊಂಡಿರುತ್ತಾರೆ. ಬಿ.ಬಿ.ಎಂ.ಪಿ. ಮಟ್ಟದಲ್ಲಿ ಅಲ್ಲಿರುವ ಅಧಿಕಾರಿಗಳು ಅದಕ್ಕೆ ಕಾರ್ಯದರ್ಶಿಯಾಗಿರುತ್ತಾರೆ. ಹಾಗಾಗಿ ಪರಿಶೀಲನೆ ಮಾಡುವಂತಹದ್ದು. 52,000 ಕೋಟಿ ರೂಪಾಯಿಗಳು ಯಾವ ರೀತಿ ಜನರಿಗೆ ಸರಿಯಾದ ರೀತಿಯಲ್ಲಿ ಮುಟ್ಟುತ್ತಿದೆ. ಅದರಲ್ಲಿರುವಂತಹ ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಈ ಕಮಿಟಿಯನ್ನು ಮಾಡಿರುವಂತಹದ್ದು. ಅದರಿಂದ ಪ್ರತಿ ತಿಂಗಳು ಕಮಿಟಿ ಮೀಟಿಂಗ್ ಆಗುತ್ತಿದೆ. ಜನರಿಗೆ ಅದರಲ್ಲಿ ಏನಾದರೂ ತೊಂದರೆಯಾದರೆ, ಅದನ್ನು ನಿವಾರಣೆ ಮಾಡುವುದಕ್ಕೆ ಈ ಕಮಿಟಿಗಳು ಪ್ರಯೋಜನಕರವಾಗಲಿ ಎಂದು ಸರ್ಕಾರ ಬರೊಬ್ಬರಿಯಾಗಿರುವಂತಹ ಈ ಕಾರ್ಯಕ್ರಮವನ್ನು ನೂರಕ್ಕೆ ನೂರರಷ್ಟು ಜಾರಿಗೊಳಿಸಬೇಕೆಂಬ ಉದ್ದೇಶದಿಂದ ಮಾಡಿರುವಂತಹದ್ದು.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರ ಈ ಒಂದೂವರೆ ವರ್ಷದಲ್ಲಿ ವಿವಿಧ ಮೂಲಗಳಿಂದ ಪಡೆದಿರುವಂತಹ ಸಾಲ ಎಷ್ಟು? ಅದಕ್ಕೆ ಅಸಲು ಮತ್ತು ಬಡ್ಡಿ ಎಷ್ಟು ಕಟ್ಟುತ್ತಿದ್ದೀರಿ ಎಂಬ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ. ಅವರು ನೀಡಿರುವ ಉತ್ತರದಲ್ಲಿರುವಂತೆ, ಈ ಸರ್ಕಾರ ಬಂದ ಮೇಲೆ ಅಂದರೆ ಎರಡನೇ ಬಾರಿ ಶ್ರೀ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಮೇಲೆ 90,280 ಕೋಟಿ ರೂಪಾಯಿಗಳು ಆಂತರಿಕ ಮತ್ತು ಬಾಹ್ಯ ಮೂಲಗಳಿಂದ ಸಾಲ ಮಾಡಿದ್ದಾರೆ. ಇದಕ್ಕೆ ಒಟ್ಟು ಬಡ್ಡಿ ಸೇರಿ 1,24,164 ಕೋಟಿ ರೂಪಾಯಿಗಳನ್ನು ಕಟ್ಟುತ್ತಿದ್ದಾರೆ. ಈ ರೀತಿ ಸಾಲದ ಪ್ರಮಾಣ ಏರಿಕೆಯಾದರೆ, ನಮ್ಮ ರಾಜ್ಯ ಮುಂದೊಂದು ದಿನ ಸಾಲದ ಸುಳಿಗೆ ಸಿಲುಕುವುದಿಲ್ಲವೇ? ಈ ಸಾಲವನ್ನು ತೀರಿಸುವುದಕ್ಕೆ ಸಂಪನ್ಮೂಲ ಕ್ರೋಢಿಕರಣಕ್ಕಾಗಿ ಈಗ ಬೆಲೆ ಏರಿಕೆ ಮಾಡಿದರು. ತೆರಿಗೆ ಹೆಚ್ಚಳ ಮಾಡಿದರು. ಇಷ್ಟೆಲ್ಲಾ ಮಾಡಿದರೂ ಕೂಡ infrastructure ಗೆ ಎಷ್ಟು ವೆಚ್ಚ ಮಾಡಿದ್ದಾರೆ? ಮತ್ತು ಈ ಸಾಲ ತೀರಿಸುವುದಕ್ಕೆ ಪರ್ಯಾಯ ಮಾರ್ಗ ಏನಿದೆ? ಇದುವರೆವಿಗೂ ನಮ್ಮ ರಾಜ್ಯದ ಮೇಲೆ ಇರುವಂತಹ ಒಟ್ಟು ಸಾಲ ಎಷ್ಟಾಗಿದೆ? ಹೊಸದಾಗಿ ಮಾಡಿರುವ ಸಾಲವನ್ನು ಕೊಟ್ಟಿದ್ದಾರೆ. ಇದರ ಒಟ್ಟು ಸಾಲ ಎಷ್ಟು?

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕಳೆದ ಎರಡು ವರ್ಷಗಳ ರಾಜ್ಯ ಸರ್ಕಾರ ಆಂತರಿಕ ಮತ್ತು ಬಾಹ್ಯ ಸಾಲದ ಬಗ್ಗೆ ಕೇಳಿದ್ದಾರೆ. ಅದರ ಬಗ್ಗೆ ವಿವರವನ್ನು ಕೊಟ್ಟಿದ್ದೇವೆ. ಈಗ ಸಾಲದ ಮೇಲೆ ಏನು ಬಡ್ಡಿ ಕಟ್ಟುತ್ತಿದ್ದೇವೆ. ಅದು ಈಗ ಮಾಡಿರುವಂತಹ ಸಾಲಕ್ಕೆ ಬಡ್ಡಿಯಲ್ಲ. ಹಿಂದಿನ ವರ್ಷಗಳಲ್ಲಿ ಬಂದಿರುವಂತಹ ಸಾಲಕ್ಕೆ ಬಡ್ಡಿ ಕಟ್ಟುತ್ತಿದ್ದೇವೆ. ಕಳೆದ ವರ್ಷ ಮತ್ತು ಈ ವರ್ಷದ installment ಬಂದಿಲ್ಲ. ಅದರ ಹಿಂದಿನ ವರ್ಷ ತೆಗೆದುಕೊಂಡಿರುವ ಸಾಲಕ್ಕೆ ಬಡ್ಡಿ ಕಟ್ಟುತ್ತಿದ್ದೇವೆ. ಈ ಸಾಲ ತೆಗೆದುಕೊಳ್ಳುವಂತಹದ್ದು, ಕೇಂದ್ರ ಸರ್ಕಾರಗಳಲ್ಲಿ ಇರಬಹುದು ಮತ್ತು ರಾಜ್ಯ ಸರ್ಕಾರಗಳಲ್ಲಿ ಇರಬಹುದು. ಪ್ರತಿ ವರ್ಷ ಇದು ಆಗುತ್ತಿದೆ. ನಮ್ಮ ರಾಜ್ಯದಲ್ಲಿ ನಾವು ನಮ್ಮ limit ನಲ್ಲಿ ಇದ್ದೇವೆ. Reserve Bank of India ದ್ದು conditions ಏನಿರುತ್ತದೆಯೋ, ಆ conditions ನ limit ನಲ್ಲಿಯೇ ಇವತ್ತು ಸಹ ಇದ್ದೇವೆ. ಹಾಗಾಗಿ ಯಾವುದೇ ಅತಿರೇಕವಾಗಿ ರಾಜ್ಯ ಸರ್ಕಾರ ಸಾಲ ಮಾಡಿಲ್ಲ. ಪ್ರತಿ ರಾಜ್ಯಗಳು ರಾಜ್ಯ, ದೇಶದಲ್ಲಿರುವಂತಹ ಕೇಂದ್ರ ಮತ್ತು

ರಾಜ್ಯ ಸರ್ಕಾರಗಳು ಯಾವ ರೀತಿ ಆಗಿರುತ್ತವೆಯೋ, ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಕರ್ನಾಟಕದಲ್ಲಿ within the limit ನಲ್ಲಿ ನಾವು ಸಾಲ ಮಾಡಿರುವಂತಹದ್ದು.

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ಸಾಲ ಮಾಡಿದರೂ ಕೂಡ ವಿವಿಧ ಯೋಜನೆಗಳಿಗೆ ಕೊಡಬೇಕಾಗಿರುವಂತಹ ಹಳೆಯ ಬಿಲ್‌ಗಳ ಬಾಕಿ, ಇದೆಲ್ಲವೂ ಸೇರಿದರೆ ಲಕ್ಷಾಂತರ ಕೋಟಿ ರೂಪಾಯಿಗಳಾಗುತ್ತದೆ. ಇಷ್ಟೆಲ್ಲಾ ಸಾಲ ಮಾಡಿದರೂ ಕೂಡ 90,000 ಕೋಟಿ ರೂಪಾಯಿಗಳಷ್ಟು ಹೊಸ ಸಾಲ ಮಾಡಿದ್ದೀರಿ. ಹೊಸ ಸಾಲ ಮಾಡಿದ ನಂತರ ಹಳೆ ಬಿಲ್‌ನ್ನು ಕೂಡ ಕೊಟ್ಟಿಲ್ಲ. ಹಳೆ ಯೋಜನೆಗಳಿಗೂ ಹಣವನ್ನು ಬಿಡುಗಡೆ ಮಾಡಿಲ್ಲ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸದಸ್ಯರೇ, ತಾವು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ. ಈಗ ತಮಗೆ ಇನ್ನೂ ಉತ್ತರ ಬೇಕೆಂದರೆ, ಮತ್ತೆ ಕೊಡುತ್ತೇನೆ.

**ಶ್ರೀ ಸಿ.ಟಿ. ರವಿ:–** ಈಗ ಅದಕ್ಕೆ ನಾನು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸದಸ್ಯರೇ, ಒಂದು ನಿಮಿಷ. ಮೂರು ಲಕ್ಷ...

**ಶ್ರೀ ಸಿ.ಟಿ. ರವಿ:–** ಮಾನ್ಯ ಸಭಾಪತಿಯವರೇ, ನಾನು ಕೇಳುವ ಪ್ರಶ್ನೆಗೆ ಒಟ್ಟಿಗೆ ಉತ್ತರವನ್ನು ಸೇರಿಸಿ ತಾವು ಹೇಳಿಬಿಡಿ. ಇಷ್ಟೊಂದು ಸಾಲ ಮಾಡಿದ ಮೇಲೆ ಹಳೆ ಬಾಕಿ ಕೊಟ್ಟಿದ್ದೀರಾ, ಕೊಟ್ಟಿಲ್ಲ. ನೀವೇ ಘೋಷಣೆ ಮಾಡಿದ ಯೋಜನೆಗಳಿಗೆ ಹಣ ಕೊಟ್ಟಿದ್ದೀರಾ, ಇಲ್ಲ. ವಿವಿಧ ನಿಗಮಗಳು ಅವರಿಗೆ ಕೊಡಬೇಕಾದಂತಹ scheme ಏನು ಕೊಡುತ್ತಿದ್ದೀರಿ, ಅದನ್ನು ಕಡಿತಗೊಳಿಸಿದ್ದೀರಿ. ಅದೆಲ್ಲವನ್ನೂ ಕಡಿತಗೊಳಿಸಿದ ನಂತರವೂ ಕೂಡ ಸಾಲ ಹೆಚ್ಚಾಗುತ್ತಿದೆ. ಇದರ ಮರ್ಮವೇನು, ಸಾಲದ ಹಣ ಎಲ್ಲಿಗೆ ಹೋಗುತ್ತಿದೆ?

**ಶ್ರೀ ಎನ್.ಎಸ್. ಬೋಸರಾಜು:–** ಮಾನ್ಯ ಸಭಾಪತಿಯವರೇ, ನಾವು ವರ್ಷದ ಬಜೆಟ್‌ನಲ್ಲಿ annouce ಮಾಡಿದ್ದೇವೆ. ಅದೆಲ್ಲದ್ದಕ್ಕೂ ನಾವು ಸಮರ್ಥವಾಗಿ ದುಡ್ಡನ್ನು ಒದಗಿಸಿದ್ದೇವೆ. ಇದರ ಬಗ್ಗೆ ಹೇಳುತ್ತೇನೆ. ಒಟ್ಟು ಬಜೆಟ್ 3,71,000 ಕೋಟಿ ರೂಪಾಯಿಗಳಲ್ಲಿ ಮಾಡುತ್ತಿದ್ದೇವೆ. ಅದರಲ್ಲಿ, General Services ಗೆ Rs. 97,850 crores, Social Services ಗೆ Rs. 1,34,604 crores, Economic Services ಗೆ Rs. 1,07,122 crores, Loan Repayment ಗೆ Rs. 24,974 crores, ULB (Urban Local Bodies) devolution ಗೆ Rs. 6,834 crores ಗಳನ್ನು ಕೊಟ್ಟಿದ್ದೇವೆ. ಒಟ್ಟು ಬಜೆಟ್ ಗಾತ್ರ 3,71,000 ಕೋಟಿ ರೂಪಾಯಿಗಳು. ಅದರಲ್ಲಿ, development expenditure, including expenditure on Social and Economic services ಗೆ Rs. 2,41,726 Crores ನಾವು ಬಜೆಟ್‌ನಲ್ಲಿ ಒದಗಿಸಿದ್ದೇವೆ. ಅದರ ಪ್ರಕಾರ ಖರ್ಚು ಮಾಡುತ್ತಿದ್ದೇವೆ.

**ಪ್ರಶ್ನೆ ಸಂಖ್ಯೆ: 594**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಹಾವೇರಿ ಜಿಲ್ಲೆಯ ಗುತ್ತಲದ ಹತ್ತಿರ ತುಂಗಭದ್ರಾ ನದಿಯ ತೀರದಲ್ಲಿ ಚೌಡದಾನಪುರದಲ್ಲಿ "ನಿಜಶರಣ ಅಂಬಿಗರ ಚೌಡಯ್ಯ" ಶರಣರ ಸಮಾಧಿಯ ಗದ್ದುಗೆ ಕುರಿತು ಪ್ರಶ್ನೆಯನ್ನು ಕೇಳಿದ್ದೆ. ಈ ಪ್ರಶ್ನೆ ಮತ್ತು ಈ ಪ್ರದೇಶದ ಸಂಪೂರ್ಣವಾದಂತಹ ಮಾಹಿತಿ ಮಾನ್ಯ ಸಚಿವರಿಗೆ ಇದೆ. ನಾನು ಇದಕ್ಕೆ ಹೆಚ್ಚಿನ ವಿವರಗಳನ್ನು ಕೊಡಬೇಕಾಗಿಲ್ಲ. ಇಲ್ಲಿ ಏನಾಗುತ್ತದೆ ಎಂದರೆ, ಸಚಿವರ ಲಿಖಿತ ಉತ್ತರದಲ್ಲಿ "ಅರಕ್ಷಿತ ಸ್ಮಾರಕ" ಎಂದು ಹೇಳಿದ್ದಾರೆ. ಅರಕ್ಷಿತ ಸ್ಮಾರಕ ಎಂದರೆ, ಅಲ್ಲಿ ತುಂಗಭದ್ರಾ ನದಿಯ ದಡದಲ್ಲಿರುವಂತಹ "ಅಂಬಿಗರ ಚೌಡಯ್ಯ"ನವರ ಸಮಾಧಿ ಅಥವಾ ಗದ್ದುಗೆಯಲ್ಲಿ ಇವತ್ತು ಅದು ಆ ಚೌಡದಾನಪುರ ಗ್ರಾಮದ ಜನರು ಬಟ್ಟೆ ಹೊಗೆದು ಆ ಗದ್ದುಗೆಯ ಮೇಲೆ ಬಟ್ಟೆ ಒಣಗುವುದಕ್ಕೆ ಹಾಕುತ್ತಾರೆ. ಧನಕರುಗಳು ...

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇದರ ಬಗ್ಗೆ ಮಾನ್ಯ ಸಚಿವರಿಗೂ ಮತ್ತು ನಮಗೂ ಕೂಡ ಗೊತ್ತಿದೆ. ಮಾನ್ಯ ಸಚಿವರೇ ಮಾನ್ಯ ಸದಸ್ಯರು ಹೇಳಿರುವುದು ಬಹಳ ಸರಿಯಾಗಿದೆ. ನಾನು ಕೂಡ ನೋಡಿದ್ದೇನೆ.

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ನನಗೂ ಮತ್ತು ನಿಮಗೂ ಪರಿಸ್ಥಿತಿ ಗೊತ್ತಿದೆ. ತಮಗೆ ಇರುವ ಮಾಹಿತಿ ಬಹಳ ಹಳೆಯದಿರಬೇಕು. ನಾನು ತಮಗೆ "ಅಂಬಿಗರ ಚೌಡಯ್ಯನವರ ಗದ್ದುಗೆ"ಯ ಫೋಟೋವನ್ನು ಕಳುಹಿಸಿಕೊಡುತ್ತೇನೆ.

(ಮುಂದು)

(1010) 19.12.2024, 11.50 TCH-KS (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ.ಪಾಟೀಲ್ (ಮುಂದು):**

ವಿಶೇಷವಾಗಿ ನಿಮ್ಮ ಸಮುದಾಯದವರಿಗೆ ಹಾಗೂ ಇತರರಿಗೂ ಸಹಿತ ಸಮಾಧಾನ ತಂದುಕೊಟ್ಟಿಲ್ಲ. ಆದರೆ, ಇದನ್ನು ವಿಸ್ತಾರ ಮಾಡಬೇಕು ಎಂದು ಅವರು ಹೇಳುತ್ತಾರೆ. ಅದನ್ನು ವಿಸ್ತಾರ ಮಾಡುವುದಕ್ಕೆ ಅಲ್ಲಿ ಚೌದಾನಪುರ ದೇವಸ್ಥಾನ ಏನಿದೆ, ಅದು A.S.I. (Archaeological Survey of India) controlled ಜಾಗವಿದೆ. ಆದಾಗ್ಯೂ, ಇದನ್ನು ನಾವು ಹೇಗೆ ವಿಸ್ತಾರ ಮಾಡಬಹುದು; ಈ ವ್ಯಕ್ತಿಯ ಘನತೆ, ಗೌರವ, ವೈಭವ ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಇದನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎನ್ನುವುದರ ಬಗ್ಗೆ ಪರಿಶೀಲಿಸಲು ನಾನೇ ಸ್ವತಃ ಹೋಗುತ್ತೇನೆ. ಯಾವುದಾದರೂ ಸಂದರ್ಭ ಬಂದು ನಾನು ಹಾವೇರಿಗೆ ಹೋಗಿದ್ದಾಗ ಮಾನ್ಯ ಸಭಾಪತಿಯವರನ್ನೂ ಕೂಡ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಸಾಧ್ಯವಾದರೆ ಮಾನ್ಯ ಸದಸ್ಯರು ಕೂಡ ಬರಬಹುದು. ಅಲ್ಲಿ ಏನು

ಮಾಡುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡುವಂತಹ ಪ್ರಯತ್ನವನ್ನು ನಮ್ಮ ಪ್ರವಾಸೋದ್ಯಮ ಇಲಾಖೆಯಿಂದ ಮಾಡುತ್ತೇವೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಎರಡು ವಿಷಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಸಭಾಪತಿಯವರು:-** ಡಾ.ತಳವಾರ್ ಸಾಬಣ್ಣನವರೇ, ಮಾನ್ಯ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್‌ರವರು ಹೇಳುವುದು ಸರಿ ಇದೆ. ಅದೆಲ್ಲಾ clear ಮಾಡಬಹುದು.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಆದರೆ ಎರಡು ವಿಷಯಗಳನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರಲು ಇಷ್ಟಪಡುತ್ತೇನೆ.

**ಸಭಾಪತಿಯವರು:-** ಡಾ.ತಳವಾರ್ ಸಾಬಣ್ಣನವರೇ, ಮಾನ್ಯ ಸಚಿವರು ಹೇಳಿದರಲ್ಲ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಆ ಪ್ರದೇಶವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆಂದು ಹೇಳಿದರು. ಅದು ಸರಿ ಇದೆ. ಅಲ್ಲೊಂದು ಗುಡಿ ಇದೆ. ಆದರೆ ಚೌದಾನಪುರ ದೇವಸ್ಥಾನ ಆ ಗುಡಿಯಿಂದ ಸುಮಾರು 15 ಮೀಟರ್ ದೂರ ಇರುವುದರಿಂದ ಅದು ರಾಜ್ಯ ಸರ್ಕಾರಕ್ಕೆ ಸಂಬಂಧಪಡುತ್ತದೆ. ಹಾಗಾಗಿ ನಾನು ಕೇಳುವುದು ಇಷ್ಟೇ. ಅಲ್ಲಿ ಕೂಡಲ ಸಂಗಮ ಅಥವಾ ನಮ್ಮ ಎಂ.ಕೆ. ಹೋಬಳಿ ಪಕ್ಕದಲ್ಲಿರತಕ್ಕಂಥ ನಾಗಲಾಂಬಿಕೆ ದೇವಿಯ ಗದ್ದುಗೆಯನ್ನು ರಕ್ಷಣೆ ಮಾಡಿ ಆ ರೂಪದಲ್ಲಿ ಏನು ಕಟ್ಟಿದ್ದಾರಲ್ಲಾ, ಆ ರೂಪದಲ್ಲೇ ನಿಜಶರಣ ಅಂಬಿಗರ ಚೌಡಯ್ಯನವರ ಗದ್ದುಗೆಗೂ ಕೂಡ ರಕ್ಷಣೆ ಕೊಡಬೇಕೆಂದು ಪ್ರಶ್ನೆ ಕೇಳಿದ್ದೆನು. ಕೊನೆಯದಾಗಿ, ಅವರ ಗದ್ದುಗೆಯಿಂದ ಅಂಬಿಗರ ಚೌಡಯ್ಯನವರ ಮಠ ಸುಮಾರು ಒಂದು ಕಿ.ಮೀ ದೂರ ಇದೆ. ಮಾನ್ಯ ಸಚಿವರು ರೋಪ್‌ವೇ ಬಗ್ಗೆ ಹೇಳುತ್ತಿದ್ದೀರಿ. ನಾನು ಈ ಸಂದರ್ಭ ಬಂದಾಗ ಮಾನ್ಯ ಸಚಿವರನ್ನು ಕೇಳೋಣ ಅಂದುಕೊಂಡಿದ್ದೆನು. ಅಂಬಿಗರ ಚೌಡಯ್ಯನವರ ಗದ್ದುಗೆಯಿಂದ ಅಂಬಿಗರ ಚೌಡಯ್ಯನವರ ಮಠದವರೆಗೆ ಒಂದು ರೋಪ್‌ವೇ ಹಾಕಿದರೆ ತಾವು ಮಾಡಿರತಕ್ಕಂಥ ಪುಣ್ಯದ ಕೆಲಸಕ್ಕೆ ಇಡೀ ಕೋಲಿ ಕಬ್ಬಲಿಗ ಬೆಸ್ತ ಸಮುದಾಯ ನೆನಪಿಸಿಕೊಳ್ಳುತ್ತದೆ ಎಂದು ನಾನು ಮಾನ್ಯ ಸಭಾಪತಿಯವರ ಮುಖಾಂತರ ಮಾನ್ಯ ಪ್ರವಾಸೋದ್ಯಮ ಸಚಿವರಿಗೆ ಮನವರಿಕೆ ಮಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಹೆಚ್.ಕೆ.ಪಾಟೀಲ್ ರವರೇ, ತಾವು ಒಮ್ಮೆ ಪರಿಶೀಲನೆ ಮಾಡಿ ನೋಡಿ.

**ಶ್ರೀ ಹೆಚ್.ಕೆ.ಪಾಟೀಲ್:-** ಅಲ್ಲಿ ನೋಡಿ ರೋಪ್‌ವೇ ಹಾಕಬೇಕಾಗುತ್ತದೆ. ಅಲ್ಲಿ ಆ ರೀತಿಯಾಗಿ ರೋಪ್‌ವೇ ಹಾಕುವುದಕ್ಕೆ ಸಾಧ್ಯವಿಲ್ಲ.

**ಸಭಾಪತಿಯವರು:-** ಇಲ್ಲ.

**ಶ್ರೀ ಹೆಚ್.ಕೆ.ಪಾಟೀಲ್:-** ಎರಡನೆಯದಾಗಿ, ಅಲ್ಲಿರತಕ್ಕಂಥ ಜಾಗವನ್ನು ಗಮನಿಸಿಕೊಂಡು ಇದಕ್ಕೆ ಹೇಗೆ ಸೂಕ್ತವಾದ ಅಭಿವೃದ್ಧಿಯನ್ನು ನಿಜ ಶರಣ ಶ್ರೀ ಚೌಡಯ್ಯನವರ ಗದ್ದುಗೆಯ ಜೀರ್ಣೋದ್ಧಾರ ಮಾಡುವುದು ಇದೆ,

ಮಾಡುತ್ತೇವೆ. ನಾನು ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಕೂಡಲ ಸಂಗಮದ ಬಗ್ಗೆ ಅವರು ಹೇಳಿದರು. ಅಲ್ಲಿ ಜಾಗ ಎಷ್ಟು ಬೇಕು; ಏಕೆಂದರೆ, ಅಲ್ಲಿ ಈಗ ಅದು 15 ಅಡಿಯೊಳಗೆ ಇದೆ ಎನ್ನುವುದು ಒಂದು ವಿಚಾರವಾದರೆ ಇನ್ನು 30 ಅಡಿ ಮುಂದಕ್ಕೆ ಹೋದರೆ ಅಲ್ಲಿ ನದಿ ಇದೆ. ಆ ಕಾರಣಕ್ಕಾಗಿ ಅವುಗಳನ್ನೆಲ್ಲಾ ನೋಡಿಕೊಂಡು ಏನು ಸೂಕ್ತವಾಗಿರತಕ್ಕಂಥ ಗೌರವಯುತವಾಗಿರತಕ್ಕಂಥದ್ದನ್ನು ಅಭಿವೃದ್ಧಿ ಮಾಡಬೇಕೋ ಅದನ್ನು ನಿಜಶರಣ ಅಂಬಿಗರ ಚೌಡಯ್ಯನವರ ಗದ್ದುಗೆಯನ್ನು ಮಾಡುತ್ತೇವೆಂದು ಹೇಳುತ್ತೇವೆ.

**ಡಾ: ತಳವಾರ್ ಸಾಬಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ನಿಜಶರಣ ಅಂಬಿಗರ ಚೌಡಯ್ಯನವರ ಗದ್ದುಗೆ ರಕ್ಷಣೆಗೆ ಏನು ಮಾಡಬೇಕೋ ಮಾಡಿ.

**ಪ್ರಶ್ನೆ ಸಂಖ್ಯೆ 661**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ಕಳೆದ 3 ವರ್ಷಗಳಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದೇ ಉತ್ತರ ಬರುತ್ತಿದೆ. ರಾಜ್ಯದಲ್ಲಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006ರ ಮತ್ತು ನಿಯಮಗಳು 2008ರ ಅಡಿಯಲ್ಲಿ ರಾಜ್ಯದ ಬುಡಕಟ್ಟುಗಳಿಗೆ ಅರಣ್ಯ ಹಕ್ಕುಪತ್ರ ನೀಡುವ ಪ್ರಕ್ರಿಯೆಯು ನಿಧಾನಗತಿಯಲ್ಲಿ ಸಾಗಲು ಕಾರಣಗಳೇನು ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಸರ್ಕಾರ 3 ಕಾರಣಗಳನ್ನು ಕೊಟ್ಟಿದೆ. ಮೊದಲನೆಯದಾಗಿ ಅರ್ಜಿದಾರರು ಅಗತ್ಯ ದಾಖಲೆಗಳನ್ನು ಕೊಡುತ್ತಿಲ್ಲ ಎಂದು ಹೇಳಿದ್ದಾರೆ. ಎರಡನೆಯ ಬಾರಿಗೆ ಕೇಳಿದರೆ ಅವರು ಅಗತ್ಯ ದಾಖಲೆಗಳನ್ನು ಕೊಡುವ ಸಾಧ್ಯತೆ ಇದೆ. ಎರಡನೆಯದಾಗಿ, ರಾಷ್ಟ್ರೀಯ ಅಭಯಾರಣ್ಯ ಪ್ರದೇಶಗಳಲ್ಲಿರತಕ್ಕಂಥವರು ಈ ನಿಯಮ ಬರುವುದಕ್ಕಿಂತ ಮೊದಲೇ ಅಲ್ಲಿಂದ ಜಾಗ ಖಾಲಿ ಮಾಡಿದ್ದಾರೆಯೇ ಎನ್ನುವುದು. ರಾಷ್ಟ್ರೀಯ ಅಭಯಾರಣ್ಯ ಇರಬಹುದು, ಬೇರೆ ಬೇರೆ ರಾಷ್ಟ್ರೀಯ ಯೋಜನೆಗಳನ್ನು ಬಿಟ್ಟು, ಹೊರಗಡೆ ಇರತಕ್ಕಂಥ ಇನ್ನೂ ಅನೇಕ ಜನರಿಗೆ ಈ ಸಮಸ್ಯೆ ಇದೆ ಎಂದು ನಾನು ಉಲ್ಲೇಖ ಮಾಡುತ್ತೇನೆ. ಹಾಗೆಯೇ, ಪ್ರತಿ ಜಿಲ್ಲೆಯಲ್ಲೂ ಕೂಡ SDLC (Sub-Divisional Level Committee) ಮತ್ತು DLC (District Level Committee) ಗಳಲ್ಲಿ ತಾಲ್ಲೂಕ್ ಪಂಚಾಯತ್ ಸದಸ್ಯರುಗಳು ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರುಗಳು ಇಲ್ಲದೇ ಇರುವುದರಿಂದ quorum ಆಗುವುದಿಲ್ಲ ಎನ್ನುವ ಕಾರಣವನ್ನು ಕೊಟ್ಟಿದ್ದಾರೆ. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿಕೊಳ್ಳುವುದೇನೆಂದರೆ, SDLC and DLC ಸಮಿತಿಗಳಿಗೆ quorum ಮಾಡುವುದಾದರೆ, ಅಲ್ಲಿ ಯಾರಾದರೂ Secretary ಅಥವಾ ಇನ್ನಾರಾದರೂ ಅಧಿಕಾರಿಗಳನ್ನು ನೇಮಿಸಿ Committee ಯನ್ನು ಪೂರ್ತಿ ಮಾಡಿ, ಇದನ್ನು ಮಾಡಬೇಕು. ಏಕೆಂದರೆ, ಅದು ಕಳೆದ 18 ವರ್ಷಗಳಿಂದ ಒಂದೇ ಸ್ಥಿತಿಯಲ್ಲಿದೆ. ಅದಕ್ಕಾಗಿ ನಾನು ಈ ಸಲಹೆಯನ್ನು ಕೊಡುತ್ತಿದ್ದೇನೆ. ಉತ್ತರದ ಜೊತೆಗೆ ಒಂದು ಅನುಬಂಧವನ್ನು ಕೊಟ್ಟಿದ್ದಾರೆ. ಆ ಅನುಬಂಧ-1ನ್ನು ನೋಡಿದಾಗ, ನಾವು 2 ಕನ್ನಡಕಗಳನ್ನು ಹಾಕಿಕೊಂಡು ನೋಡಿದರೂ ಕೂಡ ಕಾಣುತ್ತಿಲ್ಲ. ಅಷ್ಟು ಸಣ್ಣದಾಗಿ ಅದನ್ನು ಮುದ್ರಣ ಮಾಡಿದ್ದಾರೆ. ಅದು ಯಾರು ಎಂದು ಅಧಿಕಾರಿಗಳು ಗಮನಿಸಬೇಕು. ಅದನ್ನು ಓದುವುದಕ್ಕೂ ಕೂಡ ಆಗುವುದಿಲ್ಲ. ಅಷ್ಟು ಸಣ್ಣ ಅಕ್ಷರಗಳಲ್ಲಿ ಪ್ರಿಂಟ್ ಹಾಕಿ ಕೊಟ್ಟಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಉತ್ತರ ಹೇಳಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಯವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ, ಇದರಲ್ಲಿ ಇರುವಂತಹ ತೊಂದರೆಗಳನ್ನು ನಿವಾರಣೆ

ಮಾಡಬೇಕೆಂದು ಹೇಳಿದ್ದಾರೆ. ಅತಿಮುಖ್ಯವಾಗಿ ಆ 3 ಕಮಿಟಿಗಳಲ್ಲಿ ಒಂದಾಗಿರತಕ್ಕಂಥ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರುಗಳು existence ನಲ್ಲಿ ಇಲ್ಲದ ಕಾರಣ ಕಳೆದ 3 ವರ್ಷಗಳಿಂದ delay ಆಗುತ್ತಾ ಬಂದಿದೆ. ಈಗಾಗಲೇ ಅವರು ಹೇಳಿದಂತೆ, ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕಳೆದ ತಿಂಗಳು ದಿನಾಂಕ 26.11.2024ರಂದು ಒಂದು ಸಭೆ ಮಾಡಿ, ಸಂಬಂಧಪಟ್ಟ ಅಧಿಕಾರಿಗಳಿಗೆ clear ಆಗಿ ನಿರ್ದೇಶನವನ್ನು ಕೊಟ್ಟಿದ್ದಾರೆ. ಅವರು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕ್ ಪಂಚಾಯಿತಿ ಸದಸ್ಯರ ಬಗ್ಗೆ ನೋಡುವುದು ಬೇಡ. ಶೀಘ್ರವಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಇದಕ್ಕೆ ನೇಮಕಾತಿ ಮಾಡಿ, ಅವರ ಜೊತೆಗೆ ತುರ್ತಾಗಿ screening ಮಾಡಿ, ಯಾವ ರೀತಿಯಾಗಿ ಅದನ್ನು ಪರಿಷ್ಕೃತ ಮಾಡಬೇಕೆಂದು ಹೇಳಿದ್ದಾರೆ. ಇದರ ಜೊತೆಗೆ ದಿನಾಂಕ 28.11.2024ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಕೂಡ ಒಂದು ಸಭೆಯನ್ನು ಮಾಡಿ, ಅವರು ಕೂಡ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥ ವಿಷಯವನ್ನು ಸಂಬಂಧಪಟ್ಟಂತಹ ಅಧಿಕಾರಿಗಳ ಗಮನಕ್ಕೆ ತಂದು ಅದನ್ನು ಆದಷ್ಟು ಬೇಗ ವಿಲೇವಾರಿ ಮಾಡುವುದಕ್ಕೆ ಈಗಾಗಲೇ ನಿರ್ಧಾರ ಕೈಗೊಂಡಿದ್ದಾರೆ. ಹಾಗೆಯೇ ಮಾನ್ಯ ಸದಸ್ಯರು ಅನುಬಂಧ-1ರ ಬಗ್ಗೆ ಏನೂ ಕಾಣಿಸದಂತೆ ಸಣ್ಣದಾಗಿ ಕೊಟ್ಟಿದ್ದಾರೆಂದು ಹೇಳಿದರು. ಅದನ್ನೂ ಕೂಡ ಸರಿಪಡಿಸಿ, ಮಾನ್ಯ ಸದಸ್ಯರಿಗೆ ಒಂದು copy ಯನ್ನು ಕಳುಹಿಸಿಕೊಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಅದನ್ನು ಸರಿಪಡಿಸಿ ಅವರಿಗೆ ಕಳುಹಿಸಿ.

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಸಭೆ ಮಾಡಿದ್ದಾರೆ, ಅದಕ್ಕೆ ನಾನು ಅವರಿಗೆ ನಮ್ಮ ರಾಜ್ಯದ ಸುಮಾರು 50 ಲಕ್ಷ ಬುಡಕಟ್ಟು ಜನಾಂಗದವರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸುಮಾರು 12 ಜಿಲ್ಲೆಗಳಲ್ಲಿರುವಂತಹ ಅತ್ಯಂತ ಕಾಡಿನ ಪ್ರದೇಶ ಇರುವಂತಹ ಬುಡಕಟ್ಟು ಸಮುದಾಯಕ್ಕೆ ಇದು ಅತ್ಯಂತ ದೊಡ್ಡ ಸಮಸ್ಯೆಯಾಗಿದೆ. ಅರಣ್ಯ ಹಕ್ಕು ಕಾಯ್ದೆಯಲ್ಲಿ ಸಿಗಬೇಕಾದಂತಹ ಹಕ್ಕುಪತ್ರ ಅವರಿಗೆ ಸಿಗಬೇಕು. ಹಾಗೆಯೇ ಸಿಕ್ಕಿದಂತಹ ಹಕ್ಕುಪತ್ರಗಳಲ್ಲಿ ಕಾಲಂ 11 ಮತ್ತು ಕಾಲಂ 9ರಲ್ಲಿ ಅವರ ಹೆಸರು ಬರದೇ ಇರುವುದರಿಂದ ಯಾವುದೇ ಸರ್ಕಾರದ ಸೌಲಭ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಹಾಗಾಗಿ, ಆ ಕಾರಣಕ್ಕಾಗಿ ಈ ಹಕ್ಕುಪತ್ರ ಕೊಡುವಂತಹ ಪ್ರಕ್ರಿಯೆಯು ವೇಗವಾಗಿ ಆಗಬೇಕು ಎನ್ನುವುದು ಒಂದು. ಕೊಟ್ಟಿರತಕ್ಕಂಥ ಹಕ್ಕುಪತ್ರಗಳು ವ್ಯವಸ್ಥಿತವಾಗಿ ಇರಬೇಕು ಎನ್ನುವಂಥದ್ದನ್ನು ಕೂಡ ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ವಿಶೇಷವಾಗಿ ಬೆಳಗಾವಿ, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಚಾಮರಾಜನಗರ, ಮೈಸೂರು, ಕೊಡಗು ಮತ್ತು ರಾಮನಗರ ಈ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಅತ್ಯಂತ ಹೆಚ್ಚು ಕಾಡಿನ ಪ್ರದೇಶ ಇದೆ. ಇವತ್ತಿನ ದಿವಸ ತುಂಬಾ ಸಮಸ್ಯೆಗಳಿಗೆ ನಮ್ಮ ಬುಡಕಟ್ಟು ಸಮುದಾಯ ಒಳಗಾಗಿದೆ. ಅವರು ಕಾಡಿನೊಳಗೆ ಬದುಕಬೇಕು. ಕಾಡಿನ ಕಿರುಕಾಡು ಉತ್ಪನ್ನಗಳನ್ನು ಸಂಗ್ರಹ ಮಾಡಿ ಬದುಕುವಂತಹ ಜೀವನದ ಎಲ್ಲಾ ಹಕ್ಕುಗಳನ್ನು ಇವತ್ತಿನ ದಿವಸ ಅರಣ್ಯ ಇಲಾಖೆ ಕಸಿದುಕೊಂಡಿದೆ. ಕೊನೆಪಕ್ಷ

ಹಕ್ಕುಪತ್ರದಲ್ಲಿ ನಮಗೆ ಜಮೀನಾದರೂ ಕೊಟ್ಟರೆ ನಾವು ಬದುಕುವುದಕ್ಕೆ ಒಂದು ಆಧಾರವಾಗುತ್ತದೆ ಎನ್ನತಕ್ಕಂಥ ಮಾತನ್ನು ಮತ್ತೇ ಉಲ್ಲೇಖ ಮಾಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಪುನಃ ವಿನಂತಿ ಮಾಡಿಕೊಳ್ಳುತ್ತೇನೆ. ಆದಷ್ಟು ಬೇಗನೆ ಇದನ್ನು ಮಾಡಬೇಕು. ಆ ಆಕ್ಟ್ ಬಂದು ಸುಮಾರು 18 ವರ್ಷಗಳಾಗಿದೆ. ಶೇ.25 ರಿಂದ ಶೇ.30 ರಷ್ಟೇ ಆಗಿದೆ. ಆದ್ದರಿಂದ ನಾನು ಪುನಃ ವಿನಂತಿ ಮಾಡುವುದೇನೆಂದರೆ, ಆದಷ್ಟು ಬೇಗ ಇದು ಆಗಬೇಕು ಎನ್ನತಕ್ಕಂಥ ಮಾತನ್ನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ ಯವರೇ, ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರತಕ್ಕಂಥ ರೀತಿಯಲ್ಲಿ, ಏನು ಕೊಟ್ಟಿರತಕ್ಕಂಥ ಹಕ್ಕುಪತ್ರ ಮತ್ತು ಏನೇನು ಅನಾನುಕೂಲತೆಗಳಿವೆಯೋ ಅದನ್ನು ಸರಿಪಡಿಸುತ್ತೇವೆ. ಮತ್ತೆ ಆದಷ್ಟು ಶೀಘ್ರವಾಗಿ ಅದನ್ನು ವಿಲೇವಾರಿ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ.

**ಸಭಾಪತಿಯವರು:-** ಅವರ case genuine ಇದೆ, ಮಾಡಿ.

**ಇ) ದಿನಾಂಕ 19.12.2024ರ ಚುಕ್ಕೆ ಗುರುತಿನ ಪ್ರಶ್ನೆಗೆ ಮೌಖಿಕವಾಗಿ ನೀಡಲಾದ ಉತ್ತರ (ಮುಂದುವರೆದುದು)**

**ಪ್ರಶ್ನೆ ಸಂಖ್ಯೆ. 1147**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರದಲ್ಲಿ 'ರಾಜ್ಯಾದ್ಯಂತ ಸರ್ಕಾರಿ ನೇಮಕಾತಿಯಲ್ಲಿ ರಾಜ್ಯಮಟ್ಟದ ಸ್ಥಳೀಯ ವೃಂದದಲ್ಲಿ ಶೇ.8ರಷ್ಟು ನೇರ ನೇಮಕಾತಿಯಲ್ಲಿ 9,695 ಹುದ್ದೆಗಳನ್ನು ಗುರುತಿಸಲಾಗಿದೆ. ಆ ಪೈಕಿ 5977 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಒಟ್ಟು 1,658 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದ್ದು ಇನ್ನೂ 2,035 ಹುದ್ದೆಗಳ ಭರ್ತಿ ಮಾಡಬೇಕಾಗಿದೆ' ಎಂದು ತಿಳಿಸಿದ್ದಾರೆ. 2013 ರಲ್ಲಿ ಅನುಚ್ಛೇದ 371 (ಜೆ) ಮೀಸಲಾತಿಯ ಅನುಷ್ಠಾನ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರ ಪ್ರಯತ್ನದಿಂದ ಅನುಷ್ಠಾನ ಕೈಗೊಳ್ಳಲಾಗಿದೆ. ಸುಮಾರು 3,719 ಹುದ್ದೆಗಳು ಖಾಲಿ ಇವೆ. ನಾನು specific ಆಗಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡದಿರಲು ಕಾರಣವೇನೆಂದು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನೇ ಕೊಟ್ಟಿಲ್ಲ. ಇನ್ನು ಯಾವಾಗ ಹುದ್ದೆಗಳನ್ನು ಭರ್ತಿ ಮಾಡುತ್ತೀರಿ ಎಂದು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು 2 ತಿಂಗಳ ಹಿಂದೆ ಅನಧಿಕೃತ ಟಿಪ್ಪಣಿ ಮೂಲಕ ಎಲ್ಲಾ ಇಲಾಖೆಗಳಿಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸೂಚನೆ ನೀಡಲಾಗಿದೆಯೆಂದು ತಿಳಿಸಿದ್ದಾರೆ. ಕೇವಲ ಸೂಚನೆಯನ್ನು ನೀಡುವುದರಿಂದ ಏನು ಪ್ರಯೋಜನ? ಅದಕ್ಕೆ ಒತ್ತು ಕೊಟ್ಟು ಶೀಘ್ರವಾಗಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ಅನುಚ್ಛೇದ 371 (ಜೆ) ಅಡಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಎಷ್ಟು ತಿಂಗಳಲ್ಲಿ ಭರ್ತಿ ಮಾಡುತ್ತೀರಾ ಎಂಬುದು ಮಾನ್ಯ ಸಚಿವರಿಗೆ ನನ್ನ ನೇರ ಪ್ರಶ್ನೆ.

(ಮುಂದು)

(1011)19.12.2024/12.00/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ. ಸುಧಾಕರ್ (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು):-** ಮಾನ್ಯ ಸಭಾಪತಿಯವರೇ, ಬಹಳ ಸ್ಪಷ್ಟವಾದ ಉತ್ತರವನ್ನು ಒದಗಿಸಿದ್ದೇನೆ. 9,695 ಖಾಲಿ ಇರುವ ಹುದ್ದೆಗಳಲ್ಲಿ ಸುಮಾರು 5,977 ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಇನ್ನೂ 2,035 ಹುದ್ದೆಗಳು ಬಾಕಿ ಇವೆ. ಈಗಾಗಲೇ 1,658 ಹುದ್ದೆಗಳು ವಿವಿಧ ಹಂತದಲ್ಲಿ ನೇಮಕಾತಿ ಪ್ರಕ್ರಿಯೆಯಲ್ಲಿದೆ. ಅವುಗಳು ಕೆ.ಪಿ.ಎಸ್.ಸಿ ಮತ್ತು ಕೆ.ಇ.ಎ. ನಲ್ಲಿ ಭರ್ತಿಗೆ ಚಾಲ್ತಿಯಲ್ಲಿದೆ. ಕಳೆದ 2-3 ತಿಂಗಳುಗಳ ಕೆಳಗೆ ಒಳಮೀಸಲಾತಿಗೆ ಸಂಬಂಧಿಸಿದಂತೆ ಚರ್ಚೆಯಾದ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಹುದ್ದೆಗಳನ್ನು ಭರ್ತಿ ಮಾಡದೇ ಒಳಮೀಸಲಾತಿ ಮುಗಿದ ನಂತರ ಮಾಡಬೇಕೆನ್ನುವ ತೀರ್ಮಾನ

ತೆಗೆದುಕೊಂಡಿರುವ ಹಿನ್ನೆಲೆಯಲ್ಲಿ 2,035 ಹುದ್ದೆಗಳನ್ನು ಒಳಮೀಸಲಾತಿ ಆದ ತಕ್ಷಣವೇ ಪ್ರಕ್ರಿಯೆ ಪ್ರಾರಂಭವಾಗುತ್ತದೆಂದು ಹೇಳಬಯಸುತ್ತೇನೆ.

**ಶ್ರೀ ಜಗದೇವ್ ಗುತ್ತೇದಾರ್:-** ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 371(ಜೆ) ಅಡಿಯಲ್ಲಿ ನೇಮಕಾತಿಯಾಗಿರುವ ನೌಕರರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಬಂದಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಹಾಗೂ ಸಚಿವ ಸಂಪುಟ ಉಪಸಮಿತಿಯಲ್ಲಿ ಸದರಿ ಅಂಶಗಳನ್ನು ಆದ್ಯತೆ ಮೇಲೆ ಚರ್ಚಿಸಿ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಿಗೆ ಉಚಿತ ಸೂಚನೆ ನೀಡುವುದರ ಮೂಲಕ ಪರಿಹರಿಸಲು ಕ್ರಮಕೈಗೊಳ್ಳಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಕೇವಲ ಸೂಚನೆಗಳನ್ನು ಕೊಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಕಾಯಿದೆ ಇದ್ದರೂ ಕೂಡ;

**ಸಭಾಪತಿಯವರು:-** ಮಾನ್ಯ ಜಗದೇವ್ ಗುತ್ತೇದಾರ್‌ರವರೇ, ಓದಬೇಡಿ, ಪ್ರಶ್ನೆ ಕೇಳಿ. ಸ್ಪಷ್ಟೀಕರಣವನ್ನು ಕೇಳಿ.

**ಶ್ರೀ ಡಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಸಮಸ್ಯೆ ಇದೆ ಎನ್ನುವುದನ್ನು ನಮ್ಮ ಕ್ಯಾಬಿನೆಟ್ ಸಬ್ ಕಮಿಟಿ ಗುರುತಿಸಿದೆ. ಇಲ್ಲಿ promotions and seniority ಮೇಲಿನ ವಿಚಾರಗಳಿವೆ. ಅದನ್ನು ಸಚಿವ ಸಂಪುಟದ ಉಪಸಮಿತಿಯು ಆದ್ಯತೆ ಮೇಲೆ ತೆಗೆದುಕೊಂಡು ಅದನ್ನು ಬಗೆಹರಿಸುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ.

**ಶ್ರೀ ಜಗದೇವ್ ಗುತ್ತೇದಾರ್:-** ಮಾನ್ಯ ಸಭಾಪತಿಯವರೇ, ಕಲ್ಯಾಣ ಕರ್ನಾಟಕ ಭಾಗದ ಅಭ್ಯರ್ಥಿಗಳು ಹೋರಾಟ ಮಾಡಿ ಕೋರ್ಟ್‌ಗೆ ಹೋಗಿ ತೀರ್ಪುಗಳನ್ನು ತಂದರೂ ಸಚಿವ ಸಂಪುಟದ ಉಪಸಮಿತಿಯವರು ನಿರ್ದೇಶನ ನೀಡಿದರೂ ಕೂಡ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯವರು ಯಾರದೇ ಮಾತನ್ನೂ ಕೇಳುತ್ತಿಲ್ಲ. ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ವಿವಿಧ ವೃಂದಗಳ ನೇರ ನೇಮಕಾತಿ ಮತ್ತು ಮುಂಬಡ್ತಿ ವಿಷಯದಲ್ಲಿ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ. 13868/2020ರಲ್ಲಿ ದಿನಾಂಕ 01-08-2023ರಂದು ತೀರ್ಪನ್ನು ನೀಡಿದರೂ ಜೇಷ್ಠತೆಯನ್ನು ಮರುವಿಂಗಡಿಸಲು ಕ್ರಮ ಕೈಗೊಂಡಿರುವುದಿಲ್ಲ.

**ಶ್ರೀ ಡಿ. ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದ ಹಾಗೆ ಈ ವಿಚಾರ ಉಪಸಮಿತಿಯ ಮುಂದೆ ಇದೆ. ಅದನ್ನು ಸಬ್ ಕಮಿಟಿಯು ಶೀಘ್ರದಲ್ಲಿ ಬಗೆಹರಿಸುತ್ತದೆ.

**ಈ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 19.12.2024ರ ಸಮೂಹ-9ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 123 ಪ್ರಶ್ನೆಗಳ ಪೈಕಿ 78 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ನಿಮಗೆ ಮೊನ್ನೆ ದಿವಸ ಏನು ಹೇಳಿದೆ ಎಂಬುದು ಗೊತ್ತಿದೆಯೇ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಯಾರ್ಯಾರ ಉತ್ತರಗಳು ಬಂದಿದೆ ಅವುಗಳನ್ನು ಈಗ ಕೊಡುತ್ತಿದ್ದೇನೆ.

**ಸಭಾಪತಿಯವರು:-** ಸದನ ಮುಗಿಯುವುದರೊಳಗೆ ಕೊಡುತ್ತೀರಲ್ಲವೇ?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೇ, ಸದನ ಮುಗಿಯುವುದರೊಳಗೆ ಉತ್ತರವನ್ನು ಕೊಡಿಸಲಾಗುವುದು.

## ೩. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

**ಅ) ವಿಷಯ:- ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಗೆ ನಬಾರ್ಡ್‌ನಿಂದ ರಿಯಾಯಿತಿ ಬಡ್ಡಿ ದರದಲ್ಲಿ ಅಲ್ಪಾವಧಿ ಕೃಷಿ ಸಾಲದ ಪುನರ್ಧನ ಮಿತಿ ಗಣನೀಯವಾಗಿ ಕಡಿಮೆಯಾಗಿರುವ ಬಗ್ಗೆ.**

- - - - -

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಿಂದ ರೈತರಿಗೆ ಸರ್ಕಾರದ ಶೂನ್ಯ ಬಡ್ಡಿದರ ಯೋಜನೆಯಡಿಯಲ್ಲಿ ಗರಿಷ್ಠ ರೂ. 5 ಲಕ್ಷಗಳ ಮಿತಿಗೊಳಪಟ್ಟು ಅಲ್ಪಾವಧಿ ಕೃಷಿ ಸಾಲವನ್ನು ನೀಡಲಾಗುತ್ತಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಕೃಷಿ ಚಟುವಟಿಕೆಗೆ ಅಗತ್ಯವಿರುವ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳು ಹಾಗೂ ಇತರೆ ಪರಿಕರಗಳ ವೆಚ್ಚಗಳು ಅಧಿಕವಾಗಿದ್ದು ರೈತರ ಸಾಲ ಬೇಡಿಕೆಯೂ ಹೆಚ್ಚಾಗಿರುತ್ತದೆ. ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಿಕೆಯ ಪ್ರಮಾಣವನ್ನು ರೂ. 3 ಲಕ್ಷಗಳಿಂದ ರೂ. 5 ಲಕ್ಷಗಳಿಗೆ ಹೆಚ್ಚಿಸಿರುವುದನ್ನು ಸ್ವಾಗತಿಸುತ್ತೇನೆ.

ನಬಾರ್ಡ್ ಸಂಸ್ಥೆಯು ರೈತರಿಗೆ ನೀಡಲಾಗುವ ಅಲ್ಪಾವಧಿ ಕೃಷಿ ಸಾಲದ ಮೇಲೆ ರಿಯಾಯಿತಿ ಬಡ್ಡಿದರದಲ್ಲಿ ಪುನರ್ಧನ ಸೌಲಭ್ಯವನ್ನು ಒದಗಿಸುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ಪುನರ್ಧನ ಸೌಲಭ್ಯದ ಮಿತಿಯನ್ನು ಗಣನೀಯವಾಗಿ ಇಳಿಕೆ ಮಾಡುತ್ತಿದ್ದು ಕಳೆದ 5 ವರ್ಷದಲ್ಲಿ ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿಗೆ ನಬಾರ್ಡ್ ಮಂಜೂರು ಮಾಡಿರುವ ಅಲ್ಪಾವಧಿ ಕೃಷಿ ಸಾಲದ ಮಿತಿಯು ಕೋರಿಕೆಗಿಂತ ಕಡಿಮೆ ಮಂಜೂರು ಮಾಡಲಾಗಿದೆ. ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ., ಶಿವಮೊಗ್ಗ 2023-24ನೇ ಸಾಲಿನಲ್ಲಿ ಜಿಲ್ಲೆಯ ಒಟ್ಟು 1,04,250 ರೈತರುಗಳಿಗೆ ರೂ. 1,010.20 ಕೋಟಿ ಮೊತ್ತದ ಅಲ್ಪಾವಧಿ ಕೃಷಿ ಸಾಲವನ್ನು ನೀಡಿದ್ದು 2024-25ನೇ ಸಾಲಿಗೆ 1,20,000 ರೈತರಿಂದ ರೂ. 1,200.00 ಕೋಟಿಗಳ ಸಾಲವನ್ನು ನೀಡಲು ಗುರಿ ಹೊಂದಲಾಗಿದೆ. ಜಿಲ್ಲೆಯಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರುಗಳ ಸಾಲದ ಬೇಡಿಕೆ ರೂ. 2,650 ಕೋಟಿಗಳಷ್ಟಿದ್ದು ಪ್ರಸ್ತುತ ರೂ. 1,200 ಕೋಟಿಗಳಷ್ಟು ಮಾತ್ರ ಸಾಲ ನೀಡಲು ಸಾಧ್ಯವಾಗಿದ್ದು ಬೇಡಿಕೆಯ ಕನಿಷ್ಟ ಅರ್ಧದಷ್ಟನ್ನೂ ಪೂರೈಸಲು ಸಾಧ್ಯವಾಗುತ್ತಿಲ್ಲ. ಅಲ್ಲದೆ, ಹೊಸ ರೈತರಿಗೆ ಸಾಲ ನೀಡುವುದು ಸಾಧ್ಯವಾಗದೇ ರೈತಾಪಿ ವರ್ಗವನ್ನು ಉತ್ಪಾದನಾ ವಲಯಕ್ಕೆ ಆರ್ಥಿಕವಾಗಿ ಸೇರ್ಪಡೆಗೊಳಿಸುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಯ ಅನುಷ್ಠಾನಕ್ಕೆ ಹಿನ್ನಡೆ ಉಂಟಾಗುತ್ತದೆ.

ನಬಾರ್ಡ್ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಕಡಿಮೆ ಬಡ್ಡಿ ದರದಲ್ಲಿ ಪುನರ್ಧನ ಸಾಲ ಸೌಲಭ್ಯ ಮಂಜೂರು ಮಾಡದಿದ್ದಲ್ಲಿ ಅಪೆಕ್ಸ್ ಬ್ಯಾಂಕಿನ ಸ್ವಂತ ಬಂಡವಾಳದಿಂದ ಶೇ.8.15ರ ಬಡ್ಡಿದರದಲ್ಲಿ ಹಾಗೂ ನಬಾರ್ಡ್‌ನ

ಎಸ್.ಟಿ.ಎಸ್ಎಓ ಹೆಚ್ಚುವರಿ ಶೇ.೮ರ ಬಡ್ಡಿದರದಲ್ಲಿ ಸಾಲ ಪಡೆದು ರೈತರಿಗೆ ಸಾಲ ವಿತರಣೆ ಮಾಡಬೇಕಾಗುವುದು ಅನಿವಾರ್ಯವಾಗುತ್ತದೆ. ಸದರಿ ಅಧಿಕ ಬಡ್ಡಿದರದ ಸಾಲದಿಂದ ಬ್ಯಾಂಕಿಗೆ ಶೇ.1.20ರಷ್ಟು ಬಡ್ಡಿ ನಷ್ಟವಾಗುತ್ತದೆ.

ರಾಜ್ಯ ಸರ್ಕಾರವು 2023-24ನೇ ಸಾಲಿನ ಬಡ್ಡಿ ದರವನ್ನು ಇನ್ನೂ ನಿಗದಿಪಡಿಸದೇ ಇರುವುದರಿಂದ ಸದರಿ ವರ್ಷದ ಬಡ್ಡಿ ಬಿಲ್ಸ್‌ಗಳನ್ನು ಸರ್ಕಾರಕ್ಕೆ ಇನ್ನೂ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ. ರಾಜ್ಯ ಸರ್ಕಾರದ ಬಡ್ಡಿದರ ನಿಗದಿಪಡಿಸುವಲ್ಲಿ ವಿಳಂಬವಾಗುತ್ತಿದ್ದು ಆಯಾ ವರ್ಷದ ಪ್ರಾರಂಭದಲ್ಲಿ ಬಡ್ಡಿದರ ನಿಗದಿಯಾದಲ್ಲಿ ಬ್ಯಾಂಕಿಗೆ ಬರಬೇಕಾದ ಬಡ್ಡಿ ಬಿಲ್ಲುಗಳು ಸರ್ಕಾರಕ್ಕೆ ಸಕಾಲದಲ್ಲಿ ಸಲ್ಲಿಕೆಯಾದಲ್ಲಿ ಸಂಪನ್ಮೂಲ ಕೊರತೆ ಉಂಟಾಗುವುದಿಲ್ಲ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳಿಂದ ಬಡ್ಡಿ ಬಿಲ್ಲುಗಳ ಮೊತ್ತ ಸಕಾಲದಲ್ಲಿ ಬಾರದೇ ಇರುವುದರಿಂದ ಜಿಲ್ಲಾ ಬ್ಯಾಂಕುಗಳಿಗೆ ಸಂಪನ್ಮೂಲದ ಕೊರತೆ ಉಂಟಾಗುತ್ತಿದ್ದು ಸಾಲ ಹಂಚಿಕೆಯ ಪ್ರಮಾಣ ಕುಂಠಿತವಾಗುತ್ತಿದೆ.

ಆದ್ದರಿಂದ ರಾಜ್ಯದ ರೈತರ ಹಿತದೃಷ್ಟಿಯನ್ನು ಗಣನೆಗೆ ತೆಗೆದುಕೊಂಡು ನಬಾರ್ಡ್ ಪುನರ್ಧನ ಸೌಲಭ್ಯವನ್ನು ಹೆಚ್ಚಿಸುವಂತೆ ನಬಾರ್ಡ್ ಸಂಸ್ಥೆಗೆ ಸೂಕ್ತ ನಿರ್ದೇಶನ ನೀಡುವಂತೆ ಹಾಗೂ ರಾಜ್ಯ ಸರ್ಕಾರವು ಬಡ್ಡಿ ದರವನ್ನು ಆಯಾ ಆರ್ಥಿಕ ವರ್ಷದ ಪ್ರಾರಂಭದಲ್ಲಿ ನಿಗದಿಪಡಿಸುವ ಬಗ್ಗೆ ಮತ್ತು ಬಡ್ಡಿ ಬಿಲ್‌ಗಳ ಮೊತ್ತವನ್ನು ಶೀಘ್ರವಾಗಿ ಬಿಡುಗಡೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಅಲ್ಪಾವಧಿ ಕೃಷಿ ಪತ್ತಿನ ಸಹಕಾರ ಸಂಘಗಳು ಶೂನ್ಯ ಬಡ್ಡಿದರದಲ್ಲಿ ರೂ. 5 ಲಕ್ಷದವರೆಗೂ ಅಲ್ಪಾವಧಿ ಸಾಲವನ್ನು 2023-24ನೇ ಸಾಲಿನಿಂದ ಒದಗಿಸಲಾಗಿದೆ. ನಬಾರ್ಡ್ ಸಂಸ್ಥೆಯು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್‌ನ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ . . .

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈ ವಿಷಯಕ್ಕೆ ಸಹಕಾರ ಸಚಿವರು ಬಂದು ಉತ್ತರ ಕೊಡುತ್ತಾರೆ. ನೀವು ಕುಳಿತುಕೊಳ್ಳಿ.

**ಆ) ವಿಷಯ:- ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಸಾವಿರ ಹಾಸಿಗೆಗಳ ಬಹುಮಹಡಿ ಕಟ್ಟಡ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ಬಗ್ಗೆ.**

- - - - -

**ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ದಿನಾಂಕ 17.12.2024ರಂದು ''ಮುಗಿಯುತ್ತಿಲ್ಲ ಆಸ್ಪತ್ರೆ ಕಟ್ಟಡ'' ಎಂದು 'ವಿಜಯವಾಣಿ' ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

''ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಅಡಿಯಲ್ಲಿರುವ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ತಲೆ ಎತ್ತುತ್ತಿರುವ ಸಾವಿರ ಹಾಸಿಗೆಗಳ ಬಹುಮಹಡಿ ಕಟ್ಟಡ ಕಾಮಗಾರಿ ಆರಂಭವಾಗಿ ಐದು ವರ್ಷಗಳು ಕಳೆದರೂ ಸೇವೆಗೆ ಸಿದ್ಧವಾಗಿಲ್ಲ. ಗುಣಮಟ್ಟದ ಹಾಗೂ ಉಚಿತ ವೈದ್ಯಕೀಯ ಸೇವೆಗೆ ಹೆಸರಾಗಿರುವ ವಿಕ್ಟೋರಿಯಾ ಆಸ್ಪತ್ರೆಗೆ ರಾಜ್ಯ ಹಾಗೂ ಹೊರ ರಾಜ್ಯಗಳಿಂದಲೂ ನಿತ್ಯ ಸಾವಿರಾರು ಸಂಖ್ಯೆಯಲ್ಲಿ ರೋಗಿಗಳು ಆಗಮಿಸುತ್ತಾರೆ. 500ಕ್ಕೂ ಅಧಿಕ ಮಂದಿ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಾರೆ. ಆಯುಷ್ಮಾನ್ ಭಾರತ್ ಸೇರಿ ವಿವಿಧ ಯೋಜನೆಗಳಡಿ ಚಿಕಿತ್ಸೆ ಲಭ್ಯ ಇರುವ ಕಾರಣ ರೋಗಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇದರಿಂದಾಗಿ ರೋಗಿಗಳಿಗೆ ಹಾಸಿಗೆಗಳ ಕೊರತೆಯಿಂದಾಗಿ ದಾಖಲಾತಿ ಪ್ರಕ್ರಿಯೆ ವಿಳಂಬವಾಗುತ್ತಿದೆ. ಈ ಸಮಸ್ಯೆಗೆ ಪರಿಹಾರವಾಗಿ ಸುಮಾರು 68.53 ಕೋಟಿ ರೂ. ವೆಚ್ಚದ ಕಟ್ಟಡ ನಿರ್ಮಾಣಕ್ಕೆ 2019ರ ಡಿಸೆಂಬರ್ 11ರಂದು ಆಗಿನ ಮುಖ್ಯಮಂತ್ರಿಯವರು ಶಂಕುಸ್ಥಾಪನೆ ನೆರವೇರಿಸಿದ್ದರು.

ವಿಕ್ಟೋರಿಯಾ ಆಸ್ಪತ್ರೆ ಮೂಲ ಕಟ್ಟಡದ ಪಕ್ಕದಲ್ಲಿ ಸುಮಾರು 2 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಆರಂಭವಾದ ಕಟ್ಟಡ ಕಾಮಗಾರಿ 18 ತಿಂಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿತ್ತು. ಆದರೆ 2020ರಲ್ಲಿ ಎದುರಾದ ಕೋವಿಡ್ ಸಾಂಕ್ರಾಮಿಕದಿಂದಾಗಿ ಕಾಮಗಾರಿ ವಿಳಂಬವಾಯಿತು. ನಂತರದಲ್ಲಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಕೆಲ ಬದಲಾವಣೆಗಳನ್ನು ಮಾಡಿದ್ದರಿಂದ ಕಾಮಗಾರಿ ಕುಂಟುತ್ತಾ ಸಾಗಿದೆ. ಅಲ್ಲದೆ ನಿರ್ಮಾಣ ವೆಚ್ಚವೂ 90 ಕೋಟಿ ರೂ.ಗೆ ಏರಿಕೆಯಾಗಿದೆ'' ಎಂದು ದಿನಪತ್ರಿಕೆಯಲ್ಲಿ ಪ್ರಕಟವಾಗಿದ್ದು, ಸದರಿ ಸಾವಿರ ಹಾಸಿಗೆಗಳ ಬಹುಮಹಡಿ ಕಟ್ಟಡ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವ ಕುರಿತು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರು ಪೀಠವನ್ನಲಂಕರಿಸಿದರು)**

**ಇ) ವಿಷಯ:- ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ಅರ್ಹತೆ ಇಲ್ಲದವರನ್ನು ನೇಮಕ ಮಾಡಿರುವ ಕುರಿತು.**

- - - - -

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ರಾಜ್ಯಾದ್ಯಂತ ಜಿಲ್ಲಾ ಆಸ್ಪತ್ರೆ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ವೈದ್ಯರುಗಳ ನಿರ್ಲಕ್ಷ್ಯ ಹಾಗೂ ದೋಷಪೂರಿತ ಔಷಧಿಗಳ ಬಳಕೆಯಿಂದ ಬಾಣಂತಿಯರು ಮತ್ತು ರೋಗಿಗಳ ಸಾವು ನೋವುಗಳು ಹೆಚ್ಚುತ್ತಿವೆ. ಇದಕ್ಕೆ ಪೂರಕವೆಂಬಂತೆ ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ಅರ್ಹತೆ ಇಲ್ಲದವರನ್ನು ನೇಮಕ ಮಾಡಲಾಗಿದೆ ಎಂದು 'ಭಾರತ ವೈಭವ' ದಿನಪತ್ರಿಕೆಯಲ್ಲಿ ವರದಿಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ 12 ತಾಲ್ಲೂಕುಗಳು ಬರುತ್ತಿದ್ದು, ಸಾಕಷ್ಟು ಬೆಟ್ಟಗುಡ್ಡಗಳು, ಹೆಚ್ಚಿನ ಕರಾವಳಿ ಪ್ರದೇಶ ಮತ್ತು ಅರಣ್ಯ ಪ್ರದೇಶದಿಂದ ಕೂಡಿದ ಜಿಲ್ಲೆಯಾಗಿದೆ. 2016ರಲ್ಲಿ ಕಾರವಾರದಲ್ಲಿ ವೈದ್ಯಕೀಯ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಸ್ವಂತ ಕಟ್ಟಡ ಇಲ್ಲದ ಕಾರಣ ಜಿಲ್ಲಾ ಆಸ್ಪತ್ರೆಯಲ್ಲೇ ವೈದ್ಯಕೀಯ ಕಾಲೇಜು ಕಾರ್ಯಾರಂಭ ಮಾಡಿತು. ಈ ಸಂಸ್ಥೆಗೆ ಸರಕಾರಿ ಜಿಲ್ಲಾ ಆಸ್ಪತ್ರೆಯ ಸರ್ಜನ್ ಆಗಿದ್ದ ಡಾ. ಶಿವಾನಂದ ಕುಡತಲ್ಕರ್ ಎಂಬುವವರನ್ನು ವೈದ್ಯಕೀಯ ಸಂಸ್ಥೆಯ ಹುದ್ದೆಗೆ ಅರ್ಹತೆ ಇಲ್ಲದಿದ್ದರೂ ಸಹ ವೈದ್ಯಕೀಯ ಶಿಕ್ಷಣ ಇಲಾಖೆಯು ವೈದ್ಯಕೀಯ ಅಧೀಕ್ಷಕ ಹುದ್ದೆಗೆ ಪ್ರಭಾರರನ್ನಾಗಿ ನೇಮಕ ಮಾಡಿತು. ನಂತರ 2018ರಲ್ಲಿ ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆ ಸ್ವಂತ ಕಟ್ಟಡವನ್ನು ಹೊಂದಿತ್ತು ಹಾಗೂ ಡಾ. ಶಿವಾನಂದ ಕುಡತಲ್ಕರ್ ಅರ್ಹತೆ ಇಲ್ಲದಿದ್ದರೂ ವೈದ್ಯಕೀಯ ಅಧೀಕ್ಷಕರ ಹುದ್ದೆಯಲ್ಲಿ ಇಲ್ಲಿಯವರೆಗೂ ಮುಂದುವರೆದಿರುತ್ತಾರೆ. ಇವರ ಆಡಳಿತದಲ್ಲಿ ಕೋವಿಡ್ ಸಮಯದಲ್ಲಿ ಸಮರ್ಪಕ ನಿರ್ವಹಣೆ ಮಾಡದೆ ಅದೆಷ್ಟೋ ಜೀವಗಳು ಬಲಿಯಾಗಿವೆ. ಶ್ರೀಮತಿ ಗೀತಾ ಬಾಣಲಕರ್ ಗರ್ಭಿಣಿ ಸೂಕ್ತ ಚಿಕಿತ್ಸೆ ಸಿಗದೇ ಈ ಸಂಸ್ಥೆಯಲ್ಲಿ ಮೃತಪಟ್ಟಾಗ ಕಾರವಾರ ಬಂದ್ ಮಾಡಿ ಡಾ. ಶಿವಾನಂದ ಕುಡತಲ್ಕರ್ ಅವರನ್ನು ವಜಾ ಮಾಡುವಂತೆ ಪಕ್ಷಾತೀತವಾಗಿ ಹೋರಾಟ ಮಾಡಲಾಗಿತ್ತು. ಜಿಲ್ಲೆಯಲ್ಲಿ ಸಮುದ್ರ, ರಸ್ತೆ ತಿರುವು ಮತ್ತು ರಾಷ್ಟ್ರೀಯ ಹೆದ್ದಾರಿಗಳ ಕಾರಣದಿಂದ ಅಪಘಾತಗಳು ಹೆಚ್ಚಾಗುತ್ತಿವೆ, ಅದರ ಸಮರ್ಪಕ ಚಿಕಿತ್ಸೆ ಇಲ್ಲ ಎನ್ನುತ್ತಾರೆ ಸ್ಥಳೀಯ ಜನರು. ರಾಷ್ಟ್ರೀಯ ವೈದ್ಯಕೀಯ ಆಯುಕ್ತಾಲಯದ ಅಭಿಪ್ರಾಯದಂತೆ ಕಾರವಾರ ವೈದ್ಯಕೀಯ ಸಿಕ್ಷಣ ಸಂಸ್ಥೆಯ ಪ್ರಸ್ತುತ ಇರುವ ವೈದ್ಯಕೀಯ ಅಧೀಕ್ಷಕರು ಆ ಹುದ್ದೆಗೆ ಅರ್ಹತೆ ಇಲ್ಲ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಈ ಹಿನ್ನಲೆಯಲ್ಲಿ, ಉತ್ತರ ಕನ್ನಡ ಜನರ ಜೀವನಾಡಿಯಾಗಿರುವ ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆಗೆ ಅರ್ಹತೆ ಇರುವ ಸೂಕ್ತ ವೈದ್ಯಕೀಯ ಅಧೀಕ್ಷಕರನ್ನು ನೇಮಕ ಮಾಡಬೇಕೆಂದು ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

(1012) 19.12.2024 12.10 ಹೆಚ್‌ವಿ. ಎಂಡಿ

**ಈ) ವಿಷಯ:- ರಾಜ್ಯ ಸಾರಿಗೆ ಸಂಸ್ಥೆಯ ನೌಕರರು ಡಿಸೆಂಬರ್ 31ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿರುವ ಬಗ್ಗೆ.**

- - - - -

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವವುಳ್ಳ ಅತೀ ಜರೂರು ವಿಚಾರವನ್ನು ಶೂನ್ಯವೇಳೆಯಲ್ಲಿ ಮಾನ್ಯ ಸಾರಿಗೆ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಡಿಸೆಂಬರ್ 18ನೇ ತಾರೀಖಿನ "ಈ ಸಂಜೆ" ದಿನಪತ್ರಿಕೆಯಲ್ಲಿ "ಡಿಸೆಂಬರ್ 31ನೇ ತಾರೀಖಿನಿಂದ ಸಾರಿಗೆ ನೌಕರರ ಮುಷ್ಕರ" ಎನ್ನುವ ಶೀರ್ಷಿಕೆಯಡಿಯಲ್ಲಿ ರಾಜ್ಯ ಸಾರಿಗೆ ಸಂಸ್ಥೆಯ ನೌಕರರ ಮುಷ್ಕರದ ಬಗ್ಗೆ ವರದಿಯಾಗಿರುತ್ತದೆ.

ಸನ್ಮಾನ್ಯ ಸಭಾಪತಿಯವರೇ, "ರಾಜ್ಯ ಸಾರಿಗೆ ಸಂಸ್ಥೆ ದೇಶದಲ್ಲೇ ಮಾದರಿ" ಎನ್ನುವ ರೀತಿಯಲ್ಲಿ ಈ ಹಿಂದಿನಿಂದಲೂ ಕಾರ್ಯನಿರ್ವಹಿಸುತ್ತಿದೆ. ಈ ಕೀರ್ತಿಗೆ ಅದರ ನೌಕರರೇ ಕಾರಣ ಎಂದರೆ ತಪ್ಪಲ್ಲ. ಆದರೆ ಇಂದು "ಶಕ್ತಿ ಯೋಜನೆ" ಜಾರಿಯಾದ ನಂತರ ಅವರ ಕೆಲಸ, ಜವಾಬ್ದಾರಿ ಇನ್ನಷ್ಟು ಹೆಚ್ಚಾಗಿದೆ. ನೌಕರರ ಕೆಲಸ ಮಾತ್ರ ಹೆಚ್ಚಾಗಿದ್ದು; ಅವರ ವೇತನ ಮತ್ತು ಭತ್ಯೆಗಳು ಮಾತ್ರ ಹೆಚ್ಚಾಗಿಲ್ಲ. ಈ ವಿಚಾರವಾಗಿ ಬೇಡಿಕೆಯನ್ನು ಮುಂದಿಟ್ಟು ನೌಕರರು ಹೋರಾಟಕ್ಕಿಳಿಯುತ್ತಿದ್ದಾರೆ. ಅವರ ಬೇಡಿಕೆಗಳೆಂದರೆ,ಕಳೆದ 36 ತಿಂಗಳುಗಳಿಂದ ಬಾಕಿ ಇರುವಂತಹ 1,750 ಕೋಟಿ ರೂಪಾಯಿಗಳನ್ನು ಪಾವತಿ ಮಾಡುವುದು; ಅವರ ಮೂಲವೇತನಕ್ಕೆ ಶೇಕಡಾ 25ರಷ್ಟು ಭತ್ಯೆಯನ್ನು ಹೆಚ್ಚಳ ಮಾಡಬೇಕು; ಶೇಕಡಾ 31ರಷ್ಟು ತುಟ್ಟಿ ಭತ್ಯೆಯನ್ನು ವಿಲೀನಗೊಳಿಸಿ ವೇತನ ಶ್ರೇಣಿಯನ್ನು ಸಿದ್ಧಗೊಳಿಸಬೇಕು; ಪ್ರತಿ ತಿಂಗಳು 2,000 ರೂಪಾಯಿಗಳ ವೈದ್ಯಕೀಯ ಚಿಕಿತ್ಸಾ ವೆಚ್ಚ ನೀಡಬೇಕು; ಬಸ್ ಘಟಕಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು; ಹೆಚ್ಚುವರಿ ಕೆಲಸದ ಅವಧಿಗೆ ಓಟಿ ನೀಡಬೇಕು; "ಶಕ್ತಿ ಯೋಜನೆ"ಯಿಂದ ಆಗುತ್ತಿರುವ ಶಿಕ್ಷೆ ಮತ್ತು ಕಿರುಕುಳ ಸಮಸ್ಯೆ ಪರಿಹರಿಸಬೇಕು ಮತ್ತು ನೌಕರರ ಮುಂಬಡ್ತಿಗೆ ಕ್ರಮ ಕೈಗೊಳ್ಳಬೇಕು ಎಂಬ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಸಾರಿಗೆ ನೌಕರರು ಡಿಸೆಂಬರ್-31ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಇವರ ಮುಷ್ಕರದಿಂದ ಹೊಸ ವರ್ಷದ ಮುನ್ನಾ ದಿನದಂದು ಲಕ್ಷಾಂತರ ಜನರಿಗೆ ತೊಂದರೆಯಾಗುವ ಸಾಧ್ಯತೆಯಿದೆ. ಆದ್ದರಿಂದ ಇವರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸಿ, ಸಾರ್ವಜನಿಕರಿಗೆ ಉಂಟಾಗಲಿರುವ ತೊಂದರೆಯನ್ನು ತಪ್ಪಿಸಬೇಕೆಂದು ಮಾನ್ಯ ಸಾರಿಗೆ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

ಉ) **ವಿಷಯ:- ಆಹಾರ ನಿಗಮದ ಗೋದಾಮಿನ ನಿರ್ವಹಣೆಗೆ ಮಾರ್ಗಸೂಚಿ ರೂಪಿಸಿ ನ್ಯಾಯಬೆಲೆ ಅಂಗಡಿಗಳನ್ನು ನಿಯಮಿತ ತಪಾಸಣೆ ಮಾಡಿಸುವ ಕುರಿತು.**

- - - - -

**ಶ್ರೀ ಮುಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸುತ್ತಿದ್ದೇನೆ. "ನೀವು ಬಳಸುವ ಪಡಿತರ ಅಪಾಯದಲ್ಲಿದೆ! ಸಿಮೆಂಟ್, ರಸಗೊಬ್ಬರ, ಕೀಟನಾಶಕಗಳ ಜೊತೆ ಆಹಾರ ಸಾಮಗ್ರಿ ಸಂಗ್ರಹ; ಸಾರ್ವಜನಿಕ ವಿತರಣೆಯಲ್ಲಿ ಹಲವು ಲೋಪಗಳು; ಸಿಎಜಿ ವರದಿಯಲ್ಲಿ ಆಘಾತಕಾರಿ ಮಾಹಿತಿ" ಎಂಬ ಶೀರ್ಷಿಕೆಯಡಿ ದಿನಾಂಕ 16.12.2024ರ ಉದಯವಾಣಿ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ರಾಜ್ಯದ ಪಡಿತರ ವಿತರಣ ವ್ಯವಸ್ಥೆಯಲ್ಲಿ ದೊಡ್ಡ ಮಟ್ಟದ ಲೋಪದೋಷಗಳು ಕಂಡುಬಂದಿವೆ. ಈ ಆಹಾರಗಳು ಎಷ್ಟು ಸುರಕ್ಷಿತ ಎಂಬ ಪ್ರಶ್ನೆಗಳು ಕಾಡಲಾರಂಭಿಸಿವೆ. ರಸಗೊಬ್ಬರ, ಕೀಟನಾಶಕಗಳ ಜೊತೆಗೆ ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಿಟ್ಟಿರುವ ಅಂಶ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ವರದಿಯಲ್ಲಿ ಬೆಳಕಿಗೆ ಬಂದ ನಂತರ ಮೇಲಿನ ಪ್ರಶ್ನೆಗಳು ಹುಟ್ಟಿಕೊಂಡಿವೆ. ಹೀಗಾಗಿ ನಾವು ಸೇವಿಸುತ್ತಿರುವ ಆಹಾರ ಅಪಾಯ ಮಟ್ಟದಲ್ಲಿದೆಯೇ ಎಂಬ ಸಂಶಯವನ್ನು ಹುಟ್ಟು ಹಾಕಿದೆ.

ವಿಧಾನಸಭೆಯಲ್ಲಿ ಮಂಡಿಸಲಾದ 2017-2022ವರೆಗಿನ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸರಬರಾಜು ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕ ಪರಿಶೋಧನೆಯಲ್ಲಿ ಪಡಿತರ ಆಹಾರ ಧಾನ್ಯದ ಸಂಗ್ರಹ, ಸಾಗಣೆ, ನಿರ್ವಹಣೆ, ನ್ಯಾಯಬೆಲೆ ಅಂಗಡಿಗಳ ಕಾರ್ಯನಿರ್ವಹಣೆಯಲ್ಲಿ ಅನೇಕ ಎಡವಟ್ಟುಗಳನ್ನು ಸಿಎಜಿ ಗುರುತಿಸಿದೆ. ಜೊತೆಗೆ ಹಲವು ಸುಧಾರಣೆ ಕ್ರಮಗಳನ್ನು ಶಿಫಾರಸ್ಸು ಮಾಡಿದೆ.

ನ್ಯಾಯಬೆಲೆ ಅಂಗಡಿಗಳ ಮೂಲ ಸೌಕರ್ಯದಲ್ಲಿ ಕೊರತೆಯಿದ್ದು, ಆಹಾರ ಧಾನ್ಯಗಳನ್ನು ರಸಗೊಬ್ಬರ, ಕೀಟ ನಾಶಕಗಳ ಜೊತೆಗೆ ಸಂಗ್ರಹಿಸಿಟ್ಟಿರುವ ನಿದರ್ಶನಗಳಿವೆ. ಈ ಮೂಲಕ "ಸುರಕ್ಷಿತ ಆಹಾರ ಸಂಗ್ರಹಣೆ ಅಭ್ಯಾಸದ ಪಾಲನೆ ಆಗುತ್ತಿಲ್ಲ" ಎಂದು ಸಿಎಜಿ ಆಕ್ಷೇಪಿಸಿದೆ. ಅನಧಿಕೃತ ನವೀಕರಿಸದ ತೂಕದ ಮಾಪನಗಳ ಬಳಕೆ, ಕೆಲಸದ ಅವಧಿಯಲ್ಲಿ ನ್ಯಾಯಬೆಲೆ ಅಂಗಡಿಗಳು ಮುಚ್ಚಿರುವುದನ್ನು ಸಿಎಜಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ. ಇನ್ನು ಪಡಿತರ ಸಾಗಾಣಿಕೆದಾರರು ಅಧಿಕೃತ ವಾಹನವನ್ನು ಬಳಸದೇ ಪ್ರಯಾಣಿಕರ ಸಾಗಣೆ ವಾಹನಗಳನ್ನು ಬಳಸುತ್ತಿದ್ದಾರೆ ಎಂದು ವರದಿಯಾಗಿರುತ್ತದೆ.

ಆದ್ದರಿಂದ ರಾಜ್ಯದ ಜನರ ಆರೋಗ್ಯದ ಹಿತದೃಷ್ಟಿಯಿಂದ ಆಹಾರ ನಿಗಮದ ಗೋದಾಮಿನ ನಿರ್ವಹಣೆಗೆ ಮಾರ್ಗಸೂಚಿ ರೂಪಿಸುವ ಜೊತೆಗೆ ನ್ಯಾಯಬೆಲೆ ಅಂಗಡಿಗಳನ್ನು ಇಲಾಖೆ ವತಿಯಿಂದ ನಿಯಮಿತವಾಗಿ ತಪಾಸಣೆ ನಡೆಸಬೇಕೆಂದು ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಚಿವರನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ವೈಸ್ ಛೇರ್ಮನ್:-** ಮುಂದಿನ ಶೂನ್ಯವೇಳೆ ಶ್ರೀ ಪಿ.ಹೆಚ್.ಪೂಜಾರ್‌ರವದು. ಅವರು ಸದನದಲ್ಲಿ ಹಾಜರಿಲ್ಲ. ಮಾನ್ಯ ಬಿ.ಕೆ.ಹರಿಪ್ರಸಾದ್, ಶ್ರೀ ಡಿ.ಎಸ್.ಅರುಣ್ ಮತ್ತು ಮಾನ್ಯ ಶಾಂತಾರಾಮ್ ಬುಡ್ನ ಸಿದ್ದಿಯವರುಗಳು ಒಂದೇ ವಿಚಾರಕ್ಕೆ ಸಂಬಂಧಪಟ್ಟಂತೆ ಶೂನ್ಯವೇಳೆಯಲ್ಲಿ ನೋಟೀಸ್ ನೀಡಿದ್ದಾರೆ. ಈಗ ಮೊದಲಿಗೆ ಮಾನ್ಯ ಬಿ.ಕೆ. ಹರಿಪ್ರಸಾದ್‌ರವರು.

**ಊ) ವಿಷಯ:- ರೈತರ ಬಗರ್ ಹುಕುಂ ಅರ್ಜಿಗಳ ವಿಲೇವಾರಿಗೆ ಅರಣ್ಯ ಹಕ್ಕುಗಳ ಕಾಯ್ದೆಯಡಿ ಸರ್ಕಾರ ಹೊರಡಿಸಿರುವ ಆದೇಶಕ್ಕೆ ಸೂಕ್ತ ತಿದ್ದುಪಡಿ ಹೊರಡಿಸುವ ಬಗ್ಗೆ.**

**- - - -**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಭೂಮಿಯಲ್ಲಿನ 2005ರ ಪೂರ್ವದ ಬಗರ್ ಹುಕುಂ ಸಾಗುವಳಿದಾರರು ಭೂಮಿಯ ಹಕ್ಕಿನಿಂದ ವಂಚಿತರಾಗಿ ಬವಣೆ ಪಡುತ್ತಿದ್ದು ಸಮಸ್ಯೆಯ ಪರಿಹಾರಕ್ಕೆ ಸರ್ಕಾರದ ಮುಂದೆ ಬೇಡಿಕೆಗಳನ್ನು ಸಲ್ಲಿಸಿರುವುದು ತಿಳಿದುಬಂದಿರುತ್ತದೆ.

ಇತರ ಪಾರಂಪರಿಕ ಅರಣ್ಯವಾಸಿಯ ವ್ಯಾಖ್ಯೆಯಲ್ಲಿನ ಮೂರು ತಲೆಮಾರಿನ ಪೂರ್ವದ ಮಾನದಂಡದ ಬಗ್ಗೆ ಅಧಿಕಾರಿಗಳಲ್ಲಿ ಇರುವ ಗೊಂದಲವನ್ನು ಸರ್ಕಾರ ಬಗೆಹರಿಸಬೇಕು ಮತ್ತು ಈ ಸಂಬಂಧ ಸಂಘಟನೆಗಳೊಂದಿಗೆ ಉನ್ನತಾಧಿಕಾರಿಗಳ ಸಂವಾದ ಕಾರ್ಯಕ್ರಮ ನಡೆಸಿ ಅರಣ್ಯ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮ ಆಗಬೇಕಾಗಿದೆ.

ಅರಣ್ಯ ಹಕ್ಕು ಸಮಿತಿಗಳು ನೈಸರ್ಗಿಕ ನ್ಯಾಯ ನಿಯಮಗಳಿಗೆ ವಿರುದ್ಧವಾಗಿ ಈ ಹಿಂದೆ ಕ್ಲೇಮುಗಳನ್ನು ಸಾರಾಸಗಟು ತಿರಸ್ಕರಿಸಿರುವುದರಿಂದ, ಅರಣ್ಯ ಹಕ್ಕು ಅರ್ಜಿಗಳ ಮರು ಪರಿಶೀಲನೆಗೆ ಸರ್ಕಾರ ಈಗ ಮಾಡಿರುವ ಆದೇಶದಿಂದ ಅರಣ್ಯವಾಸಿಗಳಿಗೆ ನ್ಯಾಯ ಸಿಗಬಹುದೆನ್ನುವ ನಂಬಿಕೆ ಇವರಿಗೆ ಇಲ್ಲವಾಗಿದ್ದು, ಸಮಸ್ಯೆ ಬಗೆಹರಿಸಲು 2006ರ ಅರಣ್ಯ ಹಕ್ಕು ಕಾಯ್ದೆಯ ಇತರ ಪಾರಂಪರಿಕ ಅರಣ್ಯವಾಸಿ ಎಂದರೆ 2005ರ ಪೂರ್ವದಿಂದ

ಜೀವನೋಪಾಯಕ್ಕೆ ಅರಣ್ಯ ಭೂಮಿಯನ್ನು ಅವಲಂಬಿಸಿರುವ ಯಾವುದೇ ವ್ಯಕ್ತಿ ಎನ್ನುವ ತಿದ್ದುಪಡಿ ತಂದು ಕಾಯಿದೆಗೆ ಸ್ಪಷ್ಟತೆ ನೀಡಬೇಕಾಗಿ ಶೂನ್ಯವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಖ) ವಿಷಯ: ಕೇಂದ್ರ ಸರ್ಕಾರದ ಅರಣ್ಯ ರಕ್ಷಣಾ ಕಾಯಿದೆಯನ್ನು ರಾಜ್ಯದಲ್ಲೂ ಅನುಷ್ಠಾನಗೊಳಿಸಿ ರೈತರಿಗೆ ಭೂ ಒಡೆತನ ನೀಡಲು ಇರುವ ತೊಡಕುಗಳನ್ನು ಬಗೆಹರಿಸುವ ಕುರಿತು.**

- - - - -

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, "1980ರ ಬಗರ್ ಹುಕುಂ ಸಮಸ್ಯೆಗೆ 2024ರಲ್ಲೂ ಪರಿಹಾರವಿಲ್ಲ" "ಬಗರ್‌ಹುಕುಂ ಸಾಗುವಳಿ ಭೂ ಹಕ್ಕಿಗೆ ಇನ್ನೆಷ್ಟು ವರ್ಷ ಬೇಕು?" ಎನ್ನುವ ವಿಷಯವನ್ನು ಕ್ರೋಢೀಕರಿಸಿ "ಹತ್ತು ಲಕ್ಷ ರೈತರ ಸಂಕಷ್ಟ" ಎನ್ನುವ ಶಿರೋನಾಮೆಯಡಿಯಲ್ಲಿ ದಿನಾಂಕ 27ನೇ ನವೆಂಬರ್ 2024ರ "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುತ್ತದೆ.

ಜೀವನೋಪಾಯಕ್ಕಾಗಿ ಸರ್ಕಾರಿ ಭೂಮಿ ಸಾಗುವಳಿ ಮಾಡಿದ ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ಸರ್ಕಾರ ಹಕ್ಕುಪತ್ರ ನೀಡುವ ಸಲುವಾಗಿ ಭೂ ಸುಧಾರಣೆ ಕಾಯಿದೆ ಜಾರಿಗೊಳಿಸಿದರೂ ಹತ್ತಾರು ತಾಂತ್ರಿಕ ಸಮಸ್ಯೆಗಳು ರೈತರನ್ನು ಭೂ ಒಡೆತನದಿಂದ ವಂಚಿತರನ್ನಾಗಿ ಮಾಡಿರುವುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ.

ರಾಜ್ಯ ಸರ್ಕಾರವು ಅಧಿಕಾರಿಗಳಿಗೆ ಗಡವುಗಳ ಮೇಲೆ ಗಡುವು ನೀಡುತ್ತಲೇ ಇದ್ದರೂ ಬಗರ್‌ಹುಕುಂ ಸಮಿತಿಗಳು ರೈತರಿಗೆ ನ್ಯಾಯ ಕೊಡಿಸುವಲ್ಲಿ ಸೋತಿವೆ. ಸಾಗುವಳಿ ಹಕ್ಕುಪತ್ರಕ್ಕಾಗಿ ಸಲ್ಲಿಸಿದ ಎಲ್ಲ ಅರ್ಜಿಗಳನ್ನು ಡಿಸೆಂಬರ್ ಅಂತ್ಯದೊಳಗೆ ವಿಲೇ ಮಾಡಬೇಕೆಂಬುದು ಕೇವಲ ಮಾತಿನಲ್ಲಿ ಉಳಿಯುವ ಸಾಧ್ಯತೆ ಇದ್ದು, ಸರ್ಕಾರದ ಮಟ್ಟದಲ್ಲೇ ಬಹಳಷ್ಟು ತೊಡಕುಗಳಿರುವುದರಿಂದ ಹಲವು ದಶಕಗಳಾದರೂ ಲಕ್ಷಾಂತರ ಅರ್ಜಿಗಳು ಬಾಕಿ ಉಳಿದಿರುತ್ತವೆ, ರೈತರ ಅರ್ಜಿಗಳಲ್ಲಿ ಶೇಕಡಾ 50ಕ್ಕಿಂತ ಹೆಚ್ಚು ಸೊಪ್ಪಿನಬೆಟ್ಟ, ಕಾನು, ಕುಮ್ಕಿ ಇಂತಹ ಭೂಮಿಗಳ ಸಾಗುವಳಿಯೇ ಅಧಿಕವಾಗಿದ್ದು ಈ ಎಲ್ಲ ಅರ್ಜಿಗಳು ತಿರಸ್ಕೃತಗೊಂಡಲ್ಲಿ ಸಾಗುವಳಿಯಿಂದ ಬಿಡಿಸಬೇಕಾಗುತ್ತದೆ. ಇಂತಹವರಲ್ಲಿ ಬದುಕಿಗಾಗಿ ಸಾಗುವಳಿ ಮಾಡಿದ ಸಣ್ಣ ಮತ್ತು ಅತೀ ಸಣ್ಣ ರೈತರೇ ಅಧಿಕ ಸಂಖ್ಯೆಯಲ್ಲಿದ್ದು ಮಲೆನಾಡು, ಅರೆಮಲೆನಾಡಿನ ಲಕ್ಷಾಂತರ ಕುಟುಂಬಗಳು ಭೂಮಿಯನ್ನು ಕಳೆದುಕೊಳ್ಳುತ್ತವೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ 1980ರ ಅರಣ್ಯ ಸಂರಕ್ಷಣಾ ಕಾಯಿದೆಯನ್ನು ರಾಜ್ಯದಲ್ಲೂ ಅನುಷ್ಠಾನಗೊಳಿಸಿ ರೈತರಿಗೆ ಭೂ ಒಡೆತನವನ್ನು ನೀಡಲು ನಿರ್ದಿಷ್ಟ ಕಾಲಮಿತಿಯೊಳಗೆ ಈ ತೊಡಕುಗಳನ್ನು ಬಗೆಹರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಶೂನ್ಯವೇಳೆಯಲ್ಲಿ ಮಾನ್ಯ ಕಂದಾಯ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

**ಎ) ವಿಷಯ: ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರನ್ನು ಜಿಲ್ಲಾ ಅಧಿಕಾರಿ ಹುದ್ದೆಗೆ ನೇಮಿಸುವ ಬಗ್ಗೆ.**

- - - - -

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, "ಪ್ರಜಾವಾಣಿ" ದಿನಪತ್ರಿಕೆಯಲ್ಲಿ "ಪ್ರಾಂಶುಪಾಲರಿಗೆ ಜಿಲ್ಲಾ ಅಧಿಕಾರಿ ಹುದ್ದೆ" ಎಂದ ಶೀರ್ಷಿಕೆಯಡಿ ವರದಿಯಾಗಿರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಅಲ್ಪಸಂಖ್ಯಾತರ ನಿರ್ದೇಶನಾಲಯ ತನ್ನ ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರನ್ನು ಆಡಳಿತಾತ್ಮಕ ಹುದ್ದೆಗಳಿಗೆ ನೇಮಿಸುತ್ತಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ ಎಂದು ವರದಿ ಮಾಡಲಾಗಿದೆ.

ಪ್ರಸ್ತುತ 31 ಜಿಲ್ಲೆಗಳ ಪೈಕಿ ಎಂಟು ಜಿಲ್ಲೆಗಳಲ್ಲಿ ಪ್ರಾಂಶುಪಾಲರನ್ನು ನಿರ್ದೇಶನಾಲಯವು ಜಿಲ್ಲಾ ಅಧಿಕಾರಿಗಳಾಗಿ ನೇಮಿಸಿದೆ. ಒಬ್ಬ ಪ್ರಾಂಶುಪಾಲರನ್ನು ಮತ್ತು ಒಬ್ಬ ಉಪನ್ಯಾಸಕರನ್ನು ನಿರ್ದೇಶನಾಲಯದಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಿಸಲಾಗಿದೆ. ಅಲ್ಪ ಸಂಖ್ಯಾತರ ಇಲಾಖೆ ಜಿಲ್ಲಾ ಅಧಿಕಾರಿ ಹುದ್ದೆಗೆ ನೇರವಾಗಿ ಆಯ್ಕೆಗೊಂಡವರಿಗೆ ಹುದ್ದೆ ಖಾಲಿ ಇದ್ದರೂ ಸ್ಥಳ ನಿರೀಕ್ಷಣೆಯಲ್ಲಿಟ್ಟು; ಆ ಹುದ್ದೆಗೆ ಪ್ರಾಂಶುಪಾಲರನ್ನು ನೇಮಿಸಲಾಗುತ್ತಿದೆ. ಆಡಳಿತಾತ್ಮಕ ಹುದ್ದೆಗಳಿಗೆ ಶಿಕ್ಷಕರು, ಉಪನ್ಯಾಸಕರು ಮತ್ತು ಪ್ರಾಂಶುಪಾಲರುಗಳ ನೇಮಕ ಕಾನೂನು ಬಾಹಿರವಾಗಿದೆ. ಈ ಬಗ್ಗೆ ನಿರ್ದೇಶನಾಲಯವು 2020 ಜುಲೈನಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿತ್ತು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಸನ್ಮಾನ್ಯ ಸಭಾಪತಿಯವರೇ, ಕೆಲವು ಜಿಲ್ಲೆಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರೇ ಇಲ್ಲ. ಅಲ್ಲಿನ ಶಿಕ್ಷಕರಿಗೆ ಪ್ರಾಂಶುಪಾಲರ ಹುದ್ದೆಯನ್ನು ಪ್ರಭಾರ ಹೊಣೆಯಾಗಿ ನೀಡಲಾಗಿದೆ. ಇದು ಶಾಲೆಯ ಶೈಕ್ಷಣಿಕ ಹಿನ್ನೆಡೆಗೆ ಕಾರಣವಾಗಿದೆ. ಎಸ್.ಎಸ್.ಎಲ್.ಸಿ., ಕಳಪೆ ಫಲಿತಾಂಶಕ್ಕೆ ಪ್ರಾಂಶುಪಾಲರನ್ನೇ ಹೊಣೆಗಾರರನ್ನಾಗಿ ಮಾಡಿ ನಿರ್ದೇಶನಾಲಯ ಇತ್ತೀಚೆಗೆ ನೋಟೀಸ್ ನೀಡಿದೆ. ಹೀಗಿರುವಾಗ, ಪ್ರಾಂಶುಪಾಲರ ಹುದ್ದೆಗಳು ಖಾಲಿ ಇದ್ದರು; ಅವರುಗಳನ್ನು ಜಿಲ್ಲಾ ಅಧಿಕಾರಿಗಳ ಹುದ್ದೆಗೆ ನೇಮಕ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದ್ದಾರೆ. ಪ್ರಾಂಶುಪಾಲರ ಹುದ್ದೆಗಳು ಖಾಲಿ ಇದ್ದರೂ ನೇಮಕ ಮಾಡಲು ನಿರ್ದೇಶನಾಲಯವಾಗಲೀ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಾಗಲೀ ಮುತುವರ್ಜಿ ವಹಿಸುತ್ತಿಲ್ಲ. ಬದಲಾಗಿ ಇರುವ ಪ್ರಾಂಶುಪಾಲರನ್ನು ಜಿಲ್ಲಾ ಅಧಿಕಾರಿ ಅಥವಾ ತಾಲ್ಲೂಕಾ ಅಧಿಕಾರಿ ಹುದ್ದೆಗಳಿಗೆ ನೇಮಕ ಮಾಡುತ್ತಿದೆ. 2024-25ನೇ ಸಾಲಿನಲ್ಲಿ ಹೊಸದಾಗಿ 50 "ಮೊರಾರ್ಜಿ ದೇಸಾಯಿ ವಸತಿ ಶಾಲೆ"ಗಳನ್ನು ಮತ್ತು 100 "ಮೌಲಾನಾ ಅಜಾದ್ ಮಾದರಿ ಶಾಲೆ"ಗಳನ್ನು ಸರ್ಕಾರ ಆರಂಭಿಸಿದೆ. ಲಭ್ಯವಿರುವ ಪ್ರಾಂಶುಪಾಲರನ್ನು ಈ ಶಾಲೆಗಳಿಗೆ ನಿರ್ದೇಶನಾಲಯ ನೇಮಿಸಿ ಜವಾಬ್ದಾರಿ

ನೀಡಬೇಕಾಗಿದೆ. ಕಳೆದ ಸಾಲಿನಲ್ಲಿ ಕೆಲವು ವಸತಿ ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ., ಮಟ್ಟದ ಫಲಿತಾಂಶ ಕಳಪೆ ಮಟ್ಟದಾಗಿರುತ್ತದೆ. ಪ್ರಾಂಶುಪಾಲರನ್ನು ಆಡಳಿತಾತ್ಮಕ ಹುದ್ದೆಗಳಿಗೆ ನೇಮಕ ಮಾಡುವುದು ಮುಂದುವರೆದರೇ, ಫಲಿತಾಂಶದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಹುದ್ದೆಯ ಶ್ರೇಣಿಯನ್ನು ಅನುಸರಿಸದೇ ಕೆಳಮಟ್ಟದ ಅಧಿಕಾರಿಯನ್ನು ಜಿಲ್ಲಾಮಟ್ಟದ ಅಧಿಕಾರಿಯನ್ನಾಗಿ ನೇಮಿಸುವುದು ಆಡಳಿತಾತ್ಮಕವಾಗಿ ದುಷ್ಪರಿಣಾಮವನ್ನುಂಟು ಮಾಡುತ್ತದೆಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸಲಾಗುತ್ತದೆ.

(ಮುಂದು)

(1013) 19.12.2024 12.20 ಪಿಕೆ:ಎಕೆ

**ಐ) ವಿಷಯ:- ಕಿತ್ತೂರು ಕರ್ನಾಟಕದ ಅಭಿವೃದ್ಧಿ ಮಂಡಳಿಯನ್ನು ಕಾಲಮಿತಿಯಲ್ಲಿ ರಚಿಸುವ ಬಗ್ಗೆ.**

\- - - -

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಈ ಕೆಳಕಂಡ ಸಾರ್ವಜನಿಕ ಮಹತ್ವದ ವಿಷಯವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಕಿತ್ತೂರು ಕರ್ನಾಟಕದ ಏಳು ಜಿಲ್ಲೆಗಳ ಅಭಿವೃದ್ಧಿ ದೃಷ್ಟಿಯಿಂದ ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಬಜೆಟ್‌ನಲ್ಲಿ 'ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚನೆ ಮಾಡಲಾಗುವುದು ಎಂದು ಘೋಷಣೆ ಮಾಡಿದ್ದರು. ಆದರೆ, ಇದರಿಂದ ಈ ಭಾಗದ ಜನರು ಸಮಗ್ರ ಅಭಿವೃದ್ಧಿ ಕನಸು ಕಂಡಿದ್ದರು ಕೂಡ ಘೋಷಣೆ ಆಗಿ ಮೂರು ವರ್ಷ ಕಳೆದರೂ ಮಂಡಳಿ ರಚನೆ ಇನ್ನೂ ಗಗನ ಕುಸುಮವಾಗಿ ಉಳಿದಿದೆ. ಹೀಗಾಗಿ ಈವರೆಗೂ ಇದಕ್ಕೆ ಹಣ ಮೀಸಲಿಟ್ಟಿಲ್ಲ. ಮಂಡಳಿಗೆ ಅಧ್ಯಕ್ಷ, ಸದಸ್ಯರನ್ನು ನೇಮಕ ಮಾಡದಿರುವುದು ಇಲ್ಲಿನ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಈ ಅಧಿವೇಶನದಲ್ಲಾದರೂ ಘೋಷಣೆ ಮಾಡಿ, ಮಂಡಳಿ ರಚನೆಗೆ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎನ್ನುವುದು ಈ ಭಾಗದ ಜನಾಗ್ರಹವಾಗಿದೆ. ಆದ್ದರಿಂದ, ಕಿತ್ತೂರು ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಹಿಂದುಳಿದ ತಾಲೂಕುಗಳನ್ನು ಗುರುತಿಸಿ, ಸರ್ಕಾರ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಿದೆ. ಈ ಭಾಗದ ಬಹಳಷ್ಟು ತಾಲೂಕುಗಳು ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದು, ಜಿಲ್ಲಾ ಕೇಂದ್ರಿತ ಅನುದಾನ ಬಿಟ್ಟು ತಾಲ್ಲೂಕು ಕೇಂದ್ರಿತ ಅನುದಾನ ಮಂಜೂರು ಮಾಡುವುದು ಈ ಭಾಗದ ಜನರ ಬೇಡಿಕೆಯಾಗಿದೆ.

ಆದುದರಿಂದ, **'ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ'** ಕಾಲಮಿತಿಯಲ್ಲೇ ರಚಿಸಬೇಕು. ಈ ಭಾಗದ ಹಿಂದುಳಿದ ತಾಲೂಕುಗಳನ್ನು ಗುರುತಿಸುವುದಕ್ಕೆ ಕಮಿಟಿ ರಚಿಸಬೇಕು. ಅಭಿವೃದ್ಧಿಯಲ್ಲಿ ಆಸಕ್ತಿ ಇರುವವರನ್ನು

ಮಂಡಳಿಗೆ ನೇಮಿಸಿ ಕಿತ್ತೂರು ಕರ್ನಾಟಕ ಮಂಡಳಿ ರಚಿಸಿ ಸರ್ವಾಂಗೀಣ ಅಭಿವೃದ್ಧಿ ಮಾಡಬೇಕು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಿ ಕೊಡಲಾಗುತ್ತದೆ.

**ಒ) ವಿಷಯ:- ಮುಖ್ಯ ಶಿಕ್ಷಕ ಹುದ್ದೆಗೆ ಹಾಗೂ ಹೈಸ್ಕೂಲ್ ಬಡ್ತಿಗೆ ಈ ಮುಂಚಿನ ನಿಯಮಾವಳಿಯಂತೆ ಅಖಂಡ ಸೇವಾ ಹಿರಿತನವನ್ನು ಪರಿಗಣಿಸುವ ಬಗ್ಗೆ.**

\- - - - -

**ಶ್ರೀ ರಾಮೋಜಿ ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಮಂಡಳಿ ಎನ್‌ಸಿಟಿಇ ಯು 23ನೇ ಆಗಸ್ಟ್ 2010ರಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಶಿಕ್ಷಕರ ನೇಮಕಾತಿಗೆ 1 ರಿಂದ 5 ಮತ್ತು 6 ರೀದ 8 ಕ್ಕೆ ಪ್ರತ್ಯೇಕ ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ. ಇದು ಸ್ವಾಗತಾರ್ಹ. ಆದರೆ ಈ ನಿಯಮವನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಸಿದ ವರ್ಷ 2017. ಜಾರಿಯಾದ ವರ್ಷವನ್ನು ಅಲ್ಲಗಳೆದು, 2016 ಕ್ಕಿಂತ ಮುಂಚೆ 1-7/8 ಕ್ಕೆ ನೇಮಕಗೊಂಡ ಶಿಕ್ಷಕರನ್ನು 2017ರ ನೂತನ ಸಿ & ಆರ್ ನಿಯಮವನ್ನು ಪೂರ್ವಾನ್ವಯಗೊಳಸಿ, ಶಿಕ್ಷಕರ 25-30 ವರ್ಷದ ಸೇವಾವಧಿಯನ್ನೂ ಗೌರವಿಸದೆ, ಸೇವಾನಿರತರ ಅಧ್ಯಯನಶೀಲತೆ ಹಾಗೂ B.A/Bsc/B.Ed/M.A/M.Sc/M.Ed/Ph.D. ನಂತಹ ಪದವಿಗಳನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ ಪಿಎಸ್‌ಟಿ ಎಂಬ ಪದನಾಮ ಮಾಡಿ 1-5 ಕ್ಕೆ ಹಿಂಬಡ್ತಿ ನೀಡಲಾಗಿದೆ. ರಾಜ್ಯದ ಯಾವ ಇಲಾಖೆಯಲ್ಲಿಯೂ ಆಗದ ಹಿಂಬಡ್ತಿ ಶಿಕ್ಷಣ ಇಲಾಖೆಯಲ್ಲಿ ಆಗಿರುವುದು ಅತ್ಯಂತ ವಿಷಾದನೀಯ. ಈ ಅನ್ಯಾಯವನ್ನು ಸರಿಪಡಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕ ಸಂಘ (ರಿ) ಬೆಂಗಳೂರು, ಆಗಸ್ಟ್ 12 ರಂದು ರಾಜ್ಯದ 50,000ಕ್ಕೂ ಅಧಿಕ ಶಿಕ್ಷಕರೊಂದಿಗೆ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಪ್ರತಿಭಟನೆ ಮಾಡಿತ್ತು. ಸೆಪ್ಟೆಂಬರ್ 4 ರಂದು ಮಾನ್ಯ ಮುಖ್ಯಮಂತ್ರಿಗಳು ಈ ಅನ್ಯಾಯವನ್ನು ಸರಿಪಡಿಸಲು ಸುದೀರ್ಘ ಸಭೆ ನಡೆಸಿ ದಿನಾಂಕ 23.9.2024 ರಂದು ಮಾನ್ಯ ಶಿಕ್ಷಣ ಇಲಾಖೆಯ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಿ, ಒಂದು ತಿಂಗಳೊಳಗೆ ವರದಿ ನೀಡಲು ಗಡುವುವಿಧಿಸಿತ್ತು. ಸಮಿತಿ ರಚಿಸಿ 3 ತಿಂಗಳಾದರೂ ಇನ್ನೂ ವರದಿಯನ್ನು ಸರ್ಕಾರಕ್ಕೆ ನೀಡಲಾಗಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಕರಾಗಿ 1-7/8 ಕ್ಕೆ ನೇಮಕಗೊಂಡು 30-35 ವರ್ಷ ಸೇವೆ ಸಲ್ಲಿಸಿ 1-5 ಕ್ಕೆ ಹಿಂಬಡ್ತಿಯಾಗಿ ಸಾವಿರಾರು ಶಿಕ್ಷಕರು ದಿನೇ ದಿನೇ ನಿವೃತ್ತಿ ಹೊಂದುತ್ತಿರುವುದು ಅತ್ಯಂತ ವಿಷಾದನೀಯ. ಸತತ 8 ವರ್ಷಗಳಿಂದ ಜಿಪಿಟಿ ಭಾಗ್ಯವೂ ಸಿಗದೇ, ಹೈ ಸ್ಕೂಲ್ ಬಡ್ತಿ ಭಾಗ್ಯವೂ ಸಿಗದೇ, ಹೆಚ್‌ಎಂ ಬಡ್ತಿ ಭಾಗ್ಯವೂ ಸಿಗದೇ, ವರ್ಗಾವಣೆಯಲ್ಲಿ ಸ್ಥಳವೂ ಸಿಗದೇ, ಪಿಎಸ್‌ಟಿ ಎಂದು ಹಣೆಪಟ್ಟಿ ಕಟ್ಟಿಕೊಂಡು ಹಿಂಬಡ್ತಿಗೊಳಗಾಥಿ ಕಣ್ಣೀರು ಹಾಕುತ್ತಿರುವ ಲಕ್ಷಕ್ಕೂ ಅಧಿಕ ಶಿಕ್ಷಕರ ನೋವನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು.

ಕೂಡಲೇ ಸರ್ಕಾರ ಆಯುಕ್ತರಿಂದ ವರದಿ ತರಿಸಿಕೊಂಡು 1-7/8 ರ ಶಿಕ್ಷಕರನ್ನು 1-5 ಕ್ಕೆ ಹಿಂಬಡ್ತಿ ನೀಡಿದ್ದನ್ನು ಕೂಡಲೇ ಹಿಂಪಡೆಯಬೇಕು. ಪದವಿ ಹೊಂದಿದ ಎಲ್ಲ 58,783 ಶಿಕ್ಷಕರನ್ನು ಪದವೀಧರ ಶಿಕ್ಷಕ (ಜಿಪಿಟಿ)ರೆಂದು ಸೇವಾ ಹಿರಿತನದೊಂದಿಗೆ ಪದನಾಮೀಕರಿಸಬೇಕು. (ಈಗಾಗಲೇ ನೇಮಕಾತಿಗೊಂಡ ಕೇವಲ 22,000 ಜಿಪಿಟಿ ಶಿಕ್ಷಕರ ವೇತನಕ್ಕೆ ಸರ್ಕಾರವು ಪ್ರತಿ ತಿಂಗಳು ಅಂದಾಜು 125 ಕೋಟಿ ಹಣ ಖರ್ಚು ಮಾಡುತ್ತಿದೆ. ಆದರೆ, ಪದವಿ ಹೊಂದಿದ ರಾಜ್ಯದ ಒಟ್ಟು 58,783 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಒಂದು ಇನ್‌ಕ್ರಿಮೆಂಟ್ ನೀಡಿ ಪುನರ್ ಪದನಾಮೀಕರಣ ಮಾಡುವುದರಿಂದ ಸರ್ಕಾರದಕ್ಕೆ ತಿಂಗಳಗೆ ಅಂದಾಜು ಕೇವಲ ರೂ. 10 ಕೋಟಿ 22 ಲಕ್ಷ 82 ಸಾವಿರ ರೂ.ಖರ್ಚಾಗುತ್ತದೆ. ಇದರಿಂದ ನಿಯಮಗಳ ಪಾಲನೆಯ ಜೊತೆಗೆ ಸಹಸ್ರಾರು ಶಿಕ್ಷಕರಿಗೆ ನ್ಯಾಯ ದೊರಕಿಸಿದಂತಾಗುತ್ತದೆ) ಮುಖ್ಯ ಶಿಕ್ಷಕ ಹುದ್ದೆಗೆ ಹಾಗೂ ಹೈಸ್ಕೂಲ್ ಬಡ್ತಿಗೆ ಈ ಮುಂಚಿನ ನಿಯಮಾವಳಿಯಂತೆ ಅಖಂಡ ಸೇವಾ ಹಿರಿತನವನ್ನು ಪರಿಗಣಿಸುವುದರ ಮೂಲಕ ಉಲ್ಲಂಘನೆಯಾಗಿರುವ ನಿಯಮಗಳನ್ನು ಸರಿಪಡಿಸಿ ಶಿಕ್ಷಕರಿಗೆ ನ್ಯಾಯ ಒದಗಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಿಕೊಡಲಾಗುತ್ತದೆ.

**ಓ) ವಿಷಯ:- ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿ ಅಳವಡಿಸಿರುವ ಅನುಭವ ಮಂಟಪ ತೈಲವರ್ಣ ಕಲಾಕೃತಿಯನ್ನು ತೆಗೆದು ಮೂಲ ಕಲಾವಿದರ ಕಲಾಕೃತಿ ಅಳವಡಿಸುವ ಬಗ್ಗೆ.**

- - - - -

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಜಗತ್ತಿನಲ್ಲಿ ಮೇಲು-ಕೀಳು, ಬಡವ-ಬಲ್ಲದನೆಂಬ ತಾರತಮ್ಯವನ್ನು ಹೋಗಲಾಡಿಸಿ ನ್ಯಾಯವನ್ನು ನೀಡುವ ದಾರಿಯನ್ನು ತೋರಿಸಲು 12ನೇ ಶತಮಾನದಲ್ಲಿಯೇ ಅನುಭವ ಮಂಟಪವನ್ನು ಸ್ಥಾಪಿಸುವ ಮುಳಕ ಜಗತ್ತಿನಲ್ಲಿಯೇ ಸಂಸತ್ತಿನ ಮಾದರಿ ಅರಿವನ್ನು ನೀಡಿದ ಜಗಜ್ಯೋತಿ ಬಸವಣ್ಣನವರು ಹಾಗೂ ಅಕ್ಕ ಮಹಾದೇವಿಯವರು ವಿಚಾರ ವಿಮರ್ಶೆಯಲ್ಲಿ ತೊಡಗಿರುವ ಅನುಭವ ಮಂಟಪದ ತೈಲವರ್ಣ ಕಲಾಕೃತಿಯನ್ನು ಬೆಳಗಾವಿಯ ಸುವರ್ಣ ಸೌಧದಲ್ಲಿ ಅಳವಡಿಸಿರುವುದು ಒಳ್ಳೆಯ ಸಂಗತಿ. ಆದರೆ ಈ ಅತ್ಯದ್ಭುತವಾದ ಕಲಾಕೃತಿಯ ಮೂಲ ಕಲಾವಿದರಾದ ಕಲಬುರಗಿ ಜಿಲ್ಲೆಯ ನಾಡೋಜ ಶ್ರೀ ಜೆ.ಎಸ್.ಖಂಡೇರಾವ್ ಅವರನ್ನೇ ಮರೆತು, ಕನಿಷ್ಠ ಪಕ್ಷ ಅವರ ಅನುಮತಿಯನ್ನು ಪಡೆಯದೇ ಹಾಗೂ ಅವರ ಮೂಲ ಕಲಾಕೃತಿಯ ಮಾದರಿಯನ್ನು ನಕಲು ಕಲಾ ಕೃತಿಯನ್ನು ಸುವರ್ಣ ಸೌಧದಲ್ಲಿ ಅಳವಡಿಸಿರುವುದು ಅಪರಾಧ

ಹಾಗೂ ನೋವಿನ ಸಂಗತಿಯಾಗಿದೆ ಹಾಗೂ ಅದರ ಮೂಲ ರೂವಾರಿಗಳಾದ ಶ್ರೀ ಜೆ.ಎಸ್.ಖಂಡೇರಾವ್ ಅವರಿಗೆ ಅವಮಾನ ಮಾಡಿರುವಂತಾಗಿದೆ.

ಈ ಹಿಂದೆ ಸಂಸತ್ ಭವನದ ಆವರಣದಲ್ಲಿ ಬಸವಣ್ಣನ ಮೂರ್ತಿ ಅನಾವರಣ ವೇಳೆ ಅನುಭವ ಮಂಟಪದ ಚಿಕ್ಕ ಕಲಾಕೃತಿಯನ್ನು ಪ್ರದರ್ಶನಕ್ಕೆ ಇರಿಸಲಾಗಿತ್ತು. ಅಂದಿನ ರಾಷ್ಟ್ರಪತಿ ಡಾ:ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಕಲಬುರಗಿಯ ಶರಣಬಸವಪ್ಪ ಅಪ್ಪ ಅವರ ಸಲಹೆಯಂತೆ ದೊಡ್ಡದಾದ ತೈಲವರ್ಣ ಕಲಾಕೃತಿಯನ್ನು ಖಂಡೇರಾವ್ ಅವರು ರಚಿಸಿದ್ದರು. ಮುಂದೆ ಸಂಸತ್‌ನಲ್ಲಿ ಆ ಕಲಾಕೃತಿ ಅಳವಡಿಸುವ ಕಾರ್ಯ ಕೈಗೂಡಲಿಲ್ಲ. ಈಗ ಸುವರ್ಣ ವಿಧಾನಸೌಧದಲ್ಲಿ ಅದೇ ಮಾದರಿಯಲ್ಲಿ ಬೇರೆಯವರು ರಚಿಸಿದ್ದ ನಕಲು ಕಲಾಕೃತಿ ಅಳವಡಿಸಿದ್ದರಿಂದ ಈ ಭಾಗದ ಕಲಾವಿದರಿಗೆ ನೋವಾಗಿದೆ.

ಕಲಾಕೃತಿ ಅಳವಡಿಕೆಗೆ ನಮ್ಮ ವಿರೋಧವಿಲ್ಲ. ಆದರೆ, ಅಳವಡಿಸುವ ಮುನ್ನ ಮೂಲ ಕಲಾವಿದರ ಗಮನಕ್ಕೂ ತರದೆ ನಕಲಿ ಕಲಾಕೃತಿ ಅಳವಡಿಕೆ ಮಾಡಿರುವುದು ಸರಿಯಲ್ಲ. ಈಗ ಅಳವಡಿಸಿರುವ ಕಲಾಕೃತಿಯನ್ನು ಕೂಡಲೇ ತೆಗೆದುಹಾಕಿ ಮೂಲ ಕಲಾವಿದರ ಅನುಮತಿ ಪಡೆದ ಮೂಲ ಅನುಭವ ಮಂಟಪದ ತೈಲವರ್ಣ ಕಲಾಕೃತಿಯನ್ನು ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದು ಈ ಮೂಲಕ ಸರ್ಕಾರವನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಸಚಿವರಿಂದ ಒದಗಿಸಲಾಗುತ್ತದೆ.

(ಮುಂದು)

(1014) 19-12-2024 12.30 ಡಿಎಸ್-ಎಕೆ

**ಔ) ವಿಷಯ:- ಉತ್ತರ ಕನ್ನಡ ಜಿಲ್ಲೆಯ ರೈತರ ಸಮಸ್ಯೆಗಳನ್ನು ಬಗೆಹರಿಸುವಂತೆ ನಡೆಯುತ್ತಿರುವ ಹೋರಾಟದ ಬಗ್ಗೆ.**

- - - -

**ಶ್ರೀ ಶಾಂತಾರಾಮ್ ಬುಡ್ನ ಸಿದ್ಧಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, "ರೈತರ ಸಮಸ್ಯೆ ಬಗೆಹರಿಸದಿದ್ದರೆ ಹೋರಾಟ ಸಮಿತಿ ಎಚ್ಚರಿಕೆ"ಎಂಬ ವಿಷಯವು "ಉದಯವಾಣಿ" ಮತ್ತು ಇನ್ನಿತರ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಉತ್ತರ ಕನ್ನಡ ಜಿಲ್ಲೆಯ ರೈತರ ವಿವಿಧ ಸಮಸ್ಯೆ ಬಗೆಹರಿಸುವಂತೆ ಉತ್ತರ ಕನ್ನಡ ಜಿಲ್ಲಾ ರೈತರ ಹಕ್ಕು ಸಂರಕ್ಷಣಾ ಸಮಿತಿ ವತಿಯಿಂದ ರಸ್ತೆ ತಡೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಈವರೆಗೆ ಯಾವುದೂ ಬಗೆಹರಿದಿಲ್ಲ ಎಂದು ಸಮಿತಿ ಆರೋಪಿಸಿದೆ. ಈ ಕುರಿತು ರೈತರ ಹಕ್ಕು ಸಂರಕ್ಷಣಾ ಸಮಿತಿಯ ಅಧ್ಯಕ್ಷರು ಪತ್ರಿಕಾ ಹೇಳಿಕೆ ನೀಡಿ ಸೊಪ್ಪಿನಬೆಟ್ಟ, ಸ್ಟ್ರೀಪ್ ಹಾಗೂ ಇತರೆ ಪಾರಂಪರಿಕ ಅರಣ್ಯ ಅತಿಕ್ರಮಣದಾರರ ಹಕ್ಕನ್ನು ಸಂರಕ್ಷಿಸಬೇಕು, ಕಾಡು ಪ್ರಾಣಿಗಳಿಂದ ರೈತರ ಬೆಳೆಗಳನ್ನು ರಕ್ಷಿಸುವಂತೆ ರೈತರಿಗೆ ಹಾನಿ ಆದಲ್ಲಿ ತಕ್ಷಣ

ಪರಿಹಾರ ನೀಡುವಂತೆ ಮತ್ತು ಸೊಪ್ಪಿನ ಬೆಟ್ಟದ ಪಹಣಿ ಪತ್ರಿಕೆಯಲ್ಲಿ 'ಬ' ಖರಾಬು ಎಂದು ಮಾಡಿರುವುದನ್ನು ತಿದ್ದುಪಡಿ ಮಾಡಬೇಕೆಂದು ಮನವಿಗಳನ್ನು ಸಲ್ಲಿಸಲಾಗಿತ್ತಾದರೂ ಈವರೆಗೆ ಜಿಲ್ಲೆಯ ಅಧಿಕಾರಿಗಳು ಸ್ಪಂದಿಸದ ಕಾರಣ ಮುಂದಿನ ದಿನಗಳಲ್ಲಿ ರಸ್ತೆ ತಡೆ, ಜಿಲ್ಲಾ ಬಂದ್, ಉಪವಾಸ ಸತ್ಯಾಗ್ರಹ ಇತ್ಯಾದಿ ಹೋರಾಟಗಳನ್ನು ಮುಂದುವರೆಸುವುದು ಅನಿವಾರ್ಯವಾಗಲಿದೆ ಎಂದು ಸಮಿತಿ ತಿಳಿಸಿರುತ್ತದೆ. ಪತ್ರಿಕೆಯಲ್ಲಿ ವರದಿಯಾಗಿರುವ ಸಾರ್ವಜನಿಕ ಮಹತ್ವದ ವಿಷಯ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತಿದ್ದೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಅಂ) ವಿಷಯ:- ನಾಲ್ಕು ತಿಂಗಳಿನಿಂದ ತಾಯಿ, ಮಗುವಿನ ಸುರಕ್ಷತಾ ಕಾರ್ಡ್ ಅಲಭ್ಯ,**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೌನ;**
**ಆರೋಪ-ತಾಯಿ ಕಾರ್ಡ್‌ಗೆ ಪರದಾಟ ಆಗಿರುವ ಬಗ್ಗೆ.**

- - - - -

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. "ನಾಲ್ಕು ತಿಂಗಳಿನಿಂದ ತಾಯಿ, ಮಗುವಿನ ಸುರಕ್ಷತಾ ಕಾರ್ಡ್ ಅಲಭ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೌನ; ಆರೋಪ-ತಾಯಿ ಕಾರ್ಡ್‌ಗೆ ಪರದಾಟ" ಎಂಬ ಶೀರ್ಷಿಕೆಯ ವರದಿಯು ದಿನಾಂಕ 18.12.2024 ರಂದು ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ವಿನಂತಿಸುತ್ತೇನೆ.

ರಾಜ್ಯ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳ ವ್ಯಾಪ್ತಿಯ ಉಪ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳ ಮೂಲಕ ಪೂರೈಕೆಯಾಗಬೇಕಾಗಿದ್ದ ತಾಯಿ ಕಾರ್ಡ್ ನಾಲ್ಕು ತಿಂಗಳುಗಳಿಂದ ಪೂರೈಕೆಯಾಗುತ್ತಿಲ್ಲ ಎಂಬುದರ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೌನವಾಗಿರುವ ಬಗ್ಗೆ ಬಾಣಂತಿಯರು ಅಳಲು ತೋಡಿಕೊಂಡಿರುವ ಸುದ್ದಿ ವರದಿಯಾಗಿದೆ. ಜನನಿ ಸುರಕ್ಷಾ ಯೋಜನೆಯಲ್ಲಿರುವ ಬಡತನ ರೇಖೆಗಿಂತ ಕೆಳಗಿರುವ ಗರ್ಭಿಣಿಯರಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಧನ ಪಡೆಯಲು ತಾಯಿ ಕಾರ್ಡ್ ಸಿಗುತ್ತಿಲ್ಲ. ಹೆರಿಗೆಯಾದ 48 ಗಂಟೆಯೊಳಗೆ ತಾಯಿ ಕಾರ್ಡ್ ಸ್ಲಿಪ್ ತುಂಬಿ ಕೊಡಬೇಕು. ಅದನ್ನು ಕೊಡಲು ಕಾರ್ಡ್ ಇಲ್ಲದೇ ಇರುವುದರಿಂದ ಹೆರಿಗೆಯಾದ ತಾಯಿ ಹಾಗು ನವಜಾತ ಶಿಶುವಿಗೆ ಹಣ ಕೊಡಲು ವೈದ್ಯರು ಹಿಂದೇಟು ಹಾಕುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಯಾದ ತಾಯಿಗೆ 700 ರೂ.ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆ ಮಾಡಿಸಿಕೊಂಡ ತಾಯಿಗೆ 600 ರೂ. ನಿಗದಿ ಮಾಡಿರುತ್ತಾರೆ. ಈ ಸೌಲಭ್ಯ ಪಡೆಯಲು ಈಗ ತಾಯಿ ಕಾರ್ಡ್ ನಮ್ಮ ಬಳಿ ಇಲ್ಲ ಎನ್ನುತ್ತಾರೆ ಬಾಣಂತಿಯರು.

ಜನನಿ ಶಿಶು ಸುರಕ್ಷಾ ಕಾರ್ಯಕ್ರಮದಡಿಯಲ್ಲಿ ತಾಯಿ ಕಾರ್ಡ್ ವಿತರಣೆ ಮಾಡಲಾಗುತ್ತಿತ್ತು. ತಾಯಿ ಕಾರ್ಡ್‌ನಲ್ಲಿ ಗರ್ಭಿಣಿ ಹಾಗೂ ಮಗುವಿನ ಐದು ವರ್ಷ ಆರೋಗ್ಯ ಮಾಹಿತಿಯನ್ನು ಒದಗಿಸುವ ಪ್ರಕ್ರಿಯೆಯಾಗಿತ್ತು.

ಗರ್ಭಿಣಿಯಾದ ಅರಂಭದಿಂದ ಹಿಡಿದು ಹೆರಿಗೆಯಾಗಿ ಮಗುವಿನ ಲಾಲನೆ, ಪಾಲನೆ, ಪೋಷಣೆ ಹೇಗೆ ಮಾಡಬೇಕು, ಪೋಲಿಯೋ ಲಸಿಕೆ, ಮಗುವಿನ ಬೆಳವಣಿಗೆ ಹೇಗೆ ಇರಬೇಕು, ಆಹಾರ ಪದ್ಧತಿ ಹೀಗೆ ನಾನಾ ಮಾಹಿತಿಯನ್ನು ನೀಡಲಾಗುತ್ತಿತ್ತು. ಈ ತಾಯಿ ಕಾರ್ಡ್‌ನಿಂದ ಸಾಕಷ್ಟು ಗರ್ಭಿಣಿಯರಿಗೆ ಉಪಯುಕ್ತವಾಗುತ್ತಿತ್ತು ಎಂದರೆ ತಪ್ಪಾಗಲಾರದು. ಆದರೆ, ಸದ್ಯ ಗರ್ಭಿಣಿಯರಿಗೆ ಕೊಡಲು ತಾಯಿ ಕಾರ್ಡ್ ಲಭ್ಯವಾಗದೇ ಪರದಾಡುವಂತಾಗಿರುವುದು ದೊಡ್ಡ ಆಘಾತವಾಗಿದೆ.

ತಾಯಿ ಕಾರ್ಡ್ ಸಿಗದೇ ಇರುವುದರಿಂದ ಗರ್ಭಿಣಿಯರು ಪ್ರಯಾಸ ಪಡುವಂತಾಗಿದೆ. ಕೆಲ ಮಹಿಳೆಯರು ಆಶಾ ಸಹಾಯಕಿಯರ, ಅಂಗನವಾಡಿ ಕಾರ್ಯಕರ್ತೆಯರ, ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಬಳಿ ಕೇಳಿ ಗೊಂದಲಕ್ಕೆ ಒಳಗಾಗಿದ್ದು, ರಾಜ್ಯದಲ್ಲಿನ ಬಾಣಂತಿಯರಿಗೆ ತಾಯಿ ಕಾರ್ಡ್ ಸೌಲಭ್ಯ ಸಿಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಆರೋಗ್ಯ ಸಚಿವರಿಗೆ ಒತ್ತಾಯಿಸುತ್ತಿದ್ದೇನೆ. ಧನ್ಯವಾದಗಳು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರ ಒದಗಿಸಲಾಗುವುದು.

**4. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು.**

**ಅ) ವಿಷಯ: ಶಾಸಕರ ನಿಧಿಯ ಸಮರ್ಪಕ ಬಳಕೆ ಹಾಗೂ ಪ್ರಗತಿ ಹಂತ ತಿಳಿಯಲು ಪೋರ್ಟಲ್ ರಚಿಸುವ ಬಗ್ಗೆ.**

\- - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಎಂ.ನಾಗರಾಜುರವರು ದಿನಾಂಕ 09.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಆ) ವಿಷಯ:-ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳುವ ಬಗ್ಗೆ.**

\------

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿಯವರು ದಿನಾಂಕ 09.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಇ) ವಿಷಯ:- ತೊಗರಿ ಬೆಳೆಗೆ ಬೇರು ಕೊಳೆ ರೋಗ ಮತ್ತು ಮಚ್ಚೆ ರೋಗ ಹಾಗೂ ಖಾಸಗಿಯವರು ಕಳಪೆ ತೊಗರಿ ಬೀಜ ಮಾರಾಟ ಮಾಡುತ್ತಿರುವುದರಿಂದ ರೈತರು ತೊಂದರೆ ಅನುಭವಿಸುತ್ತಿರುವ ಬಗ್ಗೆ.**

\- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಡಾ॥ ತಳವಾರ್ ಸಾಬಣ್ಣಾ ರವರು ದಿನಾಂಕ 09.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಈ) ವಿಷಯ: ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿನ ಪ್ರವೇಶಾತಿ ನಂತರ ಮಾಡಿರುವ ಶುಲ್ಕ ಪರಿಷ್ಕರಣೆ ಆದೇಶವನ್ನು ಹಿಂಪಡೆಯುವ ಬಗ್ಗೆ.**

------

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಡಾ॥ ಧನಂಜಯ ಸರ್ಜಿ ರವರು ದಿನಾಂಕ 13.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಉ) ವಿಷಯ:- ಆಹಾರ ಸುರಕ್ಷತಾ ಪ್ರಾಧಿಕಾರ ಪ್ರಾರಂಭವಾದ ದಿನದಿಂದಲೂ ಶಾಶ್ವತ ಸಿಬ್ಬಂದಿ ನೇಮಕ ಮಾಡದೆ ಎರವಲು ಸೇವೆಯ ಸಿಬ್ಬಂದಿಯಿಂದ ಆಡಳಿತಾತ್ಮಕ ಸಮಸ್ಯೆ ಆಗಿರುವ ಕುರಿತು,**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀಮತಿ ಉಮಾಶ್ರೀ ರವರು ದಿನಾಂಕ 16.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಊ) ವಿಷಯ:- ಸರ್ಕಾರಿ ಜಾಗಗಳನ್ನು ಮೀಸಲು ಅರಣ್ಯ ಮಾಡಬೇಕೆಂಬ ನಿಟ್ಟಿನಲ್ಲಿ ಸರ್ಕಾರ ಹೊರಡಿಸಿರುವ ಮೂರು ಆದೇಶಗಳನ್ನು ಹಿಂಪಡೆಯುವ ಕುರಿತು.**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) ರವರು ದಿನಾಂಕ 17.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಋ) ವಿಷಯ:- ಪಶ್ಚಿಮಘಟ್ಟ ಪ್ರದೇಶದಲ್ಲಿರುವ ಖಾನಾಪುರ ತಾಲ್ಲೂಕಿನ ಬಹುತೇಕ ಜನರು ಮೂಲಭೂತ ಸೌಕರ್ಯದಿಂದ ವಂಚಿತರಾಗಿರುವ ಕುರಿತು.**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್. ರವರು ದಿನಾಂಕ 17.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಎ) ವಿಷಯ:- ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳದಿರುವ ಬಗ್ಗೆ.**

- - - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಗೋವಿಂದರಾಜು ರವರು ದಿನಾಂಕ 18.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಏ) ವಿಷಯ:- ಬಳ್ಳಾರಿ ಜಿಲ್ಲೆಯಲ್ಲಿರುವ ರಾಬಕೊವಿ ಹಾಲು ಒಕ್ಕೂಟಕ್ಕೆ ಆಡಳಿತ ಮಂಡಳಿ ಅವಧಿಯು ಮೇ-2024ಕ್ಕೆ ಮುಗಿದಿದ್ದು, ಚುನಾವಣೆ ಮೂಲಕ ಹೊಸ ಆಡಳಿತ ಮಂಡಳಿಯನ್ನು ರಚಿಸುವ ಬಗ್ಗೆ.**

- - - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಹಕಾರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ವೈ.ಎಂ.ಸತೀಶ್‌ರವರು ದಿನಾಂಕ 18.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**ಐ) ವಿಷಯ :-“ ಕ್ಷೀರಧಾರೆ ಯೋಜನೆ”ಯಡಿ ಹೈನುಗಾರರಿಗೆ ನೀಡಬೇಕಾಗಿರುವ ಪ್ರೋತ್ಸಾಹಧನ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ.**

- - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಗಳೇ, ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ರವರು ದಿನಾಂಕ 18.12.2024 ರಂದು ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

**೫. ಕಾರ್ಯದರ್ಶಿಯವರ ವರದಿ**

**"ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 ನ್ನು ಸಭೆಯ ಮುಂದಿಡುವುದು."**

**- - - - -**

**ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 ನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

**6. ಶಾಸನ ರಚನೆ**

**ವಿಧೇಯಕದ ಪರ್ಯಾಲೋಚನೆ**

**ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ನೇ ಸಾಲಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**(ಗೊಂದಲ)**

**7. ಸಂಸತ್ತಿನಲ್ಲಿ ಕೇಂದ್ರ ಸಚಿವರು ಡಾ: ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಆಡಿದ್ದಾರೆನ್ನಲಾದ ಮಾತುಗಳ ಬಗ್ಗೆ ಪ್ರಸ್ತಾಪ.**

- - - -

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರು ಪ್ರಶ್ನೋತ್ತರ ವೇಳೆಯಾದ ಮೇಲೆ ಡಾ॥ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದರು.

**ವೈಸ್ ಛೇರ್ಮನ್:-** ವಿಧೇಯಕದ ನಂತರ ಅವಕಾಶ ಕೊಡುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಡಾ: ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಭಾವಚಿತ್ರಗಳನ್ನು ಸದನದಲ್ಲಿ ಪ್ರದರ್ಶಿಸುತ್ತಾ ಘೋಷಣೆಗಳನ್ನು ಕೂಗಲು ಪ್ರಾರಂಭಿಸಿದರು)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದವರು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್‌ರವರನ್ನು ಬದುಕಿದ್ದಾಗಲೂ ವಿರೋಧ ಮಾಡಿದರು, ಸತ್ತಾಗಲೂ ವಿರೋಧ ಮಾಡಿದರು.

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**(ಗೊಂದಲ)**

**ಸಭಾಪತಿಯವರು:- (ತಮ್ಮ ಪೀಠದಲ್ಲಿ ಎದ್ದು ನಿಂತು):-** ನಾನು ಹೇಳುತ್ತೇನೆ, ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಡಾ॥ ಬಿ.ಆರ್.ಅಂಬೇಡ್ಕರವರಿಗೆ ಅಪಮಾನ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ ಧಿಕ್ಕಾರ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಸಭಾಪತಿಯವರು:-** ಈಗ ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಲಾಗಿದೆ.

**(ಸದನವು ಅಪರಾಹ್ನ 12 ಗಂಟೆ 38 ನಿಮಿಷಕ್ಕೆ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

**(1015) 19/12/2024 12:40 ಎಸ್‌ಪಿಆರ್/ಆರ್‌ಎನ್**

**(ಅಪರಾಹ್ನ 12 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಅಪರಾಹ್ನ 12 ಗಂಟೆ 46 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**(ಸದನ ಸಮಾವೇಶಗೊಳ್ಳುತ್ತಿದ್ದಂತೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಪರಸ್ಪರ ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು (ತಮ್ಮ ಸ್ಥಾನದಲ್ಲಿ ನಿಂತುಕೊಂಡು):-** ಎಲ್ಲರೂ ಕುಳಿತುಕೊಳ್ಳಿ. ನಾನು ನಿಂತಾಗ ಸದಸ್ಯರುಗಳೆಲ್ಲರೂ ಕುಳಿತುಕೊಳ್ಳಬೇಕು. ಹೀಗಾಗಿ ಎಲ್ಲಾ ಸದಸ್ಯರುಗಳು ದಯಮಾಡಿ ಕುಳಿತುಕೊಳ್ಳಬೇಕು. ಈಗಾಗಲೇ ಶಾಸನ ರಚನೆಯ ಕಾರ್ಯಕಲಾಪವನ್ನು ತೆಗೆದುಕೊಂಡಿದ್ದು, ಸಚಿವರು ವಿಧೇಯಕವನ್ನು ಮಂಡಿಸಿದ್ದಾರೆ. ವಿಧೇಯಕ ಅನುಮೋದನೆಯಾದ ನಂತರ ನಾನು ನಿಮಗೆಲ್ಲಾ ಮಾತನಾಡಲು ಅವಕಾಶವನ್ನು ನೀಡುತ್ತೇನೆ.

**(ಗೊಂದಲ)**

**8. ಸಂಸತ್ತಿನಲ್ಲಿ ಕೇಂದ್ರ ಸಚಿವರು ಡಾ: ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಆಡಿದ್ದಾರೆನ್ನಲಾದ ಮಾತುಗಳ ಬಗ್ಗೆ ಮುಂದುವರೆದ ಪ್ರಸ್ತಾಪ**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೆ, ಡಾ॥ ಬಿ.ಆರ್.ಅಂಬೇಡ್ಕರ್‌ರವರ ವಿರುದ್ಧ ಹೇಳಿಕೆಯನ್ನು ಕೊಟ್ಟಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ನಾನು ಹೇಳುವುದನ್ನು ಕೇಳಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಡಾ॥.ಅಂಬೇಡ್ಕರ್‌ರವರನ್ನು ಅವಮಾನಿಸಿದ್ದಾರೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ಡಾ॥ ಬಿ.ಆರ್.ಅಂಬೇಡ್ಕರ್‌ರವರನ್ನು ಅವಮಾನ ಮಾಡಿದ ಕಾಂಗ್ರೆಸ್ ಪಕ್ಷಕ್ಕೆ....,

**(ಗೊಂದಲ)**

**9. ಶಾಸನ ರಚನೆ**

**ವಿಧೇಯಕದ ಅಂಗೀಕಾರ**

**ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024**

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ರೀತಿಯೇ ಮೈಸೂರು ಅಭಿವೃದ್ಧಿ ಪ್ರಾಧಿಕಾರವನ್ನು ನಾನು ...

**(ಗೊಂದಲ)**

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅಮಿತ್ ಷಾ ರವರು ಅಂಬೇಡ್ಕರ್‌ರವರನ್ನು ಅವಮಾನಿಸಿಲ್ಲ. ಅಮಿತ್ ಷಾ ರವರು ಕಾಂಗ್ರೆಸ್ಸಿಗೆ.... **(ಗೊಂದಲ)** ಅವರು ನಿಮ್ಮ ಹುಳುಕುಗಳನ್ನೆಲ್ಲಾ ಹೇಳಿದರು. ಅದಕ್ಕೆ ನಿಮಗೆ ಅಪಮಾನವಾಗಿ, ಅಂಬೇಡ್ಕರ್ ಅವರನ್ನು ...

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಡಾ॥ ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರ ಹಾಗೂ ಭಿತ್ತಿಪತ್ರಗಳನ್ನು ಸದನದಲ್ಲಿ ಪ್ರದರ್ಶಿಸುತ್ತಿದ್ದರು)**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, "2024 ರ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 87 ರ ವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 87 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 87 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**(ಗೊಂದಲ)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೆ, 2024 ರ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ "2024 ರ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು"

**"ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು"**

**(ಗೊಂದಲ)**

**(ಮುಂದು)**

**1016/19-12-2024/12-50/bkp-rn** **(ಸಭಾಪತಿಯವರ ಉಪಸ್ಥಿತಿ)**

**10. ಸಂಸತ್ತಿನಲ್ಲಿ ಕೇಂದ್ರ ಸಚಿವರು ಡಾ:ಬಿ.ಆರ್.ಅಂಬೇಡ್ಕರ್‌ರವರ ಬಗ್ಗೆ ಆಡಿದ್ದಾರೆನ್ನಲಾದ ಮಾತುಗಳ ಬಗ್ಗೆ ಮುಂದುವರೆದ ಪ್ರಸ್ತಾಪ.**

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮತ್ತು ವಿರೋಧ ಪಕ್ಷದ ಸದಸ್ಯರುಗಳು ಭಿತ್ತಿಪತ್ರಗಳನ್ನು ಹಿಡಿದು ಪರಸ್ಪರ ಧಿಕ್ಕಾರ ಮತ್ತು ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು (ತಮ್ಮ ಸ್ಥಾನದಲ್ಲಿ ಎದ್ದುನಿಂತು):-** ಎಲ್ಲರೂ ಕುಳಿತುಕೊಳ್ಳಿ, ಸಭಾಪತಿ ಪೀಠದಿಂದ ಎದ್ದು ನಿಂತಾಗ ಕುಳಿತುಕೊಳ್ಳುವುದು ಪ್ರತಿಯೊಬ್ಬ ಸದಸ್ಯನ ಧರ್ಮ. ಈಗ ನಾನು ಈ ವಿಧೇಯಕದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಅನುಮತಿಯನ್ನು ಕೊಡಬೇಕೆಂದು ಇಚ್ಛೆ ಮಾಡಿದ್ದೆ. ಆದರೆ, ಈ ವಿಷಯ ಸದನದಲ್ಲಿ ಪ್ರಸ್ತಾಪ ಮಾಡಲು ಬರುವುದಿಲ್ಲವೆನ್ನುವಂತಹ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಏಕೆಂದರೆ, ಯಾರು ಈ ಬಗ್ಗೆ ಮಾತನಾಡಿದ್ದಾರೆ, ಅವರು ಈ ಸದನದಲ್ಲಿ ಬಂದು defend ಮಾಡಿಕೊಳ್ಳಲಿಕ್ಕೆ ಬರುವುದಿಲ್ಲ. ಸಂಸತ್ತಿನಲ್ಲಿ ಕೇಂದ್ರ ಗೃಹ ಸಚಿವರು ಮಾತನಾಡಿದ ವಿಚಾರವೆಂದು ಹೇಳುತ್ತಿದ್ದೀರಿ. ಆದ್ದರಿಂದ ಕೇಂದ್ರದ ಗೃಹ ಸಚಿವರು ಇಲ್ಲಿ ಬಂದು ಸಮರ್ಥನೆ ಮಾಡಿಕೊಂಡು ಮಾತನಾಡಲಿಕ್ಕೆ ಆಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಚರ್ಚೆ ಬೇಡ. ನಾನು ಮುಂದಿನ ಕಾರ್ಯಕಲಾಪಗಳಿಗೆ ಹೋಗುತ್ತೇನೆ. ದಯವಿಟ್ಟು ಎಲ್ಲರೂ ಸಹಕರಿಸಬೇಕು.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಂವಿಧಾನ ವಿರೋಧಿಯಾಗಿ ಕೇಂದ್ರ ಗೃಹ ಸಚಿವರು ಮಾತನಾಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ...

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮತ್ತು ವಿರೋಧ ಪಕ್ಷದ ಸದಸ್ಯರುಗಳು ಭಿತ್ತಿಪತ್ರಗಳನ್ನಿಡಿದು ಪರಸ್ಪರ ಧಿಕ್ಕಾರ ಮತ್ತು ಘೋಷಣೆಗಳನ್ನು ಕೂಗುತ್ತಿದ್ದರು)**

**ಸಭಾಪತಿಯವರು:-** ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 12 ಗಂಟೆ 53 ನಿಮಿಷದಿಂದ 10 ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು)**

**(1017) 19.12.2024 05.20 ಎಸ್‌ವಿ-ಬಿಎನ್‌ಎಸ್**

**(ಸದನವು ಪುನಃ ಸಂಜೆ 05 ಗಂಟೆ 28 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಾದರು)**

**11. ಮುಂದೂಡಲಾದ ಸದನ ಪುನಃ ಸಮಾವೇಶಗೊಳ್ಳುವ ಪೂರ್ವದಲ್ಲಿ ಸದನದೊಳಗೆ ನಡೆದಿದೆ ಎನ್ನಲಾದ ಘಟನೆಯ ಬಗ್ಗೆ ಸಭಾಪತಿಯವರ ತೀರ್ಪು.**

**ಸಭಾಪತಿಯವರು:-** ಸದನವು ಮುಂದೂಡಿದಾಗ ಸದನದಲ್ಲಿ ನಡೆದ ಒಂದು ಘಟನೆಯ ಬಗ್ಗೆ ನನಗೆ ಎರಡೂ ಕಡೆಗಳಿಂದ ದೂರು ಬಂದಿದೆ. ಸದನವನ್ನು ಮಧ್ಯಾಹ್ನ 12 ಗಂಟೆ 52 ನಿಮಿಷಗಳಿಗೆ ಮುಂದೂಡಿದ ತರುವಾಯ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ಪ್ರತಿಭಟನೆಯನ್ನು ಮುಂದುವರೆಸುತ್ತಿದ್ದರು. ತದನಂತರ ಮಧ್ಯಾಹ್ನ 01 ಗಂಟೆಯ ಸುಮಾರಿಗೆ ಮಾನ್ಯ ಶಾಸಕರಾದ ಸಿ.ಟಿ.ರವಿಯವರು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಉದ್ದೇಶಿಸಿ ಅಶ್ಲೀಲ ರೀತಿಯೊಳಗೆ "ನೀನು ಪ್ರಾಸ್ಟಿಟ್ಯೂಟ್" ಎಂದು ಅವಮಾನಕರವಾಗಿ ಹೇಳುತ್ತಾ, ಅಸಹ್ಯಕರವಾಗಿ ಕೈ ಮಾಡುತ್ತಾ ಹೇಳುವುದಲ್ಲದೆ ಮಹಿಳೆಯಾದ ನನ್ನ ಮಾನವನ್ನು ಕಳೆಯುವ ಕೃತ್ಯ ಮಾಡಿದ್ದಾರೆಂದು ಆರೋಪಿಸಿ ಲಿಖಿತ ದೂರನ್ನು ನನಗೆ ಸಲ್ಲಿಸಿರುತ್ತಾರೆ.

ಎಂ.ಎನ್.ಕೌಲ್ ಮತ್ತು ಎಸ್.ಎಲ್. ಶಕ್ದರ್ ಅವರ ಸಂಸದೀಯ ಪದ್ಧತಿ ಮತ್ತು ಪ್ರಕ್ರಿಯೆಯನ್ವಯ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

> **"ಸಂಸದೀಯ ಬದುಕಿನ ಅತ್ಯುನ್ನತ ಸಂಪ್ರದಾಯವನ್ನು ಕಾಪಾಡಿಕೊಂಡು ಬರುವಂತಾಗಿದ್ದು, ಸದನದ ಘನತೆಗೆ ಕುಂದುಂಟು ಮಾಡುವಂತಾಗಿರಬಾರದು. ಸದಸ್ಯರ ದುರ್ನಡತೆಗಾಗಿ ಅವರನ್ನು ಶಿಕ್ಷಿಸುವ ಅಧಿಕಾರ ಸದನಕ್ಕೆ ಇದೆ. ತನ್ನ ಸದಸ್ಯರ ನಡತೆಗಾಗಿ ಸದನದ ಒಳಗೆ ಅಥವಾ ಹೊರಗೆ ಆಗಿರಲಿ ಅವರನ್ನು ಕುರಿತು ಸೂಕ್ಷ್ಮವಾಗಿ ಪರಿಶೀಲನೆ ಮಾಡಲು ತನಗಿರುವ ಅಧಿಕಾರ ವ್ಯಾಪ್ತಿಯನ್ನು ಸದನವು ಚಲಾಯಿಸುತ್ತದೆ.**
>
> **ಒಬ್ಬ ಸದಸ್ಯರು ಅನುಚಿತವಾದ ರೀತಿಯಲ್ಲಿ ವರ್ತಿಸಿದ್ದಾರೆಯೇ ಅಥವಾ ಸಂಸತ್ ಸದಸ್ಯರಿಗೆ ತಕ್ಕದಲ್ಲದ ರೀತಿಯಲ್ಲಿ ವರ್ತಿಸಿದ್ದಾರೆಯೇ ಎಂಬುದನ್ನು ನಿರ್ಧರಿಸುವುದು ಸದನದ ಅಧಿಕಾರ ವ್ಯಾಪ್ತಿಯೊಳಗೆ ಬರುವಂಥದ್ದಾಗಿದೆ.**

**(ಮುಂದು)**

**(1018) ದಿನಾಂಕ 19-12-2024 5.30 ಕೆಜಿ.ಬಿಎನ್‌ಎಸ್**

**ಸಭಾಪತಿಯವರು (ಮುಂದು):**

**ಒಬ್ಬ ಸದಸ್ಯನು ಅವನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಎಂದರೆ ಸದನದಲ್ಲಿರುವಾಗ ಅಥವಾ ಸದನದಿಂದ ಹೊರಗೆ ಹೋಗುತ್ತಿರುವಾಗ ಸದನದ ಆವರಣದೊಳಗೆ ಸದಸ್ಯರ ವಿರುದ್ಧ ಅಪಮಾನಕರವಾದ ಅಥವಾ ಬೈಗುಳ ಭಾಷೆಯನ್ನು ಬಳಸುವುದು ಹೀಗೆಯೇ ಒಬ್ಬ ಸದಸ್ಯನು ಸಂಸತ್ತಿನಲ್ಲಿನ ಅವರ ನಡವಳಿಕೆಗಾಗಿ ಅಪಮಾನ ಮಾಡುವುದು ವಿಶೇಷಾಧಿಕಾರದ ಉಲ್ಲಂಘನೆ ವ್ಯಾಪ್ತಿಗೆ ಬರುತ್ತದೆ"**

– ಎಂದು ಎಂ.ಎನ್.ಕೌಲ್ ಮತ್ತು ಎಸ್.ಎಲ್.ಶಕ್ದರ್‌ರವರ ಸಂಸದೀಯ ಪದ್ಧತಿ ಮತ್ತು ಪ್ರಕ್ರಿಯೆಗಳ ಪುಸ್ತಕದಲ್ಲಿ ಹೇಳಲಾಗಿದೆ.

ಮೇಲ್ಕಂಡ ದೂರಿನಲ್ಲಿರುವ ಅಂಶಗಳ ಮೇರೆಗೆ ಸದನದ ವ್ಯಾಪ್ತಿಗೆ ಒಳಪಡುವ ವಿದ್ಯುನ್ಮಾನಗಳ ಆಧಾರಿತ ಸಾಕ್ಷಿಗಳನ್ನು ಪರಿಶೀಲಿಸಿಕೊಂಡಿರುತ್ತೇನೆ. ಈ ಘಟನೆಗೆ ಸಾಕ್ಷಿಯಾಗಿ ಶಾಸಕರಾದ ಶ್ರೀಮತಿ ಉಮಾಶ್ರೀ, ಶ್ರೀಮತಿ ಬಲ್ಕೀಸ್ ಬಾನು, ಡಾ॥ ಯತೀಂದ್ರ. ಎಸ್ ಹಾಗೂ ಶ್ರೀ ಎಂ.ನಾಗರಾಜು ಅವರುಗಳು ಮೌಖಿಕವಾಗಿ ಸಾಕ್ಷಿಯನ್ನು ನೀಡಿರುತ್ತಾರೆ.

ಮಾನ್ಯ ಶಾಸಕರಾದ ಶ್ರೀ ಸಿ.ಟಿ.ರವಿ ಅವರಿಗೆ ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್‌ರವರು ನೀಡಿರುವ ಲಿಖಿತ ದೂರಿನಲ್ಲಿರುವ ಅಂಶಗಳನ್ನು ಓದಿ ತಿಳಿಸಲಾಯಿತು. ತದನಂತರ ಅವರು ಈ ಕೆಳಕಂಡ ಹೇಳಿಕೆಯನ್ನು ನೀಡಿರುತ್ತಾರೆ.

"ಸದನದಲ್ಲಿ ಡಾ॥ ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಹಾಗೂ ಅವರನ್ನು ಸೋಲಿಸಿದ್ದು ಕಾಂಗ್ರೆಸ್ ಎಂಬ Placard ನ್ನು ಕೈಯಲ್ಲಿ ಹಿಡಿದು ಅವರು ಬದುಕಿದ್ದಾಗ, ಸತ್ತಾಗ ಅಪಮಾನ ಮಾಡಿದ್ದು ಕಾಂಗ್ರೆಸ್ ಪಕ್ಷ, ನೀವು Frustrate ಆಗಿದ್ದೀರಿ. ನೀವು Frustrate ಆಗಿದ್ದೀರಿ, ಹತಾಶೆ ಆಗಿದ್ದೀರಿ ಅದಕ್ಕೆ ಸುಳ್ಳು ಆರೋಪ ಮಾಡುತ್ತಿದ್ದೀರಿ ಎಂಬ ಮಾತನ್ನು ಹೇಳಿದ್ದೇನೆಯೆ ಹೊರತು ಆ ದೂರಿನಲ್ಲಿರುವ ಪದಗಳನ್ನು ಬಳಸಿಲ್ಲ ಎಂಬುದು ನನ್ನ ಸ್ಪಷ್ಟ ಹೇಳಿಕೆ" ಎಂದು ಅವರು ತಿಳಿಸಿರುತ್ತಾರೆ.

ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್‌ರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಇವರಿಗೆ ಶಾಸಕರಾದ ಶ್ರೀ ಸಿ.ಟಿ.ರವಿ ಅವರು ನೀಡಿದ ಹೇಳಿಕೆಯನ್ನು ಓದಿ ತಿಳಿಸಲಾಯಿತು. ಅವರ ಹೇಳಿಕೆಯನ್ನು ಆಲಿಸಿದ ಮಾನ್ಯ ಸಚಿವರು "ನಾನು ನನ್ನ ದೂರಿನಲ್ಲಿರುವ ವಿಷಯ/ಆರೋಪಗಳಿಗೆ ಬದ್ಧಳಾಗಿದ್ದೇನೆ " ಎಂದು ತಿಳಿಸಿರುತ್ತಾರೆ.

ಸಂವಿಧಾನಿಕವಾಗಿ ಪವಿತ್ರವಾದ ಈ ಸಭಾಂಗಣದಲ್ಲಿ ಎಂದೂ ಮಹಿಳೆಯರನ್ನು ಗೌರವಿಸಲಾಗಿದೆಯೇ ಹೊರತು ಇಂತಹ ಅನುಚಿತ ಪದಗಳು ಹಾಗೂ ಮಹಿಳೆಯರ ಗೌರವಕ್ಕೆ ಧಕ್ಕೆ ತರುವಂತಹ ಅವಹೇಳನಕಾರಿ ಪದಗಳನ್ನು ಯಾವ ಸದಸ್ಯರುಗಳು ಬಳಸಿರುವುದನ್ನು ನಾನು ನನ್ನ ಅಪಾರ ಹಾಗೂ ಸುದೀರ್ಘವಾದ ಅವಧಿಯಲ್ಲಿ ಎಂದೂ ಕಂಡಿರುವುದಿಲ್ಲ ಹಾಗೂ ಕೇಳಿರುವುದಿಲ್ಲ. ಈ ಸದನದ ಹಿರಿಯ ಸದಸ್ಯನಾಗಿಯೂ ಹಾಗೂ

ಸಭಾಪತಿಯಾಗಿಯೂ ನಾನು ಒಬ್ಬ ಮಹಿಳಾ ಸಚಿವರನ್ನು ಕುರಿತು ಶ್ರೀ ಸಿ.ಟಿ.ರವಿ ಅವರು ಹೇಳಿದ್ದಾರೆ ಎನ್ನಲಾದ ಪದಗಳು ನನ್ನ ದೃಷ್ಟಿಯಲ್ಲಿ ಗೌರವ ತರುವಂಥದ್ದಲ್ಲ.

ಯಾವುದೇ ಮಹಿಳೆಯು ತನ್ನ ಕುರಿತಾಗಿ ವಿನಾಕಾರಣ ಸಾರ್ವಜನಿಕವಾಗಿ ಅಗೌರವಿಸಿಕೊಳ್ಳುವಂತಹ ಮಾತುಗಳನ್ನು ಆಡಿದ್ದಾರೆ ಎಂದು ದೂರನ್ನು ನೀಡುವುದಿಲ್ಲ ಎಂದು ನನ್ನ ನಂಬಿಕೆ.

ಆಪಾದನೆಗೆ ಒಳಗಾದವರು ಆಪಾದನೆ ಮಾಡಿರುವವರು ಈ ವಿಷಯದ ಸತ್ಯಾಸತ್ಯತೆಯನ್ನು ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಜವಾಬ್ದಾರಿ ಸ್ಥಾನದಲ್ಲಿ ಹಾಗೂ ಸಾರ್ವಜನಿಕ ಜೀವನದಲ್ಲಿರುವ ನಾವುಗಳು ಇತರರಿಗೆ ಮಾದರಿಯಾಗಿರುವಂತೆ ನಡೆದುಕೊಳ್ಳಬೇಕೆಂಬುದು ನನ್ನ ಅಭಿಲಾಷೆ. ಇದನ್ನು ಎಲ್ಲಾ ಗೌರವಾನ್ವಿತ ಶಾಸಕರುಗಳು ತಿಳಿದುಕೊಳ್ಳಬೇಕೆಂಬ ನನ್ನ ಕಳಕಳಿಯ ಮನವಿಯನ್ನು ತಾವು ಅರ್ಥ ಮಾಡಿಕೊಳ್ಳುತ್ತೀರಿ ಎಂದು ಭಾವಿಸುತ್ತೇನೆ.

ಸದನದ ಸಾರಾಂಶವನ್ನು ದಾಖಲೆಗೆ ದಾಖಲಿಸಿಕೊಳ್ಳುವುದಕ್ಕೆ ನಿರ್ದೇಶನವನ್ನು ನೀಡಲಾಗಿದೆ.

## 12. ಸಾರಾಂಶ

**ಸಭಾಪತಿಯವರು:-** ವಿಧಾನ ಪರಿಷತ್ತಿನ 154ನೇ ಅಧಿವೇಶನದ ಉಪವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ 9-12-2024 ರಿಂದ 19-12-2024ರವರೆಗೆ ಒಟ್ಟು 8 ದಿವಸಗಳು ಅಂದರೆ, 51 ಗಂಟೆ 15 ನಿಮಿಷ ನಡೆಸಲಾಗಿರುತ್ತದೆ.

ಪ್ರತಿ ಅಧಿವೇಶನದ ಪ್ರಾರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಎಲ್ಲಾ ಮಾನ್ಯ ಶಾಸಕರುಗಳು ಓದಬೇಕೆಂದು ನಿರ್ಣಯಿಸಲಾಗಿರುವ ರೀತ್ಯಾ, ಪ್ರಸ್ತುತ ಅಧಿವೇಶನದ ಮೊದಲ ದಿನದ ಉಪವೇಶನದಲ್ಲಿ ಎಲ್ಲಾ ಮಾನ್ಯ ಶಾಸಕರುಗಳಿಂದ ಸಂವಿಧಾನದ ಪೀಠಿಕೆಯನ್ನು ಪಠಣ ಮಾಡಲಾಯಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಒಟ್ಟು 14 ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಕಾರ್ಯದರ್ಶಿಯವರು ಮಂಡಿಸಿದರು.

2024-25ನೇ ಸಾಲಿನ ಪೂರಕ ಅಂದಾಜುಗಳ (ಎರಡನೇ ಕಂತು), ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿಗಳನ್ನು ಹಾಗೂ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ 1 ಹಾಗೂ 2 ಪಟ್ಟಿಗಳನ್ನು ಮಂಡಿಸಲಾಯಿತು.

ಭಾರತ ಸಂವಿಧಾನದ 151(2) ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ 2023-24ನೇ ಸಾಲಿನ ಧನವಿನಿಯೋಗ ಲೆಕ್ಕಗಳು ಮತ್ತು ಹಣಕಾಸಿನ ಲೆಕ್ಕಗಳು (ಸಂಪುಟ 1 ಮತ್ತು 2), ಮಾರ್ಚ್-2022 ಕ್ಕೆ ಕೊನೆಗೊಂಡ ವರ್ಷದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸರಬರಾಜು ನಿರ್ವಹಣೆ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿ (2024ರ ವರದಿ ಸಂಖ್ಯೆ:5), ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಕಾರ್ಯವೈಖರಿಯ ವರದಿ (2024ರ ವರದಿ ಸಂಖ್ಯೆ:6), ಮಾರ್ಚ್ 2022ಕ್ಕೆ ಕೊನೆಗೊಂಡ ವರ್ಷಕ್ಕೆ (ಅನುಸರಣಾ ಲೆಕ್ಕಪರಿಶೋಧನೆ-ಸಿವಿಲ್) (2024ರ ವರದಿ ಸಂಖ್ಯೆ:7), ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಸೇವೆಗಳ ನಿರ್ವಹಣೆ ವರದಿ (2024ರ ವರದಿ ಸಂಖ್ಯೆ:8), ಕರ್ನಾಟಕದಲ್ಲಿನ ರಾಜ್ಯ ಸಂರಕ್ಷಿತ ಐತಿಹಾಸಿಕ ಪುರಾತತ್ವ ಸ್ಮಾರಕಗಳು ಮತ್ತು ಪ್ರಾಚೀನ ಅವಶೇಷಗಳ ಸಂರಕ್ಷಣೆಯ ಮೇಲಿನ ವರದಿ (2024ರ ವರದಿ ಸಂಖ್ಯೆ:9), 73ನೇ ಸಾಂವಿಧಾನಿಕ ತಿದ್ದುಪಡಿ ಕಾಯ್ದೆಯ ಅನುಷ್ಠಾನದ ಕಾರ್ಯನಿರ್ವಹಣಾ ವರದಿ (2024ರ ವರದಿ ಸಂಖ್ಯೆ:10) ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕಾರ್ಯನಿರ್ವಹಣೆಯ ಕಾರ್ಯಕ್ಷಮತೆಯ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸಲಾಯಿತು.

ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಮೊದಲನೆಯ ವರದಿ, ಸಾರ್ವಜನಿಕ ಉದ್ಯಮಗಳ ಸಮಿತಿಯ 137ನೇ ಮತ್ತು 138ನೇ ವರದಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 38ನೇ ವರದಿ, ವಿಧಾನಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ 39, 40, 41 ಹಾಗೂ 42ನೇ ವರದಿಗಳನ್ನು ಒಪ್ಪಿಸಲಾಯಿತು.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಮಾನ್ಯ ಶಾಸಕರುಗಳನ್ನು ಚುನಾಯಿಸುವ ಬದಲು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ರಾಜ್ಯದ ವಿವಿಧ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರಗಳ ಸಂಬಂಧ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ರಚಿಸಲಾಗಿರುವ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ದಿನಾಂಕ 22.10.2024 ರಿಂದ 06 ತಿಂಗಳುಗಳ ಕಾಲಾವಕಾಶವನ್ನು ಸದನದ ಸಹಮತಿಯನ್ನು ಕಾಯ್ದಿರಿಸಿ ವಿಸ್ತರಿಸಲಾಗಿರುವ ಪ್ರಸ್ತಾವನೆಗೆ ಸದನದ ಸಹಮತಿಯನ್ನು ಪಡೆಯಲಾಯಿತು.

"ಬೆಳಗಾವಿಯಲ್ಲಿ 1924ರಲ್ಲಿ ನಡೆದ 39ನೇ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಂಭ್ರಮದಲ್ಲಿ ಆಚರಿಸಲು ಯೋಜಿಸಲಾಗಿದೆ. ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿಯೇ ವಿಶೇಷವಾದ

ಅಧಿವೇಶನ ಎಂಬ ಹೆಗ್ಗಳಿಕೆಗೂ ಈ ಬೆಳಗಾವಿ ಅಧಿವೇಶನ ಪಾತ್ರವಾಗಿದೆ. ಇದಕ್ಕೆ ಕಾರಣ ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಅಧಿವೇಶನ ಇದು. ಅಲ್ಲದೆ ನಮ್ಮ ರಾಜ್ಯದಲ್ಲಿ ನಡೆದ ಏಕೈಕ ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್ ಅಧಿವೇಶನ ಕೂಡ ಹೌದು. ಹಿಂದೂ-ಮುಸ್ಲಿಂ ಸೌಹಾರ್ದತೆಯನ್ನು ಸಾರಿ ಏಕತೆಯಿಂದ ಅಖಂಡ ಭಾರತದಾದ್ಯಂತ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಹೆಚ್ಚಿಸಿದ, 'ಗಾಂಧಿ' ಎನ್ನುವ ಬಿಂಬ ಸಾವಿರ ಕಣ್ಣುಗಳಲ್ಲಿ ಸಾವಿರ ತೆರನಾಗಿ ರೂಪಗೊಳ್ಳಲು ಕಾರಣವಾದ ವೇದಿಕೆ ಇದಾಗಿತ್ತು" ಎಂಬ ಅಧಿಕೃತ ನಿರ್ಣಯವನ್ನು ಸದನದಲ್ಲಿ ಮಂಡಿಸಿ ಅಂಗೀಕರಿಸಲಾಗಿರುತ್ತದೆ.

ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು 5 ಗಂಟೆ 43 ನಿಮಿಷಗಳ ಕಾಲ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದ ಅಧ್ಯಕ್ಷತೆ ವಹಿಸಿ ನೂರು ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ಅವರ ಕುರಿತು 4 ಗಂಟೆ 25 ನಿಮಿಷ ಕಾಲ ಹಾಗೂ ಮಕ್ಕಳಲ್ಲಿ ಪೌಷ್ಟಿಕಾಂಶ ಕೊರತೆ, ಶಿಕ್ಷಣ ಮತ್ತು ಹದಿ ಹರೆಯದ ಮಕ್ಕಳು ಅನುಭವಿಸುತ್ತಿರುವ ಸವಾಲುಗಳು ಹಾಗೂ ಪರಿಹಾರೋಪಾಯಗಳ ಕುರಿತು 45 ನಿಮಿಷಗಳ ಕಾಲ ವಿಶೇಷ ಚರ್ಚೆಯಾಗಿರುತ್ತದೆ.

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಬಾಣಂತಿಯರ ಸಾವಿನ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಹೇಳಿಕೆ ನೀಡಿದರು.

ನಿಯಮ 59 ರಡಿಯಲ್ಲಿ ಒಟ್ಟು 06 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ 1 ನಿಯಮ 68ಕ್ಕೆ, 2 ನಿಯಮ 72ಕ್ಕೆ ಪರಿವರ್ತನೆಗೊಂಡು ಸದನದಲ್ಲಿ ಉತ್ತರಿಸಲಾಗಿರುತ್ತದೆ ಹಾಗೂ 1 ನಿಯಮ 330ಕ್ಕೆ ಪರಿವರ್ತಿಸಲಾಗಿದೆ. 2 ತಿರಸ್ಕೃತಗೊಂಡಿರುತ್ತವೆ.

ನಿಯಮ 68ರಡಿಯಲ್ಲಿ 4 ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ ಸೂಚನೆಗಳು ಅನುಮೋದನೆಗೊಂಡು 2 ತಿರಸ್ಕೃತಗೊಂಡಿರುತ್ತವೆ.

ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 1397 ಪ್ರಶ್ನೆಗಳನ್ನು ಸ್ವೀಕರಿಸಲಾಗಿರುತ್ತದೆ. ಅದರಲ್ಲಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, ಅವುಗಳ ಪೈಕಿ 104 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 26 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1247 ಪ್ರಶ್ನೆಗಳ ಪೈಕಿ 886 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರಡಿಯಲ್ಲಿ ಅರ್ಧಗಂಟೆ ಕಾಲಾವಧಿ ಚರ್ಚೆಗಾಗಿ ಒಟ್ಟು 05 ಸೂಚನೆಗಳನ್ನು ಸ್ವೀಕರಿಸಲಾಗಿರುತ್ತದೆ.

ನಿಯಮ 72ರಡಿಯಲ್ಲಿ 142 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 7 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 65 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 330ರಡಿಯಲ್ಲಿ 99 ಸೂಚನೆಗಳನ್ನು ಸ್ವೀಕರಿಸಿದ್ದು, ಅವುಗಳ ಪೈಕಿ 1 ಸೂಚನೆಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 45 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯವೇಳೆ ಪ್ರಸ್ತಾವನೆಯ ಒಟ್ಟು 73 ಸೂಚನೆಗಳ ಪೈಕಿ 9 ಸೂಚನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ 32 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2 ವಿಧೇಯಕಗಳು ಹಾಗೂ ಅಂಗೀಕೃತ ರೂಪದಲ್ಲಿರುವ 14 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ ಹಾಗೂ 02 ವಿಧೇಯಕಗಳನ್ನು ಹಿಂಪಡೆಯಲಾಯಿತು.

ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಸಭಾನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ಸರ್ಕಾರದ ಮುಖ್ಯ ಸಚೇತಕರಿಗೆ, ಬೆಳಗಾವಿ ಜಿಲ್ಲೆಯ ಜಿಲ್ಲಾಡಳಿತ ವರ್ಗಕ್ಕೆ ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, ಸದನವನ್ನು ಅನಿರ್ದಿಷ್ಟ ಕಾಲದವರಗೆ ಮುಂದೂಡುತ್ತಿದ್ದೇನೆ.

**(ರಾಷ್ಟ್ರಗೀತೆಯೊಂದಿಗೆ ಸದನವು ಸಂಜೆ 5 ಗಂಟೆ 33 ನಿಮಿಷಗಳಿಗೆ ಅನಿರ್ದಿಷ್ಟಾವಧಿಯವರೆಗೆ ಮುಂದೂಡಲ್ಪಟ್ಟಿತು)**